ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 28 ಗುರುವಾರ 2024

ಸಂಪುಟ: 44 | ಸಂಚಿಕೆ: 339 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ-ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com


ಲೋಕಸಭಾ ಚುನಾವಣೆ-2024: ಇಂದು 14 ಕ್ಷೇತ್ರಗಳಲ್ಲಿ ಅಧಿಸೂಚನೆ ಪ್ರಕಟ

ಏ.26ರಂದು ರಾಜ್ಯದಲ್ಲಿ ನಡೆಯುವ ಮೊದಲ ಹಂತದ ಸಮರಕ್ಕೆ

ನಾಮಪತ್ರ ಸಲ್ಲಿಕೆ ಆರಂಭ

● ಮೈಸೂರು-ಕೊಡಗು, ಮಂಡ್ಯ, ಬೆಂಗಳೂರು ಗ್ರಾಮಾಂತರ ಪ್ರತಿಷ್ಠಿತ ಕ್ಷೇತ್ರಗಳು
● ಬಿಜೆಪಿ-ಜೆಡಿಎಸ್ ಮೈತ್ರಿ V/S ಕಾಂಗ್ರೆಸ್ ಹಣಾಹಣಿಗೆ ಸಜ್ಜು





ಬೆಂಗಳೂರು, ಮಾ.27(ಕೆಎಂಶಿ)- ಮೈಸೂರು-ಕೊಡಗು, ಮಂಡ್ಯ, ಚಾಮರಾಜನಗರ, ಹಾಸನ ಸೇರಿದಂತೆ ರಾಜ್ಯದ 14 ಲೋಕಸಭಾ ಕ್ಷೇತ್ರಗಳಿಗೆ ನಾಳೆಯಿಂದ (ಮಾ.28) ನಾಮಪತ್ರ ಸಲ್ಲಿಕೆ ಆರಂಭಗೊಳ್ಳಲಿದೆ.

ರಾಜ್ಯದ 28 ಲೋಕಸಭಾ ಕ್ಷೇತ್ರಗಳ ಪೈಕಿ ಮೊದಲ ಹಂತದಲ್ಲಿ 14 ಕ್ಷೇತ್ರಗಳ ವ್ಯಾಪ್ತಿಯ ಚುನಾವಣಾಧಿಕಾರಿಗಳೂ ಆಗಿರುವ ಆಯಾಯ ಜಿಲ್ಲಾಧಿಕಾರಿಗಳು ಚುನಾವಣಾ ಪ್ರಕ್ರಿಯೆ ಆರಂಭಕ್ಕೆ ಅಧಿಸೂಚನೆ ಹೊರಡಿಸಲಿದ್ದಾರೆ.

ಅಧಿಸೂಚನೆ ಹೊರಬೀಳುತ್ತಿದ್ದಂತೆ ಸ್ಪರ್ಧಾ ಕಣಕ್ಕಿಳಿಯುವ ಆಕಾಂಕ್ಷಿಗಳು ಆಯೋಗದ ನಿಯಮಾನುಸಾರ ನಾಮಪತ್ರ ಸಲ್ಲಿಕೆ ಮಾಡಬಹುದಾಗಿದೆ. ಮೈಸೂರು-ಕೊಡಗು, ಮಂಡ್ಯ ಅಲ್ಲದೆ, ಚಾಮರಾಜನಗರ, ಹಾಸನ, ಉಡುಪಿ-ಚಿಕ್ಕಮಗಳೂರು, ದಕ್ಷಿಣ ಕನ್ನಡ, ಚಿತ್ರದುರ್ಗ, ತುಮಕೂರು, ಬೆಂಗಳೂರು ಗ್ರಾಮಾಂತರ, ಬೆಂಗಳೂರು ಉತ್ತರ, ಬೆಂಗಳೂರು ಕೇಂದ್ರ, ಬೆಂಗಳೂರು ದಕ್ಷಿಣ, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಲೋಕಸಭಾ ಕ್ಷೇತ್ರಗಳಿಗೆ ಮೊದಲ ಹಂತದಲ್ಲಿ ನಾಮಪತ್ರ ಸಲ್ಲಿಕೆ ಕಾರ್ಯ ಆರಂಭಗೊಳ್ಳಲಿದೆ. ಏ.4 ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾಗಿರುತ್ತದೆ, ಏಪ್ರಿಲ್ 5 ರಂದು ನಾಮಪತ್ರ ಪರಿಶೀಲನೆ ನಡೆಯಲಿದ್ದು, ಏಪ್ರಿಲ್ 8 ರಂದು ನಾಮಪತ್ರ ಹಿಂಪಡೆಯಲು ಕೊನೆಯ ದಿನವಾಗಿದೆ.

ಏಪ್ರಿಲ್ 26ರಂದು ಎಲ್ಲಾ 14 ಕ್ಷೇತ್ರಗಳಿಗೆ ಮತದಾನ ನಡೆಯಲಿದ್ದು, ಮತದಾನ ನಡೆದ 38 ದಿನಗಳ ನಂತರ ಅಂದರೆ, ಜೂನ್ 4ರಂದು ಮತ ಎಣಿಕೆ ನಡೆದು ಅಂದೇ ಫಲಿತಾಂಶ ಪ್ರಕಟಗೊಳ್ಳಲಿದೆ. ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ನಡೆಸುವ ಉದ್ದೇಶದಿಂದ ರಾಜ್ಯವನ್ನು ಉತ್ತರ ಮತ್ತು ದಕ್ಷಿಣ ಕರ್ನಾಟಕವಾಗಿ ವಿಭಜಿಸಿರುವ ಆಯೋಗ ತಲಾ 14 ಕ್ಷೇತ್ರಗಳಿಗೆ ಎರಡು ಹಂತಗಳಲ್ಲಿ ಚುನಾವಣೆ ನಡೆಸುತ್ತಿದೆ. ಚಾಮರಾಜನಗರ, ಕೋಲಾರ, ಚಿತ್ರದುರ್ಗ ಮೂರು ಮೀಸಲು ಕ್ಷೇತ್ರಗಳಾಗಿದ್ದು, ಉಳಿದವು ಸಾಮಾನ್ಯ ಕ್ಷೇತ್ರಗಳಾಗಿವೆ. ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಿಂದ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ. ಮಂಡ್ಯದಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಕುಮಾರಸ್ವಾಮಿ, ● 6ನೇ ಪುಟಕ್ಕೆ

ಮೈಸೂರು-ಕೊಡಗು, ಮಂಡ್ಯ, ಚಾಮರಾಜನಗರ, ಹಾಸನ ಲೋಕಸಭಾ ಕ್ಷೇತ್ರದಲ್ಲಿ

ನಾಮಪತ್ರ ಸಲ್ಲಿಕೆಗೆ ಸಕಲ ಸಿದ್ಧತೆ

ಉಮೇದುವಾರಿಕೆ ಸಲ್ಲಿಸಲು ಏಪ್ರಿಲ್ 4 ಕಡೇ ದಿನ, ಏ.5 ಪರಿಶೀಲನೆ, ಏ.8 ವಾಪಸ್ ಪಡೆಯಲು ಕಡೇ ದಿನ, ಏ. 26 ಮತದಾನ, ಜೂನ್ 4ಕ್ಕೆ ಫಲಿತಾಂಶ, ಜೂನ್ 6 ಚುನಾವಣಾ ಪ್ರಕ್ರಿಯೆಗೆ ತೆರೆ



ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸುದ್ದಿಗೋಷ್ಠಿ ನಡೆಸಿದರು. ಎಡಿಸಿ ಶಿವರಾಜ್, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ ಹಾಗೂ ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಮಾ. 27(ಆರ್‌ಕೆ)- 2024ರ ಲೋಕಸಭಾ ಸಾರ್ವತ್ರಿಕ ಚುನಾವಣೆಗೆ ನಾಳೆ (ಮಾ. 28)ಯಿಂದ ಮೈಸೂರು-ಕೊಡಗು, ಮಂಡ್ಯ, ಚಾಮರಾಜನಗರ ಮತ್ತು ಹಾಸನ ಕ್ಷೇತ್ರಗಳಿಗೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಲಿದೆ.

ಇದಕ್ಕೆ ಸಂಬಂಧಿಸಿದಂತೆ ಆಯಾಯ ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿಗಳು ಅಗತ್ಯವಿರುವ ವ್ಯವಸ್ಥೆಗಳನ್ನು ಮಾಡಿಕೊಂಡಿದ್ದಾರೆ. ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ನಾಮಪತ್ರ ಸಲ್ಲಿಕೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ಮೈಸೂರು ಜಿಲ್ಲಾ ಚುನಾವಣಾಧಿಕಾರಿಯೂ ಆದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಹೊಸ ಡಿಸಿ ಕಚೇರಿ ಸಭಾಂಗಣದಲ್ಲಿ ಇಂದು ಮಾಹಿತಿ ನೀಡಿದರು. ನಾಳೆಯಿಂದ ಏಪ್ರಿಲ್ 4ರ ಮಧ್ಯಾಹ್ನ 3 ಗಂಟೆವರೆಗೆ ನಾಮಪತ್ರ ಸಲ್ಲಿಸಬಹುದಾಗಿದ್ದು, ಏಪ್ರಿಲ್ 5ರಂದು ನಾಮಪತ್ರ ಪರಿಶೀಲನೆ ನಡೆಯಲಿದೆ. ಏಪ್ರಿಲ್ 8ರಂದು ಮಧ್ಯಾಹ್ನ 3 ಗಂಟೆವರೆಗೆ ಉಮೇದುವಾರಿಕೆ ವಾಪಸ್ ಪಡೆಯಲು ಅವಕಾಶವಿದೆ. ಏಪ್ರಿಲ್ 26ರಂದು ಮತದಾನ ನಡೆಯಲಿದ್ದು, ಜೂನ್ 4ರಂದು ಮತ ಎಣಿಕೆ ನಡೆದು ಅಂದೇ ಫಲಿತಾಂಶ ಪ್ರಕಟವಾಗಲಿದೆ ಎಂದರು.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿಗಳ ಕಚೇರಿ ಸಂಕೀರ್ಣದ ಮೊದಲ ಮಹಡಿಯ ಕೊಠಡಿ ಸಂಖ್ಯೆ 103ರಲ್ಲಿ ಸ್ಥಾಪಿಸಿರುವ ಚುನಾವಣಾಧಿಕಾರಿಗಳ ಕಚೇರಿಯಲ್ಲಿ ಮೈಸೂರು-ಕೊಡಗು ಕ್ಷೇತ್ರ, ಮಂಡ್ಯ ಕ್ಷೇತ್ರಕ್ಕೆ ಮಂಡ್ಯ ಜಿಲ್ಲಾಧಿಕಾರಿಗಳ ಕಚೇರಿ, ಚಾಮರಾಜನಗರಕ್ಕೆ ಅಲ್ಲಿನ ಡಿಸಿ ಕಚೇರಿ ಹಾಗೂ ಹಾಸನ ಕ್ಷೇತ್ರಕ್ಕೆ ಹಾಸನ ಡಿಸಿ ಕಚೇರಿಯಲ್ಲಿ ಮಾರ್ಚ್ 28ರಿಂದ ಏಪ್ರಿಲ್ 4ರವರೆಗೆ ಬೆಳಗ್ಗೆ 11ರಿಂದ ಮಧ್ಯಾಹ್ನ 3 ಗಂಟೆವರೆಗೆ ನಾಮಪತ್ರ ಸಲ್ಲಿಸಬಹುದಾಗಿದೆ. ನಾಮಪತ್ರ ಸಲ್ಲಿಸುವವರು ಭಾರತದ ಪ್ರಜೆಯಾಗಿದ್ದು, ಮತದಾರರಾಗಿರಬೇಕು. 25 ವರ್ಷ ಮೇಲ್ಪಟ್ಟ ನಾಗರಿಕರು ನಮೂನೆ 2ಎರಲ್ಲಿ ಭರ್ತಿ ಮಾಡಿ ನಾಮಪತ್ರ ಸಲ್ಲಿಸಬೇಕು. ● 2ನೇ ಪುಟಕ್ಕೆ

ಚಾಮರಾಜನಗರ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್

ಇಂದು ಅಧಿಕೃತ ಘೋಷಣೆ



ತಿ.ನರಸೀಪುರ, ಮಾ. 27- ಕಾಂಗ್ರೆಸ್ ಹೈಕಮಾಂಡ್ ಅಧಿಕೃತವಾಗಿ ಇನ್ನು ಘೋಷಿಸದೇ ಇದ್ದರೂ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಪುತ್ರ ಸುನೀಲ್ ಬೋಸ್ ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಆಗುವುದು ಬಹುತೇಕ ಖಚಿತವಾಗಿದೆ.

ನಾಳೆ (ಗುರುವಾರ) ಕಾಂಗ್ರೆಸ್ ಹೈಕಮಾಂಡ್ ಸುನೀಲ್ ಬೋಸ್ ಅವರ ಹೆಸರನ್ನು ಅಧಿಕೃತವಾಗಿ ಘೋಷಣೆ ಮಾಡಲಿದೆ ಎಂದು ಮೂಲಗಳು ತಿಳಿಸಿವೆ. ಅಭ್ಯರ್ಥಿಯಾಗಿ ತಮ್ಮನ್ನು ಆಯ್ಕೆ ಮಾಡಲಾಗಿದೆ ಎಂದು ಈಗಾಗಲೇ ಕಾಂಗ್ರೆಸ್ ವರಿಷ್ಠರು ಸುನೀಲ್ ಬೋಸ್ ಅವರಿಗೆ ತಿಳಿಸಿದ್ದಾರೆ. ಆದರೂ, ಕೆಲವು ಕಾರಣಗಳಿಂದಾಗಿ ಇನ್ನೂ ಅಧಿಕೃತ ಘೋಷಣೆ ಹೊರ ಬಿದ್ದಿಲ್ಲ ಎಂದು ಹೇಳಲಾಗಿದೆ.

ಇದಕ್ಕೆ ಪೂರಕವೆಂಬಂತೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಇಂದು ಕೊಳ್ಳೇಗಾಲ, ಯಳಂದೂರು ಮುಂತಾದೆಡೆ ಪಕ್ಷದ ಮುಖಂಡರನ್ನು ಭೇಟಿಯಾಗಿ ತಮ್ಮ ಮಗನ ಗೆಲುವಿಗೆ ಶ್ರಮಿಸುವಂತೆ ಕೋರುತ್ತಿದ್ದಾರೆ. ಮತ್ತೊಂದೆಡೆ ಇಂದು ನಂಜನಗೂಡು ಶಾಸಕ ದರ್ಶನ್ ಧ್ರುವನಾರಾಯಣ್ ಮತ್ತು ಗುಂಡ್ಲುಪೇಟೆ ಶಾಸಕ ಗಣೇಶ್‌ಪ್ರಸಾದ್ ಅವರನ್ನು ಭೇಟಿ ಮಾಡಿ ಬೆಂಬಲ ಕೋರಿದ ಸುನೀಲ್ ಬೋಸ್, ವರಿಷ್ಠರು ತನ್ನನ್ನು ಚಾಮರಾಜನಗರ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿದ್ದು, ಏಪ್ರಿಲ್ 3ರಂದು ನಾಮಪತ್ರ ಸಲ್ಲಿಸುವುದಾಗಿ ತಿಳಿಸಿದ್ದಾರೆ. ಮತ್ತೊಂದೆಡೆ ಚಾಮರಾಜನಗರ ಕ್ಷೇತ್ರದ ಟಿಕೆಟ್‌ಗಾಗಿ ಸುನೀಲ್ ಬೋಸ್‌ರೊಂದಿಗೆ ತೀವ್ರ ಪೈಪೋಟಿ ನಡೆಸಿದ್ದ ಕೊಳ್ಳೇಗಾಲ ಮಾಜಿ ಶಾಸಕ ಜಿ.ಎನ್. ನಂಜುಂಡಸ್ವಾಮಿ ಅವರು ಸುನೀಲ್ ಬೋಸ್ ● 6ನೇ ಪುಟಕ್ಕೆ

ರೋಡ್ ಡಿವೈಡರ್‌ಗೆ ಬೈಕ್ ಡಿಕ್ಕಿ: ಇಬ್ಬರು ವಿದ್ಯಾರ್ಥಿಗಳು ದುರ್ಮರಣ



ಹರ್ಷ ಚರಣ್

ಮೈಸೂರು, ಮಾ. 27(ಆರ್‌ಕೆ)-ರಸ್ತೆ ವಿಭಜಕಕ್ಕೆ ಬೈಕ್ ಅಪ್ಪಳಿಸಿದ ಪರಿಣಾಮ ವಿದ್ಯಾರ್ಥಿಗಳಿಬ್ಬರು ಸಾವನ್ನಪ್ಪಿರುವ ಘಟನೆ ಮೈಸೂರಿನ ಚದುರಂಗ ರಸ್ತೆಯಲ್ಲಿ ಕಳೆದ ತಡರಾತ್ರಿ ಸಂಭವಿಸಿದೆ.

ಹೆಚ್.ಡಿ.ಕೋಟೆ ತಾಲೂಕು, ಬಿ.ಮಟಗೇರಿಯ ಲೇಟ್ ಸಿ.ಎಲ್.ನಾಗರಾಜು ಅವರ ಪುತ್ರ ಎಂ.ಎನ್.ಹರ್ಷ (19) ಹಾಗೂ ನೂರಲಕುಪ್ಪೆ ಗ್ರಾಮದ ಸುರೇಶ ಅವರ ಮಗ ಎನ್.ಎಸ್.ಚರಣ್(19) ಸಾವನ್ನಪ್ಪಿದವರು. ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಪದವಿ ಕಾಲೇಜಿನಲ್ಲಿ ಪ್ರಥಮ ಬಿ.ಕಾಂ ಓದುತ್ತಿರುವ ಹರ್ಷ ಮತ್ತು ಚರಣ್, ಟಿ.ಕೆ.ಬಡಾವಣೆಯ ಮಹಾವೀರ ವಿದ್ಯಾರ್ಥಿ ನಿಲಯದಲ್ಲಿ ವಾಸ್ತವ್ಯ ಹೂಡಿದ್ದರು. ಮಂಗಳವಾರ ಮಧ್ಯರಾತ್ರಿ 12 ಗಂಟೆ ಸುಮಾರಿನಲ್ಲಿ ಬೋಗಾದಿ ರಸ್ತೆಯಿಂದ ಹುಣಸೂರು ರಸ್ತೆ ಕಡೆಗೆ ಕೆಟಿಎಂ ಬೈಕಿನಲ್ಲಿ ಬರುತ್ತಿದ್ದಾಗ ನಿಯಂತ್ರಣ ತಪ್ಪಿದ ಬೈಕ್, ಚದುರಂಗ ರಸ್ತೆಯ ಬೇಕರಿ ಬಳಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದ ಪರಿಣಾಮ ಸವಾರರು ವಾಹನದ ಜೊತೆ ಸುಮಾರು 50 ಮೀಟರ್ ದೂರ ಹಾರಿ ಬಿದ್ದರು.

ತಲೆಗೆ ತೀವ್ರ ಗಾಯಗಳಾಗಿ ರಕ್ತಸ್ರಾವದಿಂದ ಒದ್ದಾಡುತ್ತಿದ್ದ ಅವರನ್ನು ಸಾರ್ವಜನಿಕರ ನೆರವಿನೊಂದಿಗೆ ವಿ.ವಿ. ಪುರಂ ಸಂಚಾರ ಠಾಣೆ ಪೊಲೀಸರು ಕೆ.ಆರ್. ಆಸ್ಪತ್ರೆಗೆ ಕರೆದೊಯ್ದರಾದರೂ, ತಪಾಸಣೆ ನಡೆಸಿದ ವೈದ್ಯರು, ಮಾರ್ಗ ಮಧ್ಯೆಯೇ ಅವರು ಸಾವನ್ನಪ್ಪಿರುವುದಾಗಿ ಪ್ರಕಟಿಸಿದರು. ರೋಡ್ ಡಿವೈಡರ್‌ಗೆ ಅಪ್ಪಳಿಸಿದ ಬೈಕ್ ಸಂಪೂರ್ಣ ಜಖಂಗೊಂಡಿದ್ದು, ವಿ.ವಿ.ಪುರಂ ಸಂಚಾರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ಮೃತಪಟ್ಟ ವಿದ್ಯಾರ್ಥಿಗಳು ಮಧ್ಯರಾತ್ರಿ ಹೆಲ್ಮೆಟ್ ಧರಿಸದೇ ಅತೀ ವೇಗವಾಗಿ ಬೈಕ್ ಚಾಲನೆ ಮಾಡಿಕೊಂಡು ಹೋಗಿ ಅಪಘಾತಕ್ಕೆ ಪ್ರಮುಖ ಕಾರಣ ಎಂದು ಪ್ರಕರಣ ದಾಖಲಿಸಿಕೊಂಡಿರುವ ವಿ.ವಿ. ಪುರಂ ಸಂಚಾರ ಠಾಣೆ ಪೊಲೀಸರು ತಿಳಿಸಿದ್ದಾರೆ. ಹರ್ಷ ತಂದೆ ಸಿ.ಎಲ್.ನಾಗರಾಜು ಅವರೂ ವರ್ಷದ ಹಿಂದೆ ಇದೇ ರೀತಿ ರಸ್ತೆ ಅಪಘಾತದಲ್ಲಿ ಸಾವನ್ನಪ್ಪಿದ್ದರು ಎನ್ನಲಾಗಿದೆ. ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಪೊಲೀಸರು ಎರಡೂ ದೇಹಗಳನ್ನು ವಾರಸುದಾರರಿಗೆ ಒಪ್ಪಿಸಿದರು.

ಅನುದಾನ ಹಂಚಿಕೆಯಲ್ಲಿ ಕೇಂದ್ರದಿಂದ

ಕರ್ನಾಟಕಕ್ಕೆ ಘೋರ ಅನ್ಯಾಯ

ಬಹಿರಂಗ ಚರ್ಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆಹ್ವಾನ

● ತಮ್ಮದೇ ಧಾಟಿಯಲ್ಲಿ ನಿರ್ಮಲಾ ಸೀತಾರಾಮನ್ ತರಾಟೆಗೆ ● ಹೆಚ್.ಡಿ.ದೇವೇಗೌಡರದ್ದು ಅನುಕೂಲ ಸಿಂಧು ರಾಜಕಾರಣ ● ರಾಜೀವ್ ಸೇರಿಸಿಕೊಳ್ಳುವಂತೆ ಎಸ್.ಟಿ.ಸೋಮಶೇಖರ್ ಶಿಫಾರಸು!



ಮೈಸೂರಿನ ವಿದ್ಯಾರಣ್ಯಪುರಂನ ಭೂತಾಳೆ ಮೈದಾನದಲ್ಲಿ ಬುಧವಾರ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡ ರಾಜೀವ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾಂಗ್ರೆಸ್ ಬಾವುಟ ನೀಡಿ ಸ್ವಾಗತಿಸಿದರು.

ಸೋಲಿನ ಭಯದಿಂದ ಬಿಜೆಪಿ-ಜೆಡಿಎಸ್ ಒಂದಾಗಿದ್ದಾರೆ

ಮೈಸೂರು: ಜೆಡಿಎಸ್‌ನವರು ಕೋಮುವಾದಿ ಬಿಜೆಪಿ ಜೊತೆ ಕೈಜೋಡಿಸಿದ್ದಾರೆ. ತಾವು ಮೂರು ಕ್ಷೇತ್ರ ತೆಗೆದುಕೊಂಡು ಅಳಿಯನನ್ನು ಹೆಚ್.ಡಿ.ದೇವೇಗೌಡರು ಬಿಜೆಪಿಗೆ ಕಳುಹಿಸಿದ್ದಾರೆ. ಸೋಲುವ ಭಯದಿಂದ ಇವರಿಬ್ಬರು ಒಂದಾಗಿದ್ದಾರೆ. ಇಂತಹವರನ್ನು ಸೋಲಿಸಬೇಕು ಎಂದು ಮತದಾರರಿಗೆ ಮುಖ್ಯ ಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.

ಕರ್ನಾಟಕದ ಬಗ್ಗೆ ಇಷ್ಟೆಲ್ಲಾ ಪ್ರೀತಿ ತೋರುವ ಹೆಚ್.ಡಿ.ದೇವೇಗೌಡರು ಮೇಕೆದಾಟು ಯೋಜನೆಯನ್ನು ಬಿಜೆಪಿಯವರ ಕೈಲಿ ಏಕೆ ಮಾಡಿಸಲಿಲ್ಲ ಎಂದು ಪ್ರಶ್ನಿಸಿದ ಸಿದ್ದರಾಮಯ್ಯ, ಮೋದಿ ಪ್ರಧಾನಿಯಾದರೆ ● 2ನೇ ಪುಟಕ್ಕೆ

ಮೈಸೂರು, ಮಾ.27(ಬಿಎಲ್‌ಯು)- ಕೇಂದ್ರ ಸರ್ಕಾರದಿಂದ ಬರಬೇಕಿರುವ ಅನುದಾನಕ್ಕಾಗಿ ಸಮರ ಸಾರಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಇಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್‌ಗೆ ಬಹಿರಂಗ ಸವಾಲು ಹಾಕಿದರು. ಒಂದೇ ವೇದಿಕೆಗೆ ಬನ್ನಿ ಚರ್ಚೆ ಮಾಡೋಣ, ಇದರಿಂದ ಜನರಿಗೆ ಸತ್ಯಾಂಶ ಗೊತ್ತಾಗಲಿ ಎಂದು ಸಿದ್ದರಾಮಯ್ಯ ಆಮಂತ್ರಣ ನೀಡಿದರು.

ಮೈಸೂರಿನ ವಿದ್ಯಾರಣ್ಯಪುರಂನ ಭೂತಾಳೆ ಮೈದಾನದಲ್ಲಿ ಇಂದು ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೊನ್ನೆ ಮೈಸೂರಿಗೆ ಬಂದಿದ್ದ ನಿರ್ಮಲಾ ಸೀತಾರಾಮನ್ ಕರ್ನಾಟಕಕ್ಕೆ ಕೇಂದ್ರ ಸರ್ಕಾರ ನೀಡಬೇಕಿರುವ ಅನುದಾನ ಬಾಕಿ ಇಲ್ಲ ಎಂದು ಸುಳ್ಳು ಹೇಳಿ ಹೋಗಿದ್ದಾರೆ. ಹೀಗೆ ಸುಮ್ಮನೆ ಸುಳ್ಳು ಹೇಳಿಕೊಂಡು ತಿರುಗಾಡಬೇಡಿ. ಬಹಿರಂಗ ಚರ್ಚೆಗೆ ಬನ್ನಿ, ಆಗ ಸತ್ಯಾಂಶ ಏನೆಂದು ಜನರಿಗೆ ಮನವರಿಕೆ ಆಗಲಿದೆ ಎಂದರು. ಗ್ಯಾರಂಟಿ ಯೋಜನೆಗೆ ಕೇಂದ್ರ ಸರ್ಕಾರದ ಹಣ ಬಳಕೆ ಮಾಡುತ್ತಿದ್ದೇವೆ ● 2ನೇ ಪುಟಕ್ಕೆ

ಪ್ರತಾಪ ಸಿಂಹ ಅಲ್ಲ, ಪ್ರಲಾಪ ಸಿಂಹ

ನಾನು ಮಾಡಿರುವ ಬಹಳಷ್ಟು ಯೋಜನೆಗಳನ್ನು ನಾನು ಮಾಡಿದ್ದೇನೆ ಎಂದು ಸಂಸದ ಪ್ರತಾಪ್ ಸಿಂಹ ಹೇಳಿಕೊಂಡು ಓಡಾಡುತ್ತಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿಕಾರಿದರು. ಮೈಸೂರಿಗೆ ಜಯದೇವ ಆಸ್ಪತ್ರೆ ತಂದೆ, ಮಕ್ಕಳ ಆಸ್ಪತ್ರೆ ತಂದೆ, ಹೊಸ ಜಿಲ್ಲಾಧಿಕಾರಿ ಕಚೇರಿ ಕಟ್ಟಿಸಿದೆ, ಮಹಾರಾಣಿ ಕಾಲೇಜು ನಿರ್ಮಿಸಿದೆ, ಮಹಾರಾಣಿ ಕಾಲೇಜಿನ ಹಾಸ್ಟೆಲ್ ನಿರ್ಮಾಣ ಮಾಡಿದೆ. ಹೀಗೆ ಹೇಳುತ್ತಾ ಹೋದರೆ ಬಹಳಷ್ಟು ಅಭಿವೃದ್ಧಿ ಕಾರ್ಯಗಳ ಪಟ್ಟಿ ಇದೆ ಎಂದರು. ಇದನ್ನೆಲ್ಲಾ ನಾನು ಮಾಡಿದೆ ಅಂತ ಆ ಪ್ರತಾಪ್ ಸಿಂಹ ಹೇಳಿಕೊಂಡು ಓಡಾಡುತ್ತಾರೆ. ಆತ ಪ್ರತಾಪಸಿಂಹ ಅಲ್ಲ, ಪ್ರಲಾಪ ಸಿಂಹ ಎಂದು ಸಿದ್ದರಾಮಯ್ಯ ಗೇಲಿ ಮಾಡಿದರು.

ಮೈಸೂರಲ್ಲಿ ಬಿಜೆಪಿ-ಜೆಡಿಎಸ್ ಸಮನ್ವಯ ಸಭೆ

ಎನ್‌ಡಿಎ ಅಭ್ಯರ್ಥಿಗಳ ಗೆಲುವಿನ ಶಪಥ

ಉಭಯ ಪಕ್ಷಗಳ ನಾಯಕರಿಂದ ಒಗ್ಗಟ್ಟು-ಗೆಲುವಿನ ಮಹಾಮಂತ್ರ ● ಕಾಂಗ್ರೆಸ್ ಸರ್ಕಾರದ ನಿಷ್ಕ್ರೀಯತೆ ಬಗ್ಗೆ ಮಾಜಿ ಸಿಎಂ ಕುಮಾರಸ್ವಾಮಿ ವಾಗ್ದಾಳಿ ● ಪ್ರಧಾನಿ ಮೋದಿ-ಮಾಜಿ ಪ್ರಧಾನಿ ದೇವೇಗೌಡರ ನೇತೃತ್ವದಲ್ಲಿ ರಾಜ್ಯದ ಎಲ್ಲಾ ಸಮಸ್ಯೆಗಳಿಗೆ ಶಾಶ್ವತ ಪರಿಹಾರದ ಭರವಸೆ



ಬಿಜೆಪಿ-ಜೆಡಿಎಸ್ ಮೈತ್ರಿಕೂಟದ ಸಮನ್ವಯ ಸಭೆಯಲ್ಲಿ ಉಭಯ ಪಕ್ಷದ ನಾಯಕರು ಒಗ್ಗಟ್ಟಿನ ಬಲ ಪ್ರದರ್ಶಿಸಿದರು. (ಎಡದಿಂದ)ಮಾಜಿ ಸಚಿವರಾದ ಸಾ.ರಾ.ಮಹೇಶ್, ಎನ್.ಮಹೇಶ್, ಸಿ.ಎನ್.ಅಶ್ವಥ್ ನಾರಾಯಣ್, ಚಾ.ನಗರ ಬಿಜೆಪಿ ಅಭ್ಯರ್ಥಿ ಬಾಲರಾಜ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ, ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್, ಸಂಸದ ಪ್ರತಾಪ್ ಸಿಂಹ ಇನ್ನಿತರರಿದ್ದಾರೆ.

ಮೈಸೂರು, ಮಾ.27(ಎಂಕೆ)-ನಾಡ ಅಧಿದೇವತೆ ತಾಯಿ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಲೋಕಸಭಾ ಚುನಾವಣೆ ರಣಕಹಳೆ ಮೊಳಗಿಸಿರುವ ಬಿಜೆಪಿ-ಜೆಡಿಎಸ್ ಮೈತ್ರಿಕೂಟದ ನಾಯಕರು, ಮುಖಂಡರು, ಕಾರ್ಯಕರ್ತರು ಒಗ್ಗಟ್ಟಿನ ಬಲ ಪ್ರದರ್ಶಿಸುವ ಮೂಲಕ ರಾಜ್ಯದ 28 ಲೋಕಸಭಾ ಕ್ಷೇತ್ರಗಳಲ್ಲಿಯೂ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಗಳ ಗೆಲುವಿಗಾಗಿ ಶಪಥ ಮಾಡಿದರು.

ಮೈಸೂರು ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಮೈದಾನದಲ್ಲಿರುವ ಕಾಳಿಂಗರಾವ್ ಸಭಾ ಮಂಟಪದಲ್ಲಿ ಲೋಕಸಭಾ ಚುನಾವಣೆ ಹಿನ್ನೆಲೆ ಬುಧವಾರ ನಡೆದ ಬಿಜೆಪಿ-ಜೆಡಿಎಸ್ ಮೊದಲ ಸಮನ್ವಯ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿ ಹಾಗೂ ಮಂಡ್ಯ ಲೋಕಸಭಾ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ. ದೇವೇಗೌಡ, ಸಂಸದ ಪ್ರತಾಪ್ ಸಿಂಹ, ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್, ಚಾ.ನಗರ ಲೋಕಸಭಾ ಕ್ಷೇತ್ರ ಬಿಜೆಪಿ ಅಭ್ಯರ್ಥಿ ಬಾಲರಾಜ್ ಸೇರಿದಂತೆ ಹಳೇ ಮೈಸೂರು ಭಾಗದ ಶಾಸಕರು, ಮಾಜಿ ಶಾಸಕರು, ಮುಖಂಡರು ಶಕ್ತಿ ಪ್ರದರ್ಶನದ ಮೂಲಕ ಎದುರಾಳಿ ಕಾಂಗ್ರೆಸ್‌ಗೆ ಪಂಥಾಹ್ವಾನ ನೀಡಿದರು.

ಇಲ್ಲಿಂದಲೇ 28 ಕ್ಷೇತ್ರದ ಗೆಲುವು...

"ಚಾಮುಂಡೇಶ್ವರಿ ತಾಯಿ ನನ್ನಿಂದ ನುಡಿಸಿದಂತೆ ನಾನು ನುಡಿಯುತ್ತೇನೆ. ನೀವೆಲ್ಲರೂ ನೂರಕ್ಕೆ ನೂರು ಮೈಸೂರು ಮಹಾರಾಜರ ಕೊಡುಗೆ ಮರೆಯಲೂ ಸಾಧ್ಯವೇ ಇಲ್ಲ. ಅವರ ಕೊಡುಗೆಗೆ ಒಂದು ವೋಟ್ ಹಾಕುವುದು ಬೇಡ್ವಾ... ಚಾ.ನಗರ ಕ್ಷೇತ್ರದಲ್ಲಿ ಹಾಲಿ ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಅವರನ್ನು ಉಳಿಸಲು ಬಾಲರಾಜ್ ಗೆಲ್ಲಿಸಿ. ನೀವೇ ಮೋದಿಯಾಗಿ ಅಂದುಕೊಂಡಂತೆ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಿಂದಲೇ ರಾಜ್ಯದ 28 ಕ್ಷೇತ್ರ ಗೆಲುವು ಸಾಧ್ಯವಾಗಲಿದೆ.

-ಜಿ.ಟಿ.ದೇವೇಗೌಡ, ಶಾಸಕರು, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ

ಈ ವೇಳೆ ಸಭೆಯನ್ನುದ್ದೇಶಿಸಿ ಮಾತನಾಡಿದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ರಾಜ್ಯದಲ್ಲಿ ಜನಪರ, ಜಾತ್ಯಾತೀತ ಸರ್ಕಾರದ ಪುನರ್ ಸ್ಥಾಪನೆಗಾಗಿ ಮೈತ್ರಿಯಾಗಿದ್ದೇವೆ. ನಾಡಿನ ಆರೂವರೆ ಕೋಟಿ ಜನತೆಯ ಧನಿಯಾಗಿ ಕೇಂದ್ರದಿಂದ ರಾಜ್ಯದ ಅಭಿವೃದ್ಧಿಗಾಗಿ ಮೈತ್ರಿ ಸೇರಿದ್ದೇವೆ. ನಾಡಿನ ಜನತೆ ಸಣ್ಣ ಮೊತ್ತದ ಹಣಕ್ಕೆ ಮರುಳಾಗದೆ ● 6ನೇ ಪುಟಕ್ಕೆ

ಮೈಸೂರು ಮಿತ್ರ ಗುರುವಾರ 28 ಮಾರ್ಚ್ 2024

ಒಂದನೇ ಪುಟದಿಂದ

ಕರ್ನಾಟಕಕ್ಕೆ ಘೋರ ಅನ್ಯಾಯ

ಎಂಬುದು ಶುದ್ಧ ಸುಳ್ಳು. ಗ್ಯಾರಂಟಿ ಯೋಜನೆಗೆ ಕೇಂದ್ರ ಸರ್ಕಾರದ ನಯಾ ಪೈಸೆ ಹಣ ಬಳಸುತ್ತಿಲ್ಲ. ಕಳೆದ ವರ್ಷ ಗ್ಯಾರಂಟಿ ಯೋಜನೆಗೆ 36 ಸಾವಿರ ಕೋಟಿ ನೀಡಿದ್ದೆವು. ಈ ವರ್ಷ ಬಜೆಟ್‌ನಲ್ಲಿ 59,009 ಕೋಟಿ ರೂಪಾಯಿ ಮೀಸಲಿಟ್ಟಿದ್ದೇವೆ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು. ಕೇಂದ್ರ ಸರ್ಕಾರದಿಂದ ಹಣ ಬಾಕಿ ಉಳಿಸಿಕೊಂಡಿಲ್ಲ ಎಂದು ದೇವರ ಮುಂದೆ ಪ್ರಮಾಣ ಮಾಡಿ. ನಾನಂತೂ ದೇವರ ಮೇಲೆ ಪ್ರಮಾಣ ಮಾಡಲ್ಲ. ನಿಮಗೆ ದೇವರ ಮೇಲೆ ನಂಬಿಕೆ ಇದ್ದರೆ ಪ್ರಮಾಣ ಮಾಡಿ ಎಂದು ಮತ್ತೊಮ್ಮೆ ಸವಾಲು ಹಾಕಿದರು.

ಭದ್ರಾ ಮೇಲ್ದಂಡೆ ಯೋಜನೆಗೆ ನಯಾ ಪೈಸೆ ಕೊಟ್ಟಿದ್ದರೆ ತೋರಿಸಿ. ಬೇಕಿದ್ದರೆ ಬಜೆಟ್ ಕಾಪಿ ಹಿಡಿದುಕೊಂಡು ಚರ್ಚೆಗೆ ಬನ್ನಿ ಎಂದು ಸರಣಿ ಸವಾಲು ಹಾಕಿದ ಸಿದ್ದರಾಮಯ್ಯ, ನಮಗೆ ಬರಗಾಲದ ಒಂದು ರೂಪಾಯಿ ಪರಿಹಾರದ ಹಣ ಬಿಡುಗಡೆ ಮಾಡಿದ್ರಾ ತಾಯಿ. ಕರ್ನಾಟಕದ ಜನರನ್ನು ಅಲಕ್ಷ್ಯದಿಂದ ನೋಡಿದ್ದೀರಿ, ನಮಗೆ ಮಲತಾಯಿ ಧೋರಣೆ ತೋರಿಸುತ್ತಿದ್ದೀರಾ. ಯಾಕಮ್ಮ ಸುಳ್ಳು ಹೇಳಿದ್ರಿ!, ನಿರ್ಮಲಾ ಸೀತಾರಾಮ್ ತಾಯಿ ಯಾಕಮ್ಮ ಸುಳ್ಳು ಹೇಳಿದ್ದೀರಿ, ಬಜೆಟ್‌ನಲ್ಲಿ ಘೋಷಿಸಿದಂತೆ ಜಾರಿಗೊಳಿಸಿದ್ದೀರಾ ಮಿಸಸ್ ನಿರ್ಮಲಾ ಸೀತಾರಾಮನ್ ಎಂದು ತಮ್ಮದೇ ಧಾಟಿಯಲ್ಲಿ, ಆಡು ಭಾಷೆಯಲ್ಲಿ ತೀವ್ರ ತರಾಟೆಗೆ ತೆಗೆದುಕೊಂಡರು.

ಎನ್‌ಡಿಆರ್‌ಎಫ್ ಫಂಡ್‌ನಿಂದ ನಯಾ ಪೈಸೆ ಬಂದಿಲ್ಲ, ಈ ಮೂಲಕ ಕರ್ನಾಟಕದ ಜನರಿಗೆ ದ್ರೋಹ ಬಗೆದಿದ್ದೀರಾ. ಇದರಿಂದ ನಾನು ಸುಪ್ರೀಂಕೋರ್ಟ್ ಮೊರೆ ಹೋಗಿದ್ದೇವೆ. ಇಷ್ಟೆಲ್ಲಾ ಕರ್ನಾಟಕಕ್ಕೆ ಅನ್ಯಾಯವಾದರೂ ಬಿಜೆಪಿಯ 25 ಸಂಸದರು ತುಟಿ ಬಿಚ್ಚಲಿಲ್ಲ ಎಂದು ವಾಗ್ದಾಳಿ ನಡೆಸಿದರು.

ಬಿಜೆಪಿ-ಜೆಡಿಎಸ್ ಒಂದಾಗಿದ್ದಾರೆ

ದೇಶ ಬಿಟ್ಟು ಹೋಗುತ್ತೇನೆ. ಇನ್ನೊಂದು ಜನ್ಮವಿದ್ದರೆ ಮುಸ್ಲಿಂನಾಗಿ ಹುಟ್ಟುತ್ತೇನೆ ಎಂದು ಹೇಳುತ್ತಿದ್ದರು. ಆದರೆ ಈಗ ಕೋಮುವಾದಿ ಬಿಜೆಪಿ ಜೊತೆ ಸೇರಿಕೊಂಡಿದ್ದಾರೆ. ದೇವೇಗೌಡರ ಅನುಕೂಲ ಸಿಂಧು ರಾಜಕಾರಣಕ್ಕೆ ಇದಕ್ಕಿಂತ ಸ್ಪಷ್ಟ ಉದಾಹರಣೆ ಬೇಕೇ ಎಂದು ಮರು ಪ್ರಶ್ನಿಸಿದರು. ಕಾಂಗ್ರೆಸ್ ಸೇರುವಂತೆ ಈ ಹಿಂದೆಯೇ ನಾನು ರಾಜೀವ್‌ಗೆ ಆಹ್ವಾನಿಸಿದ್ದೆ. ಆದರೆ ಈಗ ಕಾಂಗ್ರೆಸ್‌ಗೆ ಸೇರಿಸಿಕೊಳ್ಳುವಂತೆ ಶಾಸಕ ಎಸ್.ಟಿ.ಸೋಮಶೇಖರ್ ಶಿಫಾರಸು ಮಾಡಿದ್ದರು. ಅದರಂತೆ ಈಗ ರಾಜೀವ್ ಅವರನ್ನು ಕಾಂಗ್ರೆಸ್‌ಗೆ ಸೇರಿಸಿಕೊಳ್ಳುತ್ತಿದ್ದೇನೆ. ಯಾವುದೇ ಷರತ್ತು ಇಲ್ಲದೆ ಕಾಂಗ್ರೆಸ್ ಪಕ್ಷದ ತತ್ವ, ಸಿದ್ಧಾಂತ ಒಪ್ಪಿ ರಾಜೀವ್ ಕಾಂಗ್ರೆಸ್ ಸೇರಿದ್ದಾರೆ ಎಂದು ಹೇಳಿದರು.

ಮುಂದೆ ಕೆ.ಆರ್.ಕ್ಷೇತ್ರದಲ್ಲಿ ರಾಜೀವ್ ಕಾಂಗ್ರೆಸ್ ಟಿಕೆಟ್ ಕೇಳಬಹುದು ಎಂಬ ಯಾವುದೇ ಲೆಕ್ಕಾಚಾರ ಇಟ್ಟುಕೊಳ್ಳದೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ರಾಜೀವ್ ಸೇರ್ಪಡೆಗೆ ಆಕ್ಷೇಪಿಸದೆ ಸ್ವಾಗತ ಕೋರಿದರು. ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ಕೋಮುವಾದಿ ವರ್ತನೆಯಿಂದ ಬೇಸತ್ತು ಇವರೆಲ್ಲಾ ಕಾಂಗ್ರೆಸ್ ಸೇರಿದ್ದು, ಇವರನ್ನು ಗೌರವಯುತವಾಗಿ ನಡೆಸಿಕೊಳ್ಳಲಾಗುವುದು ಎಂದು ಸಿದ್ದರಾಮಯ್ಯ ಭರವಸೆ ನೀಡಿದರು. ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ತಮ್ಮ ಅಪಾರ ಬೆಂಬಲಿಗರೊಂದಿಗೆ ಇಂದು ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದರು. ರಾಜೀವ್‌ಗೆ ಕಾಂಗ್ರೆಸ್ ಬಾವುಟ ನೀಡಿದ ಸಿದ್ದರಾಮಯ್ಯ ಪಕ್ಷಕ್ಕೆ ಸ್ವಾಗತ ಕೋರಿದರು. ಈ ವೇಳೆ ಮಾಜಿ ಮೇಯರ್ ಭೈರಪ್ಪ, ಮಾಜಿ ಕಾರ್ಪೊರೇಟರ್ ಮಲ್ಲೇಶ್, ಓಂ ಪ್ರಕಾಶ್ ಸೇರಿದಂತೆ ಹಲವರು ಕಾಂಗ್ರೆಸ್‌ಗೆ ಸೇರ್ಪಡೆಗೊಂಡರು. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್ ಗೌಡ, ಅನಿಲ್ ಚಿಕ್ಕಮಾದು, ಡಾ.ತಿಮ್ಮಯ್ಯ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಡಾ.ಯತೀಂದ್ರ ಸಿದ್ದರಾಮಯ್ಯ, ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ವಿಜಯಕುಮಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಗಡ್ಡ ಬಿಟ್ಟವ್ರು, ಬುರ್ಕಾ ಹಾಕಿದವ್ರು, ಶಿಲುಬೆ ಹಾಕಿದವ್ರು ಬರಬೇಡಿ ಅಂತಾರೆ

ಪ್ರಧಾನಮಂತ್ರಿ ನರೇಂದ್ರ ಮೋದಿ ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್ ಅಂತಾರೆ. ಆದರೆ ಗಡ್ಡ ಬಿಟ್ಟವ್ರು, ಬುರ್ಕಾ ಹಾಕಿದವ್ರು, ಶಿಲುಬೆ ಹಾಕಿದವ್ರು ಬರಬೇಡಿ ಅಂತಾರೆ. ಇದ್ಯಾವ ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ಹೆಚ್ಚು ಸುಳ್ಳು ಹೇಳುವ ಪ್ರಧಾನಮಂತ್ರಿ ದೇಶದ ಇತಿಹಾಸದಲ್ಲಿ ಇದ್ದರೆ ಅದು ನರೇಂದ್ರ ಮೋದಿ. ಅಚ್ಛೆ ದಿನ್ ಬಂದಿದೆ ಅಂತಾರೆ, ಹಾಗಾದರೆ ಭಾರತದ ಆರ್ಥಿಕತೆಯನ್ನು 5 ಟ್ರಿಲಿಯನ್ ಡಾಲರ್‌ಗೆ ಹೆಚ್ಚಳ ಮಾಡಿದ್ರಾ, 15 ಲಕ್ಷ ರೂಪಾಯಿ ಜನರ ಖಾತೆಗೆ ಹಾಕಿದ್ರಾ, ಗೊಬ್ಬರದ ಬೆಲೆ ಕಡಿಮೆ ಮಾಡಿದ್ರಾ, ಡಾಲರ್ ಎದುರು ರೂಪಾಯಿ ಮೌಲ್ಯ ಹೆಚ್ಚಳ ಮಾಡಿದ್ರಾ ಎಂದು ಪ್ರಶ್ನೆಗಳ ಸುರಿಮಳೆಗೈಯ್ದ ಸಿದ್ದರಾಮಯ್ಯ, ಇಂತಹ ನುಡಿದಂತೆ ನಡೆಯದವರು ನಿಮಗೆ ಬೇಕಾ, ಇವರಿಗೆ ಓಟ್ ಹಾಕಬೇಕಾ ಎಂದು ಪ್ರಶ್ನಿಸಿದರು. ಚುನಾವಣೆಯಲ್ಲಿ ರಾಜಕೀಯ ಲಾಭಕ್ಕಾಗಿ ಇದನ್ನೆಲ್ಲಾ ಹೇಳುತ್ತಿಲ್ಲ, ನಾನು ಸುಳ್ಳು ಹೇಳಿ ನಂಬಿಸುತ್ತಿಲ್ಲ. ಇರುವ ವಾಸ್ತವತೆ ಮನವರಿಕೆ ಮಾಡಿಕೊಡುತ್ತಿದ್ದೇನೆ. ನೀವು ಬಿಜೆಪಿಯವರಂತೆ ಸುಳ್ಳು ಹೇಳಿಬೇಡಿ. ನಾವು ನೀಡಿರುವ ಗ್ಯಾರಂಟಿ ಯೋಜನೆಗಳನ್ನು ರಾಜ್ಯದ ಜನರ ಮುಂದಿಟ್ಟು ಮತ ಕೇಳಿ ಎಂದು ಸಲಹೆ ನೀಡಿದರು.

ಕಾಗೆ ಬೆಳ್ಳಗಿದೆ ಅಂದ್ರೆ ಹೌದು ಅಂತಾರೆ, ನಾಯಿಗೆ ಬಾಲ ಇಲ್ಲ ಅಂದ್ರೆ ಎಸ್ ಅಂತಾರೆ

ನರೇಂದ್ರ ಮೋದಿ ಏನೇ ಹೇಳಿದರೂ ಬಿಜೆಪಿ ನಾಯಕರು ಅದನ್ನು ಒಪ್ಪುತ್ತಾರೆ. ಮೋದಿ ನೀಡುವ ಹೇಳಿಕೆಯನ್ನೆಲ್ಲಾ ಪ್ರಚಾರ ಮಾಡುತ್ತಾರೆ. ಕಾಗೆ ಬೆಳ್ಳಗಿದೆ ಅಂತ ಮೋದಿ ಹೇಳಿದರೆ ಹೌದು ಅಂತಾರೆ, ನಾಯಿಗೆ ಬಾಲ ಇಲ್ಲ ಅಂದರೆ ಎಸ್ ಅಂತಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಗೇಲಿ ಮಾಡಿದರು.

ಕರ್ನಾಟಕಕ್ಕೆ ಇಷ್ಟೆಲ್ಲಾ ಅನ್ಯಾಯವಾಗುತ್ತಿದ್ದರೂ ಯಾವ ಸಂಸದನೂ ದನಿ ಎತ್ತುತ್ತಿಲ್ಲ. ಕರ್ನಾಟಕಕ್ಕೆ ಅನ್ಯಾಯವಾಗುತ್ತಿಲ್ಲ ಎಂದು ಮೋದಿ ಹೇಳಿದರೆ, ಇವರು ಹೌದೆನ್ನುತ್ತಾರೆ ಎಂದು ಹೇಳಿದರು. ಆದರೆ ನಮ್ಮ ಪಕ್ಷದವರು ನಾವು ಹೇಳುವ ಸತ್ಯ ಹೇಳುತ್ತಾರೆ. ಗ್ಯಾರಂಟಿ ಯೋಜನೆಯಲ್ಲಿ ಏನೇನು ಸೌಲಭ್ಯ ಸಿಗುತ್ತಿದೆ ಎಂದು ಹೇಳುತ್ತಾರೆ. ಬಸ್‌ನಲ್ಲಿ ನನ್ನ ಹೆಂಡತಿಗೂ ಫ್ರೀ, ರಾಜೀವ್ ಹೆಂಡತಿಗೂ ಫ್ರೀ, ಮಲ್ಲೇಶ್ ತಾಯಿಗೂ ಫ್ರೀ. ಇದು ನಮ್ಮ ನುಡಿದಂತೆ ನಡೆಯುವ ಸರ್ಕಾರ ಎಂದು ಹೇಳಿದರು. ನಮ್ಮ ಅಭ್ಯರ್ಥಿ ಎಂ.ಲಕ್ಷ್ಮಣ ಜ್ಞಾನವಂತ ವ್ಯಕ್ತಿಯಾಗಿದ್ದು, ಆಯ್ಕೆ ಮಾಡಿ. ನಿಮ್ಮ ಪರವಾಗಿ ಲಕ್ಷ್ಮಣ್ ದನಿ ಎತ್ತುತ್ತಾರೆ. ಸುಮ್ಮನೆ ಸಂಸತ್‌ಗೆ ಹೋಗಿ ಕೂತು ಬರುವವರು ಬೇಕಾ, ಇಂತಹವರು ಬೇಕಾ ಎಂದು ನೀವೇ ತೀರ್ಮಾನ ಮಾಡಿ ಎಂದು ಸಿದ್ದರಾಮಯ್ಯ ಸಲಹೆ ನೀಡಿದರು.

ನಾಮಪತ್ರ ಸಲ್ಲಿಕೆಗೆ ಸಕಲ ಸಿದ್ಧತೆ

100 ರೂ.ಗಳ ಛಾಪಾ ಕಾಗದದಲ್ಲಿ ನೋಟರಿಯವರಿಂದ ದೃಢೀಕರಿಸಿದ ನಮೂನೆ 26 ರಂತೆ ಅಫಿಡವಿಟ್, 25,000 ರೂ. ಹಾಗೂ ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳು 12,500 ರೂ. ಠೇವಣಿ ಮೊಬಲಗು ನೀಡಬೇಕು.

ರಾಜಕೀಯ ಪಕ್ಷದಿಂದ ಸ್ಪರ್ಧಿಸುವ ಅಭ್ಯರ್ಥಿಗಳು ಏಪ್ರಿಲ್ 4ರ ಮಧ್ಯಾಹ್ನ 3 ಗಂಟೆಯೊಳಗೆ 'ಎ' ಮತ್ತು 'ಬಿ' ನಮೂನೆ ಸಲ್ಲಿಸಬೇಕು. ಒಬ್ಬ ಅಭ್ಯರ್ಥಿ ಗರಿಷ್ಠ 4 ನಾಮಪತ್ರ ಸಲ್ಲಿಸಬಹುದಾಗಿದ್ದು, 2x2.5 ಸೆಂ.ಮೀ. ಅಳತೆಯ 4 ಹಾಗೂ 2 ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರಗಳನ್ನು ದೃಢೀಕರಿಸಿ ಸಲ್ಲಿಸಬೇಕು. ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಹೊಸದಾಗಿ ತೆರೆದ ಬ್ಯಾಂಕ್ ಖಾತೆ ಪಾಸ್ ಬುಕ್ ನಕಲು ಸಲ್ಲಿಸಬೇಕು. ಚುನಾವಣಾಧಿಕಾರಿ ಕಚೇರಿಗೆ ಅಭ್ಯರ್ಥಿಯೊಂದಿಗೆ 4 ಮಂದಿಗೆ ಮಾತ್ರ ಪ್ರವೇಶವಿರುತ್ತದೆ.

ತಂಡಗಳ ರಚನೆ: ಚುನಾವಣಾ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಲು ಹಾಗೂ ಅಭ್ಯರ್ಥಿಗಳ ಚುನಾವಣಾ ವೆಚ್ಚದ ಮೇಲೆ ನಿಗಾ ಇರಿಸಲು ಜಿಲ್ಲೆಯಾದ್ಯಂತ 241 ಸೆಕ್ಟರ್ ಅಧಿಕಾರಿಗಳು, 53 ಫ್ಲೈಯಿಂಗ್ ಸ್ಕ್ವಾಡ್, 42 ಸ್ಟ್ಯಾಟಿಕ್ ಸರ್ವೆಲೆನ್ಸ್, 23 ವಿಡಿಯೋ ಸರ್ವೆಲೆನ್ಸ್, 12 ವಿಡಿಯೋ ವೀವಿಂಗ್, 11 ಅಕೌಂಟಿಂಗ್ ಟೀಂ ಮತ್ತು 15 ಸಹಾಯಕ ವೆಚ್ಚ ವೀಕ್ಷಕರನ್ನು ನಿಯೋಜಿಸಲಾಗಿದೆ.

ಮದ್ಯ ವಶ: ಮಾರ್ಚ್ 16ರಿಂದ 26ರವರೆಗೆ ಜಿಲ್ಲೆಯಾದ್ಯಂತ ವಿವಿಧ ತಂಡಗಳಿಂದ 7,94,08,845 ರೂ. ಮೌಲ್ಯದ 3,40,485.66 ಲೀಟರ್ ಮದ್ಯವನ್ನು ಜಪ್ತಿ ಮಾಡಲಾಗಿದ್ದು, ಒಟ್ಟು 66,10,618 ರೂ. ನಗದು ವಶಪಡಿಸಿಕೊಳ್ಳಲಾಗಿದೆ.

ಮತಯಂತ್ರಗಳು: ಮೈಸೂರು ಜಿಲ್ಲೆಯಾದ್ಯಂತ 2,925 ಮತಗಟ್ಟೆಗಳಿಗೆ 3,784 ಬ್ಯಾಲೆಟ್ ಯೂನಿಟ್ ಮತ್ತು ಕಂಟ್ರೋಲ್ ಯೂನಿಟ್ ಹಾಗೂ 4,077 ವಿವಿ ಪ್ಯಾಟ್‌ಗಳನ್ನು ಬಳಸುತ್ತಿದ್ದು, ಪ್ರತಿ ಮತಗಟ್ಟೆಗೆ ನಾಲ್ವರಂತೆ ಮತಗಟ್ಟೆ ಅಧಿಕಾರಿಗಳನ್ನು ನೇಮಿಸಲಾಗಿದೆ.

ಜಿಲ್ಲೆಯಾದ್ಯಂತ 97 ವಿಶೇಷ ಮತಗಟ್ಟೆಗಳಿದ್ದು, ವಿಕಲಚೇತನರಿಗಾಗಿ ಎಲ್ಲಾ ಮತಗಟ್ಟೆಗಳಲ್ಲಿ ಗಾಲಿ ಕುರ್ಚಿ ವ್ಯವಸ್ಥೆ ಮಾಡಲಾಗಿದೆ. 55 ಸಖಿ ಬೂತ್‌ಗಳು, 11 ಪಿಡಬ್ಲ್ಯೂಡಿ ಬೂತ್‌ಗಳು, 9 ಯುವ ಮತದಾರರ ಬೂತ್‌ಗಳು, 9 ಥೀಮ್ ಬೇಸ್ಡ್ ಬೂತ್‌ಗಳು ಹಾಗೂ 3 ಎತ್ನಿಕ್ ಬೂತ್‌ಗಳನ್ನು ಸ್ಥಾಪಿಸಲಾಗಿದೆ.

ನ್ಯಾಯ ಸಮ್ಮತ, ನಿರ್ಭೀತ ಹಾಗೂ ಶಾಂತಿಯುತವಾಗಿ ಮತದಾನ ಮಾಡಲು ಜಿಲ್ಲಾಡಳಿತದಿಂದ ಅಗತ್ಯ ಕ್ರಮ ಕೈಗೊಳ್ಳಲಾಗಿದ್ದು, ಚುನಾವಣಾ ಮಾದರಿ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಲು ಎಲ್ಲಾ ರೀತಿಯ ಸಿದ್ಧತೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ತಿಳಿಸಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಶಿವರಾಜ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ. ಗಾಯತ್ರಿ ಹಾಗೂ ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ವಚನ ಸಾಹಿತ್ಯದಲ್ಲಿ ಜೀವ, ಮಾನವೀಯ ಸಂವಿಧಾನವಿದೆ

'ವಚನ ಸಾಹಿತ್ಯ-ವರ್ತಮಾನದ ತಲ್ಲಣಗಳು' ಕುರಿತ ವಿಚಾರ ಸಂಕಿರಣ ಉದ್ಘಾಟಿಸಿದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಸಿ.ಸೋಮಶೇಖರ್

ಮೈಸೂರು, ಮಾ.27(ಜಿಎ)-ವಿಶ್ವದ ಬಹುದೊಡ್ಡ ತಲ್ಲಣ ಎಂದರೆ ಜಾತಿ ಪದ್ಧತಿಯಾಗಿದೆ. ಅದು ಇಡೀ ಸಮಾಜವನ್ನು ಛಿದ್ರ ಮಾಡುವ ಮೂಲಕ ಮಾನವ ಹೃದಯಗಳನ್ನು ದೂರ ಮಾಡಿದೆ ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಡಾ.ಸಿ.ಸೋಮಶೇಖರ್ ವಿಷಾದ ವ್ಯಕ್ತಪಡಿಸಿದರು.



ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮೈಸೂರು ಘಟಕ, ಜೆಎಸ್‌ಎಸ್ ಮಹಿಳಾ ಕಾಲೇಜು(ಸ್ವಾಯತ್ತ) ಕನ್ನಡ ವಿಭಾಗ ವತಿಯಿಂದ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಿದ್ದ 'ವಚನ ಸಾಹಿತ್ಯ-ವರ್ತಮಾನದ ತಲ್ಲಣಗಳು' ವಿಷಯ ಕುರಿತ ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ ಡಾ.ಸಿ.ಸೋಮಶೇಖರ್ ಮಾತನಾಡಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮೈಸೂರು ಘಟಕ, ಜೆಎಸ್‌ಎಸ್ ಮಹಿಳಾ ಕಾಲೇಜು(ಸ್ವಾಯತ್ತ) ಕನ್ನಡ ವಿಭಾಗ ವತಿಯಿಂದ ಕಾಲೇಜಿನ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ 'ವಚನ ಸಾಹಿತ್ಯ-ವರ್ತಮಾನದ ತಲ್ಲಣಗಳು' ವಿಷಯ ಕುರಿತ ರಾಜ್ಯಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಶರಣರು ವಚನ ಸಾಹಿತ್ಯದಲ್ಲಿ ನೀಡಿರುವ ಸಂವಿಧಾನ ಪಾಲಿಸಿದಾಗ ಮಾತ್ರ ವರ್ತಮಾನದ ತಲ್ಲಣಗಳಿಗೆ ಪರಿಹಾರ ಸಿಗುತ್ತದೆ ಎಂದರು.

ಅಹಂಕಾರ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಸಾಮಾಜಿಕ ಅಸಮಾನತೆ, ಆರ್ಥಿಕ ಅಸಮಾನತೆ, ಮೂಢನಂಬಿಕೆಗಳ ಮೂಲಕ ಶೋಷಣೆ, ಸ್ತ್ರೀ ಶೋಷಣೆ ಎಲ್ಲವೂ ವರ್ತಮಾನದ ತಲ್ಲಣಗಳಾಗಿವೆ. ಇಂದು ಕೋಮು ದ್ವೇಷ ಹೆಚ್ಚಾಗಿದೆ. ರಾಷ್ಟ್ರ-ರಾಷ್ಟ್ರಗಳ ನಡುವೆ ಯುದ್ಧ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ಜಾಗತಿಕ ಮಟ್ಟದಲ್ಲಿನ ರಾಜಕೀಯ, ಆರ್ಥಿಕ, ಸಾಮಾಜಿಕ ಸಮಸ್ಯೆಗಳಿಗೆ ಶರಣ ಸಾಹಿತ್ಯದಲ್ಲಿ ಪರಿಹಾರವನ್ನು ಹುಡುಕಬಹುದು. ವಚನ ಸಾಹಿತ್ಯದಲ್ಲಿ ಜೀವ ಹಾಗೂ ಮಾನವೀಯ ಸಂವಿಧಾನ ಇದೆ ಎಂದರು.

ಸಪ್ತ ಋಷಿಗಳು ಅತ್ಯಂತ ಕೆಳಸ್ತರದಿಂದ ಬಂದರೂ ಸಮಾಜದಲ್ಲಿ ದೊಡ್ಡ ಶಕ್ತಿಗಳಾಗಿ, ಮಹಾನ್ ತಪಸ್ವಿಗಳಾಗಿ ನಮ್ಮೆಲ್ಲರಿಂದ ಆರಾಧನೆಗೆ ಒಳಪಡುತ್ತಿದ್ದಾರೆ. ಇದಕ್ಕೆಲ್ಲ ಅವರ ಸಾಧನೆಯೇ ಕಾರಣ. ಹಾಗಾಗಿ ಈ ತಲ್ಲಣಗಳಿಗೆ ಮೂಲ ಪರಿಹಾರ ಎಂದರೆ ವ್ಯಕ್ತಿ ಹುಟ್ಟಿನಿಂದ ದೊಡ್ಡವನಾಗಲ್ಲ. ಸಾಧನೆಯಿಂದ ದೊಡ್ಡವನಾಗುತ್ತಾನೆ ಎಂದು ವಚನ ಸಾಹಿತ್ಯ, ಶರಣ ಸಾಹಿತ್ಯ ಸ್ಪಷ್ಟವಾಗಿ ಹೇಳುತ್ತದೆ ಎಂದರು.

ಇಂದು ಸಾಮಾಜಿಕ ಅಸಮಾನತೆ ಕಾಣುತ್ತೇವೆ. ಬಸವಾದಿ ಶರಣರು ಹೋರಾಟ ಮಾಡಿದ್ದು ಕೂಡ ಸಾಮಾಜಿಕ ಅಸಮಾನತೆ ವಿರುದ್ಧ. ಅವರು 'ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯ. ಇವ ನಮ್ಮವ, ಇವ ನಮ್ಮವ', ಇವನಮ್ಮವನೆಂದೆನಿಸಯ್ಯ' ಎಂದು ಹೇಳುವ ಮೂಲಕ ಇಡೀ ವಿಶ್ವದ ಸಾಮಾಜಿಕ ಅಸಮಾನತೆ ಹೋಗಲಾಡಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದರು ಎಂದು ಹೇಳಿದರು.

ಹಿರಿಯ ಸಾಹಿತಿ ಡಾ. ಸಿ.ಪಿ.ಕೃಷ್ಣ ಕುಮಾರ್ (ಸಿಪಿಕೆ) ಮಾತನಾಡಿ, ಇಂದು ಜಾತೀಯತೆ ದೊಡ್ಡ ತಲ್ಲಣವಾಗಿದ್ದು, ನಾವು ಅದನ್ನು ದಾಟಬೇಕು. ತಲ್ಲಣಗಳನ್ನು ತಣ್ಣಗಾಗಿಸುವ ಶಕ್ತಿ ವಚನ ಸಾಹಿತ್ಯಕ್ಕೆ ಇದೆ. ಸ್ವಾತಂತ್ರ್ಯ, ಸಮಾನತೆ, ಸಹೋದರತೆ ಮುಖ್ಯವಾದವು. ಇವುಗಳನ್ನು ಅನುಭವ ಮಂಟಪದಲ್ಲಿ ಕಾಣುತ್ತೇವೆ. ಕಾಯಕ ತತ್ವವನ್ನು ಮುಖ್ಯವಾಗಿ ಪರಿಗಣಿಸಬೇಕು ಎಂದು ಸಲಹೆ ನೀಡಿದರು.

ವಿಶ್ರಾಂತ ಕುಲಪತಿ ಡಾ.ಪದ್ಮಾಶೇಖರ್ ಮಾತನಾಡಿ, ವರ್ತಮಾನದ ಎಲ್ಲ ತಲ್ಲಣಗಳಿಗೆ ವಚನ ಸಾಹಿತ್ಯದಲ್ಲಿ ಪರಿಹಾರ ಸಿಗುತ್ತದೆ. ವಚನ ಚಳುವಳಿ ಧಾರ್ಮಿಕ, ಸಾಮಾಜಿಕವಾಗಿ ಹೊಸ ಭಾಷ್ಯ ಬರೆಯುತ್ತದೆ. ಸಾಮಾಜಿಕ ಅವ್ಯವಸ್ಥೆಯ ವಿರುದ್ಧವಾಗಿ ಹೋರಾಡುತ್ತದೆ. ಸಮಕಾಲೀನ ಸಮಸ್ಯೆಗಳಿಗೆ ಹೊಸ ಬಗೆಯ ಪರಿಹಾರ ಹುಡುಕಲು ಪ್ರಯತ್ನಿಸುತ್ತದೆ. ಮುಖ್ಯವಾಗಿ ಅಧಿಕಾರಶಾಹಿ ಮತ್ತು ಪುರೋಹಿತಶಾಹಿ ಹಿಡಿತದಿಂದ ಪಾರಾಗಿ ಮಾನವೀಯ ನೆಲೆಯಲ್ಲಿ ನಮ್ಮ ಬದುಕಿಗೆ ಬಲ ನೀಡಿದ ಈ ಚಳವಳಿಯನ್ನು ಕಾಯಕ ಜೀವಿಗಳ ಚಳವಳಿ ಎಂದು ಗುರುತಿಸಲು ಇಷ್ಟಪಡುತ್ತೇನೆ ಎಂದರು.

> “ಅಹಂಕಾರ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಸಾಮಾಜಿಕ ಅಸಮಾನತೆ, ಆರ್ಥಿಕ ಅಸಮಾನತೆ, ಮೂಢನಂಬಿಕೆಗಳ ಮೂಲಕ ಶೋಷಣೆ, ಸ್ತ್ರೀ ಶೋಷಣೆ ಎಲ್ಲವೂ ವರ್ತಮಾನದ ತಲ್ಲಣಗಳಾಗಿವೆ. ಇಂದು ಕೋಮು ದ್ವೇಷ ಹೆಚ್ಚಾಗಿದೆ. ರಾಷ್ಟ್ರ-ರಾಷ್ಟ್ರಗಳ ನಡುವೆ ಯುದ್ಧ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ಜಾಗತಿಕ ಮಟ್ಟದಲ್ಲಿನ ರಾಜಕೀಯ, ಆರ್ಥಿಕ, ಸಾಮಾಜಿಕ ಸಮಸ್ಯೆಗಳಿಗೆ ಶರಣ ಸಾಹಿತ್ಯದಲ್ಲಿ ಪರಿಹಾರವನ್ನು ಹುಡುಕಬಹುದಾಗಿದೆ. ವಚನ ಸಾಹಿತ್ಯದಲ್ಲಿ ಜೀವ ಹಾಗೂ ಮಾನವೀಯ ಸಂವಿಧಾನ ಇದೆ. **- ಡಾ.ಸಿ.ಸೋಮಶೇಖರ್**

ಕಾರ್ಯಕ್ರಮದಲ್ಲಿ ಚಿತ್ರಕಲಾವಿದ, ಸಾಹಿತಿ ಎಲ್.ಶಿವಲಿಂಗಪ್ಪ ಅವರ 'ವಚನಾಂತರಂಗ' ವಚನಾಧಾರಿತ ಚಿತ್ರಕಲಾ ಪ್ರದರ್ಶನ ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ, ದತ್ತಿ ದಾಸೋಹಿ ಪ್ರೊ.ಡಿ.ಎಸ್.ಸದಾಶಿವಮೂರ್ತಿ, ಅಧ್ಯಕ್ಷ ಮ.ಗು.ಸದಾನಂದಯ್ಯ, ಪ್ರಾಂಶುಪಾಲರಾದ ಡಾ.ಎಂ.ಪೂರ್ಣಿಮಾ ಉಪಸ್ಥಿತರಿದ್ದರು.

ಚಾ.ನಗರ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಲು ಬಿ.ಸೋಮಶೇಖರ್‌ಗೆ ಒತ್ತಾಯ



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಬಿ.ಸೋಮಶೇಖರ್ ಅಭಿಮಾನಿ ಬಳಗದಿಂದ ಬುಧವಾರ ಸಭೆ ನಡೆಸಲಾಯಿತು.

ಮೈಸೂರು, ಮಾ.27(ಜಿಎ)-ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಮಾಜಿ ಸಚಿವರಾದ ಬಿ.ಸೋಮಶೇಖರ್ ಅವರನ್ನು ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸುವಂತೆ ವಿವಿಧ ಸಂಘಟನೆಯ ಮುಖಂಡರು, ಅಭಿಮಾನಿಗಳು ಒತ್ತಾಯಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್‌ವೊಂದರಲ್ಲಿ ಬಿ.ಸೋಮಶೇಖರ್ ಅಭಿಮಾನಿ ಬಳಗದ ವತಿಯಿಂದ ಏರ್ಪಡಿಸಿದ್ದ ಸಭೆಯಲ್ಲಿ ಚಾಮರಾಜನಗರದ 8 ವಿಧಾನಸಭಾ ಕ್ಷೇತ್ರದ ಮುಖಂಡರು, ದಸಂಸ ಮುಖಂಡರು ಮತ್ತು ರೈತ ನಾಯಕರು ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಬಿ.ಸೋಮಶೇಖರ್ ಅವರಿಗೆ ಕಾಂಗ್ರೆಸ್‌ನಿಂದ ಸ್ಪರ್ಧಿಸಲು ಅವಕಾಶ ಕಲ್ಪಿಸದ ಕಾರಣದಿಂದ ಬೇಸರಗೊಂಡ ಅಭಿಮಾನಿಗಳು ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಲು ಮನವಿ ಮಾಡಿದರು.



ಬುಧವಾರ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿದ್ದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಅವರನ್ನು ಬಸವಸೇನೆ ರಾಜ್ಯಾಧ್ಯಕ್ಷ ಹಾಗೂ ಮೈಸೂರು ನಗರ ಯುವ ಮೋರ್ಚಾ ಉಪಾಧ್ಯಕ್ಷ ಮನುಶೈವ್ (ಅಪ್ಪಿ) ಅಭಿನಂದಿಸಿದರು. ಈ ವೇಳೆ ಮಧು ಎಸ್., ಗೊರೂರ್ ಚೇತನ್, ಆಕಾಶ್ ಪೋತು, ಬಸವಸೇನೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಈ ವೇಳೆ ಬಿ.ಸೋಮಶೇಖರ್ ಮಾತನಾಡಿ, ರಾಜಕೀಯದಲ್ಲಿ ಸಾಕಷ್ಟು ಅನುಭವವಿರುವುದರಿಂದ ಚಾಮರಾಜನಗರ ಕ್ಷೇತ್ರದಿಂದ ಸ್ಪರ್ಧಿಸಲು ಅವಕಾಶ ಮಾಡಿಕೊಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಗಮನಕ್ಕೆ ತಂದಿದ್ದೆ. ಆದರೆ, ಈಗ ಅದು ಬೇರೆ ಅವರ' ಪಾಲಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಹಲವಾರು ತಿಂಗಳಿಂದ ನನ್ನ ಪರ ವಿವಿಧ ಸಂಘಟನೆಗಳು ಮತ್ತು ಅನೇಕ ಮುಖಂಡರು ಸಂಘಟನೆ ಮಾಡಿದ್ದಾರೆ. ಅವರಿಗೆ ನಾನು ಚಿರಋಣಿಯಾಗಿರುತ್ತೇನೆ. ಪಕ್ಷ ಘೋಷಿಸಿರುವ ಅಭ್ಯರ್ಥಿ ಪರ ಪ್ರಚಾರ ಮಾಡುತ್ತೇನೆ. ಅದು ನನ್ನ ಕರ್ತವ್ಯ. ಆದರೆ, ಅಭಿಮಾನಿಗಳು ನೀಡಿರುವ ಸಲಹೆಯಂತೆ ಪಕ್ಷೇತರವಾಗಿ ಸ್ಪರ್ಧಿಸುವ ಬಗ್ಗೆ ಕೆಲವು ಮುಖಂಡರೊಂದಿಗೆ ಚರ್ಚಿಸಿ ನಿರ್ಧಾರ ತಿಳಿಸುತ್ತೇನೆ ಎಂದು ತಿಳಿಸಿದರು. ಸಭೆಯಲ್ಲಿ ರಂಗಸ್ವಾಮಿ, ಚಾ.ನಂಜುಂಡಮೂರ್ತಿ, ರಾಜಶೇಖರ್ ಕೋಟಿ, ದಸಂಸ ಮುಖಂಡ ಚೋರನಹಳ್ಳಿ ಶಿವಣ್ಣ, ದೇವರಾಜು, ಮಹೇಂದ್ರ ಹೂವಿಕೊಳ್ಳ, ಶಶಿಕುಮಾರ್, ಚಂದ್ರಶೇಖರ್ ನಾಗಸುಂದರ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ನಿಧನ

ಕಾಳಿಹುಂಡಿ ಸಿದ್ದರಾಮೇಗೌಡ



ಮೈಸೂರು, ಮಾ. 27- ಸರಗೂರು ತಾಲೂಕಿನ ಕಾಳಿಹುಂಡಿ ಗ್ರಾಮದ ರೈತ ಮುಖಂಡ ಸಿದ್ದರಾಮೇಗೌಡ (78) ಮಂಗಳವಾರ ಸಂಜೆ ನಿಧನರಾದರು. ಮೃತರು ಪತ್ನಿ ಸರೋಜಮ್ಮ, ಮಕ್ಕಳಾದ ಸುಧಾ, ಶಕುಂತಲಾ, ಮಂಜುಳ, ಕುಮಾರ, ಅಳಿಯಂದಿರಾದ ಮೋಹನ್, ಸುರೇಶ್, ಸುಬ್ರಹ್ಮಣ್ಯ, ಸೊಸೆ ಸುನಿತಾ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಕಾಳಿಹುಂಡಿ ಗ್ರಾಮದಲ್ಲಿ ಬುಧವಾರ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಪ್ತಋಷಿ ಜೋಯಿಸ್



ನಂಜನಗೂಡು ಪಟ್ಟಣದ ರಾಘವೇಂದ್ರಸ್ವಾಮಿ ದೇವಸ್ಥಾನ ಸಮೀಪದ ನಿವಾಸಿ ಸಪ್ತಋಷಿ ಜೋಯಿಸ್ (72) ಮಂಗಳವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಕಪಿಲಾ ನದಿ ತೀರದಲ್ಲಿ ಬುಧವಾರ ಸಂಜೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗಿರಿಜಾಂಭ



ಮೈಸೂರಿನ ಕೆ.ಆರ್.ವನಂ ನಿವಾಸಿ ದಿವಂಗತ ಶಿವಯ್ಯ ಅವರ ಪತ್ನಿ, ಗಿರಿಜಾಂಭ (72) ಬುಧವಾರ ನಿಧನರಾದರು. ಮೃತರು ವನ್ಯಜೀವಿ ಛಾಯಾಗ್ರಾಹಕ ಜಿ.ಎಸ್.ರವಿಶಂಕರ್ ಸೇರಿದಂತೆ ಇಬ್ಬರು ಪುತ್ರರು, ನಾಲ್ವರು ಪುತ್ರಿಯರು, ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಬುಧವಾರ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎನ್.ಮಹದೇವಪ್ಪ



ತಿ.ನರಸೀಪುರ, ಮಾ.27- ತಾಲೂಕಿನ ಸೋಮನಾಥಪುರ ಗ್ರಾಮದ ಹೊರವಲಯದಲ್ಲಿರುವ ಶ್ರೀಶನೇಶ್ವರಸ್ವಾಮಿ ಸಮೂಹ ದೇವಾಲಯಗಳ ಸಂಸ್ಥಾಪಕ ಎನ್.ಮಹದೇವಪ್ಪ(74) ಬುಧವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ-ಪ್ರಪಂಚಕ್ಕೆ ಬೆಳಕಿನ ಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ- ಮೈಸೂರಿನ ಎನ್. ರವಿಶಂಕರ್, 6.40 ಪದ ಸಂಸ್ಕೃತಿ, ಪ್ರಸ್ತುತಿ- ಡಾ.ಬಿ.ವಿ. ವಸಂತ್ ಕುಮಾರ್, 7.15 ಭಾವಗೀತೆಗಳು-ದೀಪಾ ಸತ್ಯನಾರಾಯಣ, 10.00 ಈಮನಿ ಶಂಕರಶಾಸ್ತ್ರಿ-ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 1.20 ಭಾವಗೀತೆ-ಅಜಯ್ ಜಿ. ಪ್ರಸಾದ್, 4.30ಕನ್ನಡ ಭಾರತಿ, ಕಥಾವಿಹಾರ-ಹೊರೆಯಾಲ ದೊರೆಸ್ವಾಮಿ ಅವರಿಂದ ಸಣ್ಣಕಥೆ 'ಇಡುಗಾಯಿ', ಕಾವ್ಯಧಾರೆ-ಡಾ.ಕೆ.ಎನ್. ಲಾವಣ್ಯಪ್ರಭು, 6.50 ಕೃಷಿರಂಗ-ಬೆರಕೆ ಸೊಪ್ಪಿನ ಪ್ರಾಮುಖ್ಯತೆ ಕುರಿತು ಸಂವಾದ ಭಾಗವಹಿಸುತ್ತಾರೆ ಕೆ. ಗೌರಮ್ಮ, ಆರ್. ನಿಸರ್ಗ, ಪ್ರಸ್ತುತಿ- ಎನ್.ಕೇಶವಮೂರ್ತಿ, 8.00 ಯುವವಾಣಿ-ಮೈಸೂರಿನ ಹಳೆಕೆಸರೆಯ ಬೆಥಾನಿಯಾ ಸಹೋದರರ ಸಭೆಯ ಸದಸ್ಯರಿಂದ ಗುಡ್‌ಫ್ರೈಡೇ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ, 10.00 ನಾಟಕ, 10.30 ಸವಿನೆನಪು

ಇಂದಿನ ಪಂಚಾಂಗ

28.3.2024 ಗುರುವಾರ, ಮಳೆ ನಕ್ಷತ್ರ: ಉತ್ತರಾಭಾದ್ರ 17.03.2024ರಿಂದ 30.03.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಪಾಲ್ಗುಣ ಮಾಸ,
ಕೃಷ್ಣ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಸ್ವಾತಿ, ರಾಹುಕಾಲ: ಮಧ್ಯಾಹ್ನ 1.30ರಿಂದ 3ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ರವರೆಗೆ.

■ **ಕಾರ್ಖಾನೆಗಳು, ಬಾಯ್ಲರುಗಳು ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಮೈಸೂರು ವಿಭಾಗ :** 53ನೇ ರಾಷ್ಟ್ರೀಯ ಸುರಕ್ಷತಾ ದಿನಾಚರಣೆ, ಬೆಳಗ್ಗೆ 8ಕ್ಕೆ ಸುರಕ್ಷತಾ ನಡಿಗೆ ಉದ್ಘಾಟನೆ: ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಸುರಕ್ಷತಾ ಧ್ವಜಾರೋಹಣ: ಕಾರ್ಮಿಕ ನ್ಯಾಯಾಲಯದ ಪ್ರಿಸೈಡಿಂಗ್ ಆಫೀಸರ್ ಟಿ. ಶ್ರೀನಿವಾಸ್, ಬೆಳಗ್ಗೆ 10ಕ್ಕೆ ವೇದಿಕೆ ಸಮಾರಂಭ, ಮುಖ್ಯ ಅತಿಥಿಗಳು: ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಪ್ರಾಸ್ತಾವಿಕ ನುಡಿ: ಕಾರ್ಖಾನೆಗಳು, ಬಾಯ್ಲರುಗಳು ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ ಜಂಟಿ ನಿರ್ದೇಶಕ ಹೆಚ್.ಎಸ್. ನರೇಂದ್ರಬಾಬು, ಅತಿಥಿಗಳು: ಎನ್.ರಂಗರಾವ್ ಅಂಡ್ ಸನ್ಸ್ ಅಧ್ಯಕ್ಷ ಆರ್. ಗುರು, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಪರ್ಸನಲ್ ಮ್ಯಾನೇಜ್‌ಮೆಂಟ್, ಮೈಸೂರು ಚಾಪ್ಟರ್ ಅಧ್ಯಕ್ಷ ಸಿ.ವಿ.ಶ್ರೀನಿವಾಸನ್, ನಂಜನಗೂಡು ಇಂಡಸ್ಟ್ರೀಸ್ ಅಸೋಸಿಯೇಷನ್ ಅಧ್ಯಕ್ಷ ಎಂ.ಎಸ್.ರಾಮ್‌ಪ್ರಸಾದ್, ಅಧ್ಯಕ್ಷತೆ: ಕಾರ್ಖಾನೆಗಳು, ಬಾಯ್ಲರುಗಳು ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ ನಿರ್ದೇಶಕ ಕೆ.ಶ್ರೀನಿವಾಸ್, ಸ್ಥಳ: ಕಲಾಮಂದಿರ.

■ **ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ:** 'ಸ್ವಾತಿ' ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ, ಬೆಳಿಗ್ಗೆ 8ಕ್ಕೆ ಸಂಕಲ್ಪ, 9ಕ್ಕೆ ಅಭಿಷೇಕ, 10.30ಕ್ಕೆ ಅಲಂಕಾರ, 11.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗ, ಸಂಜೆ 7.30ಕ್ಕೆ ಪ್ರಾಕಾರೋತ್ಸವ, ಸ್ಥಳ: ದೇವಸ್ಥಾನ, ಕಾಳಿದಾಸ ರಸ್ತೆ.

■ **ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು:** ತರಗತಿಯಲ್ಲಿ ಸಾಹಿತ್ಯದ ಬೋಧನೆ ಪಠ್ಯಗಳು: ಪರಿಣಾಮಕಾರಿ ವಿಧಾನ ಕುರಿತು ವಿಚಾರ ಸಂಕಿರಣ, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಪ್ರಾಸ್ತಾವಿಕ ಭಾಷಣ: ಸಹಾಯಕ ಪ್ರಾಧ್ಯಾಪಕ ಪ್ರೊ.ನಿತಿನ್ ಪಾಟೀಲ್, ಅಧ್ಯಕ್ಷತೆ: ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಪ್ರಿನ್ಸಿಪಾಲ್ ಪ್ರೊ. ಎಂ.ಅಬ್ದುಲ್ ರೆಹಮಾನ್, ಉಪಸ್ಥಿತರು: ಡಾ.ಬಿ.ಎನ್.ಅನಂತಕುಮಾರ್, ವಿ.ನಂದಕುಮಾರ್, ಡಾ.ಡಿ.ಕೆ.ರವಿಶಂಕರ್, ಗೋವಿಂದರಾಜು, ಡಾ. ವಿ.ಆರ್. ರಮೇಶ್ ಬಾಬು, ಡಾ. ಜಿ. ಪರಶುರಾಮಮೂರ್ತಿ, ಸ್ಥಳ: ಕಲಾಮಂಟಪ, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಬೆಳಗ್ಗೆ 9.30ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಶ್ರವಣ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆಯಿಂದ.


■ **ರ್‍ಯಾಂಕ್‌ಬುಕ್ ಲರ್ನಿಂಗ್ ಅಂಡ್ ಸಾಫ್ಟ್‌ವೇರ್ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್, ಉದಯೋನ್ಮುಖಿ ಗ್ರಾಮೀಣಾಭಿವೃದ್ಧಿ ಸಂಸ್ಥೆ :** ಉದ್ಯೋಗ ಮೇಳ, ಸ್ಥಳ: ಆಲಮ್ಮ ಸಮುದಾಯ ಭವನ, ಶಿವರಾಂಪೇಟೆ, ದೇವರಾಜ ಮೊಹಲ್ಲಾ, ಬೆಳಗ್ಗೆ 10.30ಕ್ಕೆ.

■ **ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು :** ರಂಗಭೂಮಿ ಮತ್ತು ಜಾನಪದ ಕಲಾಪ್ರಕಾರಗಳ ಉಚಿತ ತರಬೇತಿ ಶಿಬಿರ, ಉದ್ಘಾಟನೆ : ಹಿರಿಯ ರಂಗ ನಿರ್ದೇಶಕ ಸಿ. ಬಸವಲಿಂಗಯ್ಯ, ಅಧ್ಯಕ್ಷತೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ವಿಭಾಗ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಮುಖ್ಯ ಅತಿಥಿಗಳು : ಹಿರಿಯ ರಂಗ ನಿರ್ದೇಶಕಿ ಕೆ.ಆರ್. ಸುಮತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಸಹಾಯಕ ಪ್ರಾಧ್ಯಾಪಕ ಡಾ. ಎನ್. ನಾಗೇಂದ್ರ, ಉಪಸ್ಥಿತರು : ಟ್ರಸ್ಟ್ ಅಧ್ಯಕ್ಷ ಕೃಷ್ಣಮೂರ್ತಿ, ಸ್ಥಳ: ಶ್ರೀರಂಗ, ರಂಗಾಯಣ, ಸಂಜೆ 4ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ : ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಸಿಂಧುವಳ್ಳಿ, ಮೈಸೂರು ತಾಲೂಕು

■ **ಮೈಸೂರು ವಿಶ್ವವಿದ್ಯಾನಿಲಯ, ಶ್ರೀ ನಟರಾಜ ಪ್ರತಿಷ್ಠಾನ, ರಾಷ್ಟ್ರೀಯ ಸೇವಾ ಯೋಜನೆ, ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು:** ವಾರ್ಷಿಕ ವಿಶೇಷ ಶಿಬಿರ-2023-24, ಅಧ್ಯಕ್ಷತೆ : ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ ಪ್ರಾಂಶುಪಾಲ ಡಾ. ಮಹೇಶ್ ದಳಪತಿ, ಸಹಾಯಕ ಪ್ರಾಧ್ಯಾಪಕ ಡಾ. ಟಿ. ರಮೇಶ್ ಅವರಿಂದ ಗ್ರಾಮೀಣ ಅಭಿವೃದ್ಧಿಯಲ್ಲಿ ಯುವಜನರ ಪಾತ್ರ ಕುರಿತು ಉಪನ್ಯಾಸ, ಮುಖ್ಯ ಅತಿಥಿಗಳು : ಸಿಂಧುವಳ್ಳಿ ಗ್ರಾಪಂ ಸದಸ್ಯರಾದ ಎಂ. ರಾಮೇಗೌಡ, ನಂಜುಂಡ, ಬಿ.ಎಂ. ಮಹದೇವ, ಶ್ರೀಮತಿ ಛಾಯಾ, ಪಾಪಣ್ಣ, ಗ್ರಾಪಂ ಕಾರ್ಯದರ್ಶಿ ಹೆಚ್.ಎಸ್. ಮಂಜುನಾಥ್, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸಿಂಧುವಳ್ಳಿ, ಮೈಸೂರು ತಾಲೂಕು, ಸಂಜೆ 4ಕ್ಕೆ.



ಇನ್ನು 4 ದಿನದಲ್ಲಿ ಬಿಜೆಪಿ ಬಂಡಾಯ ಶಮನದ ಮ್ಯಾಜಿಕ್

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರತಿಕ್ರಿಯೆ

- ಟಿಕೆಟ್ ಹಂಚಿಕೆಯಲ್ಲಿ ನಮ್ಮೊಬ್ಬರ ತೀರ್ಮಾನವಾಗಿಲ್ಲ
- ಮೋದಿ ಅಲೆಗೆ ಹೆದರಿ ಸಚಿವರು ಕಣದಿಂದ ಹಿಂದಕ್ಕೆ
- ಬಿಜೆಪಿ ಶಕ್ತಿಗೆ, ಜೆಡಿಎಸ್ ಪಕ್ಷದ ಮತ್ತೊಂದು ಶಕ್ತಿ ಸೇರಿದೆ
- ಯಾವುದು ಪ್ಲಸ್, ಮೈನಸ್ ಅಂತಾ ಜನರು ತೀರ್ಮಾನಿಸುತ್ತಾರೆ





ಚಾಮುಂಡಿಬೆಟ್ಟದಲ್ಲಿ ಬುಧವಾರ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಚಾಮರಾಜನಗರ ಬಿಜೆಪಿ ಅಭ್ಯರ್ಥಿ ಬಾಲರಾಜ್, ಮಾಜಿ ಶಾಸಕ ಎಲ್.ನಾಗೇಂದ್ರ ನಾಡದೇವತೆ ತಾಯಿ ಚಾಮುಂಡೇಶ್ವರಿ ದರ್ಶನ ಪಡೆದರು. ಮತ್ತೊಂದು ಚಿತ್ರದಲ್ಲಿ ಬೆಟ್ಟದಲ್ಲಿ ಗೋಮಾತೆಗೆ ಪೂಜೆ ಸಲ್ಲಿಸಿದರು. ಈ ವೇಳೆ ಮಾಜಿ ಶಾಸಕ ಎಸ್.ಎ.ರಾಮದಾಸ್, ಎಲ್.ಆರ್.ಮಹದೇವಸ್ವಾಮಿ ಇದ್ದಾರೆ.

ಮೈಸೂರು, ಮಾ.27(ಬಿಎಲ್‌ಯು)– ಲೋಕಸಭಾ ಚುನಾವಣೆ ಅಭ್ಯರ್ಥಿಗಳ ಆಯ್ಕೆ ವಿಷಯದಲ್ಲಿ ಎದುರಾಗಿರುವ ಬಂಡಾಯ ಶಮನಕ್ಕೆ ಇನ್ನು 4 ದಿನದಲ್ಲಿ ಮ್ಯಾಜಿಕ್ ನಡೆಯಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಬಂಡಾಯವಿರುವ ಕ್ಷೇತ್ರಗಳಿಗೆ ಸ್ವತಃ ಯಡಿಯೂರಪ್ಪ ಅವರೇ ಭೇಟಿ ನೀಡಿ ಭಿನ್ನಮತ ಶಮನ ಮಾಡುತ್ತಿದ್ದಾರೆ. ಶಿವಮೊಗ್ಗದಲ್ಲಿ ಈಶ್ವರಪ್ಪ ಬಂಡಾಯ ಸೇರಿದಂತೆ ಎಲ್ಲಾ ಬಂಡಾಯ ಇನ್ನು ನಾಲ್ಕು ದಿನದಲ್ಲಿ ಸುಸೂತ್ರವಾಗಿ ಬಗೆಹರಿಯುತ್ತದೆ. ಈ ಮೂಲಕ ಬಂಡಾಯ ಶಮನದ ಮ್ಯಾಜಿಕ್ ಯಾವ ರೀತಿ ಇರುತ್ತದೆ ಎಂಬುದನ್ನು ನೋಡುತ್ತಿರಿ ಎಂದು ಅಚ್ಚರಿ ಹೇಳಿಕೆ ನೀಡಿದರು.

ಬಿಜೆಪಿ ನಮ್ಮ ಕುಟುಂಬದ ಹಿಡಿತದಲ್ಲಿದೆ, ಕೆಲವರಿಗೆ ನಾವೇ ಟಿಕೆಟ್ ತಪ್ಪಿಸಿದ್ದೇವೆ ಎಂಬ ಈಶ್ವರಪ್ಪ ಸೇರಿದಂತೆ ಕೆಲವರ ಆರೋಪಕ್ಕೆ ಪ್ರತಿಕ್ರಿಯೆ ನೀಡಿದ ವಿಜಯೇಂದ್ರ, ಟಿಕೆಟ್ ಹಂಚಿಕೆ ಸೇರಿದಂತೆ ಪಕ್ಷದ ಎಲ್ಲಾ ನಿರ್ಧಾರವನ್ನು ನಾನಾಗಲೀ, ಯಡಿಯೂರಪ್ಪ ಅವರಾಗಲೀ ತೆಗೆದುಕೊಳ್ಳಲು ಸಾಧ್ಯವಿಲ್ಲ. ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ.ನಡ್ಡಾ ಸಮಾಲೋಚನೆ ಮಾಡಿ ತೀರ್ಮಾನ ಮಾಡುತ್ತಾರೆ. ಬಿಜೆಪಿ ಹೈಕಮಾಂಡ್ ಬಲಿಷ್ಠವಾಗಿದೆ. ಇದರಿಂದ ಪಕ್ಷ ನಮ್ಮ ಮಾತು ಕೇಳಿಕೊಂಡು ಎಲ್ಲಾ ನಿರ್ಧಾರ ಮಾಡುತ್ತದೆ ಎಂಬುದು ತಪ್ಪು ಎಂದು ವಿಜಯೇಂದ್ರ ಸ್ಪಷ್ಟಪಡಿಸಿದರು.

ಲೋಕಸಭಾ ಚುನಾವಣೆಯಲ್ಲಿ 20 ಸ್ಥಾನ ಗೆಲ್ಲುತ್ತೇವೆ ಎಂದು ಕಾಂಗ್ರೆಸ್‌ನವರು ಹೇಳುತ್ತಾ, ತಮ್ಮ ಸಂಪುಟದ 18 ಸಚಿವರನ್ನು ಕಣಕ್ಕಿಳಿಸಲು ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಮುಂದಾಗಿದ್ದರು. ಆದರೆ ಸೋಲುವ ಭಯದಿಂದ ಬಹಳಷ್ಟು ಸಚಿವರು ಸ್ಪರ್ಧೆಯಿಂದ ಹಿಂದೆ ಸರಿದಿದ್ದಾರೆ. ಅವರೆಲ್ಲಾ ನರೇಂದ್ರ ಮೋದಿ ಅಲೆಗೆ ಹೆದರಿದ್ದಾರೆ ಎಂದು ಗೇಲಿ ಮಾಡಿದರು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಜನರಿಗೆ ಶಾಪವಾಗಿದೆ. ಕಡಿಮೆ ಅವಧಿಯಲ್ಲಿ ಜನಪ್ರಿಯತೆ ಕಳೆದುಕೊಂಡ ಏಕೈಕ ಸರ್ಕಾರವಾಗಿದೆ. ಬಡವರು, ಶೋಷಿತರು, ರೈತರ ಯಾರ ಪರವಾಗಿಲ್ಲದ ಈ ಸರ್ಕಾರದಿಂದ ಜನರು ಬೇಸತ್ತಿದ್ದಾರೆ. ಇದರಿಂದ ಕೆಲವು ಕಡೆ ಬಿಜೆಪಿ ಮುಖಂಡರನ್ನು ಸೆಳೆಯಲು ಮುಂದಾಗಿದ್ದಾರೆ ಎಂದು ವಿಜಯೇಂದ್ರ ಆರೋಪಿಸಿದರು.

ಗೊಂದಲವಿಲ್ಲ: ಬಿಜೆಪಿ ಮತ್ತು ಜೆಡಿಎಸ್ ನಡುವೆ ಯಾವುದೇ ಗೊಂದಲವಿಲ್ಲ, ಎರಡು ಪಕ್ಷದವರು ಒಗ್ಗಟ್ಟಾಗಿದ್ದೇವೆ. ಬಿಜೆಪಿ ಅಲೆ ಇದ್ದು, ಇದಕ್ಕೆ ಜೆಡಿಎಸ್ ಶಕ್ತಿ ಕೂಡ ಸೇರಿದೆ. ಇದರಿಂದ ಮೈಸೂರು–ಕೊಡಗು ಹಾಗೂ ಚಾಮರಾಜನಗರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಗಳು ದಾಖಲೆ ಮತಗಳ ಅಂತರದಿಂದ ಗೆಲ್ಲುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿಯಿಂದ ನಮಗೆ ಪ್ಲಸ್ ಪಾಯಿಂಟ್ ಆಗುತ್ತದೆ ಎಂಬ ಸಿದ್ದರಾಮಯ್ಯ ಹೇಳಿಕೆಗೆ ತಿರುಗೇಟು ನೀಡಿದ ವಿಜಯೇಂದ್ರ, ಯಾವುದು ಪ್ಲಸ್, ಯಾವುದು ಮೈನಸ್ ಎಂದು ಜನರು ತೀರ್ಮಾನ ಮಾಡುತ್ತಾರೆ. ಬಿಜೆಪಿಗೆ ಜನರಿಂದ ಸಿಗುತ್ತಿರುವ ಅಭೂತಪೂರ್ವ ಬೆಂಬಲ ನೋಡಿ ಭಯದಿಂದ ಕಾಂಗ್ರೆಸ್‌ನವರು ಇಂತಹ ಹೇಳಿಕೆ ನೀಡುತ್ತಿದ್ದಾರೆ. ಜೆಡಿಎಸ್ ಹಾಗೂ ಬಿಜೆಪಿ ನಡುವೆ ಸಮನ್ವಯತೆ ಇದ್ದು, ಒಂದಾಗಿ ಚುನಾವಣೆ ಮಾಡುತ್ತಿದ್ದೇವೆ ಎಂದು ವಿಜಯೇಂದ್ರ ತಿಳಿಸಿದರು.

ಬಿಜೆಪಿ ಟಾರ್ಗೆಟ್ 400ಕ್ಕೆ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಸಂಕಲ್ಪ

ನಿನ್ನೆಯೇ ಮೈಸೂರಿಗೆ ಆಗಮಿಸಿದ ವಿಜಯೇಂದ್ರ ಇಂದು ಬೆಳಿಗ್ಗೆ ಚಾಮುಂಡಿಬೆಟ್ಟಕ್ಕೆ ತೆರಳಿ ನಾಡದೇವತೆ ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದರು. ತರುವಾಯ ಬೆಟ್ಟದಲ್ಲಿ ಜಾನಪದ ಕಲಾ ತಂಡಗಳ ಮೆರವಣಿಗೆಯಲ್ಲಿ ಗೋಮಾತೆಗೆ ಪೂಜೆ ಸಲ್ಲಿಸುವ ಸ್ಥಳಕ್ಕೆ ವಿಜಯೇಂದ್ರ ಆಗಮಿಸಿದರು. ಈ ಸಂದರ್ಭದಲ್ಲಿ ಗೋಮಾತೆಗೆ ಮೇವು, ಕಬ್ಬು ಹಾಗೂ ನೀರು ನೀಡಿ ರಾಜ್ಯಕ್ಕೆ ಎದುರಾಗಿರುವ ಬರಗಾಲದ ಸಂಕಷ್ಟದಿಂದ ಪಾರು ಮಾಡುವಂತೆ ದೇವರನ್ನು ಬೇಡಿದರು. ಈ ವೇಳೆ ಮಾತನಾಡಿದ ವಿಜಯೇಂದ್ರ, ಮೋದಿ ಅವರು ಮತ್ತೊಮ್ಮೆ ಪ್ರಧಾನಿ ಆಗಬೇಕೆಂದು ಚಾಮುಂಡೇಶ್ವರಿ ದೇವಿಯಲ್ಲಿ ಪ್ರಾರ್ಥನೆ ಸಲ್ಲಿಸಿದ್ದೇನೆ ಎಂದರು. ದೇಶದಲ್ಲಿ ಭಾರಿ ಜನಪ್ರಿಯತೆ ಗಳಿಸಿರುವ ನರೇಂದ್ರ ಮೋದಿ ಟಾರ್ಗೆಟ್ 400 ತಲುಪಲು ಸಂಕಲ್ಪ ಮಾಡಿದ್ದಾರೆ. ಅದು ಯಶಸ್ವಿಯಾಗಲಿ ಎಂದು ತಾಯಿ ಚಾಮುಂಡೇಶ್ವರಿಯಲ್ಲಿ ಪ್ರಾರ್ಥನೆ ಮಾಡಿದ್ದೇನೆ ಎಂದು ವಿಜೇಯಂದ್ರ ತಿಳಿಸಿದರು.

ಯಾವುದೇ ಸ್ಥಾನಮಾನಕ್ಕೆ ಆಸೆ ಪಟ್ಟು ಕಾಂಗ್ರೆಸ್ ಸೇರಿಲ್ಲ

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಸ್ಪಷ್ಟನೆ



ಮೈಸೂರು, ಮಾ.27(ಬಿಎಲ್‌ಯು)– ನಾನು ಯಾವುದೇ ಸ್ಥಾನಮಾನಕ್ಕೆ ಆಸೆ ಪಟ್ಟು ಕಾಂಗ್ರೆಸ್‌ಗೆ ಸೇರಿಲ್ಲ, ರಾಜ್ಯ ಸರ್ಕಾರದ ಜನಪರ ಕೆಲಸಗಳನ್ನು ಮೆಚ್ಚಿ ಸೇರಿದ್ದೇನೆ ಎಂದು ಕಾಂಗ್ರೆಸ್ ಪಕ್ಷಕ್ಕೆ ಇಂದು ಸೇರ್ಪಡೆಗೊಂಡ ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಸ್ಪಷ್ಟಪಡಿಸಿದರು.

ನಾನು ಮೂರು ದಶಕಗಳಿಂದ ಸಾಮಾಜಿಕ, ಸಹಕಾರ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಕೆಲಸ ಮಾಡಿದ್ದೇನೆ. ಆದರೆ ಬಿಜೆಪಿಯಲ್ಲಿ ನಾನು ಮಾಡಿದ ಕೆಲಸಕ್ಕೆ ಗೌರವ ಹಾಗೂ ಮಾನ್ಯತೆ ಸಿಗಲಿಲ್ಲ ಎಂದು ಆರೋಪಿಸಿದರು. ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು, ಜನಪರ ಕೆಲಸಗಳನ್ನು ಮೆಚ್ಚಿ ಕಾಂಗ್ರೆಸ್‌ಗೆ ಸೇರಿದ್ದೇನೆ. ನುಡಿದಂತೆ ನಡೆಯುವ ಏಕೈಕ ರಾಜಕಾರಣಿ ಅಂದರೆ ಅದು ಸಿದ್ದರಾಮಯ್ಯ. ಚುನಾವಣಾ ಪೂರ್ವದಲ್ಲಿ ಘೋಷಿಸಿದ್ದ ಗ್ಯಾರಂಟಿ ಯೋಜನೆಗಳ ಬಗ್ಗೆ ಟೀಕೆ ಮಾಡಿದರು. ಆದರೆ ಸರ್ಕಾರ ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ಅದನ್ನು ಜಾರಿಗೊಳಿಸಿದರು. ಈ ಮೂಲಕ ಕೊಟ್ಟ ಮಾತನ್ನು ಸಿದ್ದರಾಮಯ್ಯ ಉಳಿಸಿಕೊಂಡಿದ್ದಾರೆ. ಸಿದ್ದರಾಮಯ್ಯ ನಮ್ಮ ಜಿಲ್ಲೆಯವರು ಎಂಬ ಪ್ರೀತಿ, ಗೌರವವಿದೆ. ಈ ಎಲ್ಲಾ ಕಾರಣಗಳಿಂದ ನಾನು ಕಾಂಗ್ರೆಸ್ ಸೇರಿದ್ದೇನೆ ಎಂದು ರಾಜೀವ್ ಪುನರ್ ಸ್ಪಷ್ಟಪಡಿಸಿದರು.

ಈಗ ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಅವರನ್ನು ನಾವು ಗೆಲ್ಲಿಸೋಣ. ಈ ಮೂಲಕ ಕಾಂಗ್ರೆಸ್ ಪಕ್ಷವನ್ನು ಮತ್ತಷ್ಟು ಬಲಪಡಿಸೋಣ ಎಂದು ತಮ್ಮ ಅಭಿಮಾನಿಗಳಿಗೆ ರಾಜೀವ್ ಕರೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ತನ್ವೀರ್ ಸೇಠ್, ರಾಜೀವ್ ಮತ್ತು ಇತರರು ಇಂದು ಕಾಂಗ್ರೆಸ್ ಸೇರಿದ್ದಾರೆ. ಇವರ ಗೌರವಕ್ಕೆ ಧಕ್ಕೆ ಬಾರದಂತೆ ನಡೆಸಿಕೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಕೇಂದ್ರದ ಬಿಜೆಪಿ ಸರ್ಕಾರ ಉದ್ಯಮಿಗಳ ಪರವಾಗಿ ಕೆಲಸ ಮಾಡಿದೆ. ಸಾಮಾನ್ಯ ಜನರ ಅಭಿವೃದ್ಧಿ ಬಗ್ಗೆ ಕಾಳಜಿ ತೋರದ ಈ ದುಷ್ಟ ಸರ್ಕಾರ ದಮನ ಮಾಡಬೇಕು. ಈ ಹಿನ್ನೆಲೆಯಲ್ಲಿ ಲೋಕಸಭಾ ಚುನಾವಣೆಯಲ್ಲಿ ನಮ್ಮ ಅಭ್ಯರ್ಥಿ ಲಕ್ಷ್ಮಣ ಅವರನ್ನು ಗೆಲ್ಲಿಸಿ, ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರವನ್ನು ಅಸ್ತಿತ್ವಕ್ಕೆ ತರಬೇಕು ಎಂದು ತನ್ವೀರ್ ಸೇಠ್ ಮನವಿ ಮಾಡಿದರು.

ಸಿಎಂಗಳನ್ನೇ ಜೈಲಿಗೆ ಕಳುಹಿಸುತ್ತಿದ್ದರೂ ಚುನಾವಣಾ ಆಯೋಗ ಏನು ಮಾಡುತ್ತಿದೆ



ಐಟಿ, ಇಡಿಯನ್ನು ಅಸ್ತ್ರವಾಗಿ ಬಳಸಿಕೊಂಡು ಚುನಾವಣೆ ಸಂದರ್ಭದಲ್ಲಿ ಮುಖ್ಯಮಂತ್ರಿಗಳನ್ನೇ ಜೈಲಿಗೆ ಕಳುಹಿಸುತ್ತಿದ್ದರೂ ಚುನಾವಣಾ ಆಯೋಗ ಏನು ಮಾಡುತ್ತಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಪ್ರಶ್ನಿಸಿದರು. ಬಿಜೆಪಿಯವರು ಐಟಿ, ಇಡಿ ರಕ್ಷಣೆಯಲ್ಲಿ ಎಲ್ಲಾ ಕಡೆ ಹಣ ಸಾಗಿಸುತ್ತಿದ್ದಾರೆ. ಚುನಾವಣಾ ಬಾಂಡ್ ಮೂಲಕ ಹಣ ಪಡೆದಿದ್ದಾರೆ. ಜಾತಿ, ಧರ್ಮದ ಆಧಾರದ ಮೇಲೆ ಮತ ಕೇಳುತ್ತಿದ್ದಾರೆ. ಇಷ್ಟೆಲ್ಲಾ ಆಗುತ್ತಿದ್ದರೂ ಚುನಾವಣಾ ಆಯೋಗ ಏನು ಮಾಡುತ್ತಿದೆ ಎಂದು ಪ್ರಶ್ನಿಸಿದರು. ಇನ್ನು ಮಾಧ್ಯಮಗಳು ಕೂಡ ಬಿಜೆಪಿ ಹಿಡಿತದಲ್ಲಿವೆ. ಸತ್ಯ ಹೇಳಿದರೆ ಅವರ ಕಂಪನಿ ಮುಚ್ಚಿಸುವ ಕೆಲಸ ಮಾಡಲಾಗುತ್ತಿದೆ. ಈ ಮೂಲಕ ಬಿಜೆಪಿ ಎಲ್ಲೆಲ್ಲೂ ಭಯದ ವಾತಾವರಣ ನಿರ್ಮಾಣ ಮಾಡಿದೆ ಎಂದು ಆಪಾದಿಸಿದರು. ಲೋಕಸಭಾ ಚುನಾವಣೆಯಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬಂದರೆ ಪ್ರಜಾಪ್ರಭುತ್ವ ವ್ಯವಸ್ಥೆ ಜೀವಂತವಾಗಿ ಇರುತ್ತದೆಯೇ ಎಂಬ ಅನುಮಾನಗಳು ಕಾಡುತ್ತಿವೆ. ಆದ ಕಾರಣ ಜನರು ಬಿಜೆಪಿ ಬಿಟ್ಟು ಕಾಂಗ್ರೆಸ್ ಬೆಂಬಲಿಸಬೇಕು. ನರೇಂದ್ರ ಮೋದಿ ಹೆದರಿಸುವ ಏಕೈಕ ರಾಜಕಾರಣಿ ಸಿದ್ದರಾಮಯ್ಯ ಪಕ್ಷಕ್ಕೆ ಮತ ನೀಡಬೇಕು ಎಂದು ದಿನೇಶ್ ಗುಂಡೂರಾವ್ ಮನವಿ ಮಾಡಿದರು.

ಸೋಲಿನ ಹತಾಶೆಯಿಂದ ಕಾಂಗ್ರೆಸ್ಸಿಗರು ಬುದ್ಧಿ ಸ್ಥಿಮಿತ ಕಳೆದುಕೊಂಡಿದ್ದಾರೆ

- ಪ್ರಧಾನಿ ಮೋದಿ ವಿರುದ್ಧ ಹೇಳಿಕೆಗೆ ವಿಪಕ್ಷ ನಾಯಕ ಆರ್.ಅಶೋಕ್ ತಿರುಗೇಟು
- ಅವರು ಹೇಳಿರುವುದೇ ಅವರಿಗೆ ತಿರುಮಂತ್ರವಾಗುತ್ತಾ ಬಂದಿದೆ

ಬೆಂಗಳೂರು, ಮಾ.27(ಕೆಎಂಶಿ)– ಕಾಂಗ್ರೆಸ್ ನಾಯಕರು ಸೋಲಿನ ಹತಾಶೆಯಿಂದ ಮನಸ್ಸಿಗೆ ಬಂದಂತೆ ಮಾತನಾಡುತ್ತಿದ್ದಾರೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಇಂದಿಲ್ಲಿ ಆರೋಪಿಸಿದ್ದಾರೆ.

ಬಿಜೆಪಿ ಲೋಕಸಭಾ ಚುನಾವಣಾ 2024ರ ಮಾಧ್ಯಮ ಕೇಂದ್ರದಲ್ಲಿ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಸೋಲು ಕಣ್ಮುಂದೆ ಬಂದಾಗ ಯಾವನೇ ಒಬ್ಬ ಮನುಷ್ಯ ಹತಾಶನಾಗುತ್ತಾನೆ, ಬುದ್ಧಿ ಸ್ಥಿಮಿತ ಕಳೆದುಕೊಂಡಾಗ ಈ ತರಹದ ಹೇಳಿಕೆಗಳು ಬರುತ್ತವೆ ಎಂದರು.

ಕಾಂಗ್ರೆಸ್, ಒಂದು ರೀತಿ ಸೋಲನ್ನು ಈಗಲೇ ಒಪ್ಪಿಕೊಂಡು ಬುದ್ಧಿ ಭ್ರಮಣೆಗೆ ಒಳಗಾದಂತಿದೆ. ಮೋದಿ ಅವರ ಜಾತಿ ಕುರಿತ ಹೇಳಿಕೆ ಪ್ರಕರಣದಲ್ಲಿ ರಾಹುಲ್ ಗಾಂಧಿ ಅವರಿಗೆ ಜೈಲು ಶಿಕ್ಷೆಯಾಗಿದೆ, ಅವರು ಜಾಮೀನಿನಲ್ಲಿದ್ದಾರೆ, ಇಷ್ಟಾದರೂ 'ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ' ಎಂಬಂತೆ ರಾಹುಲ್ ಗಾಂಧಿಯ ಸ್ಥಿತಿ ಕಾಂಗ್ರೆಸ್ಸಿಗೆ ಅಂಟಿಕೊಂಡಿದೆ. ಶಿವರಾಜ್ ತಂಗಡಗಿ ಹಿಂದೆ ಬಿಜೆಪಿಯಲ್ಲಿದ್ದರು, ಸಚಿವರೂ ಆಗಿದ್ದರು. ಸಕ್ಕರೆ ತಿನ್ನಲು ಬಿಟ್ಟಿದ್ದೆವು, ಆಗ ಸೋನಿಯಾ ಗಾಂಧಿಗೆ ಹೊಡೆಯಿರಿ ಎನ್ನುತ್ತಿದ್ದರು. ಈಗ ಕಾಂಗ್ರೆಸ್ಸಿನಲ್ಲಿದ್ದಾರೆ, ಮೋದಿಗೆ ಹೊಡೆಯಿರಿ ಎನ್ನುತ್ತಾರೆ. ಅವರ ಹೇಳಿಕೆ ಅವರಿಗೇ ತಿರುಗುಬಾಣವಾಗುವ ಸ್ಥಿತಿಯನ್ನೂ ನೋಡುತ್ತಿದ್ದೇವೆ ಎಂದರು.



ಕರ್ನಾಟಕದ ಸಂಸ್ಕೃತಿಯನ್ನು ಎತ್ತಿ ಹಿಡಿಯಬೇಕಾದ ಇವರು ಸುಸಂಸ್ಕೃತಿ ಸಚಿವರಾ, ಅವರು ಆ ಖಾತೆಗೆ ಲಾಯಕ್ಕಾ ಎಂಬುದನ್ನು ಕಾಂಗ್ರೆಸ್ ಯೋಚಿಸಲಿ ಎಂದರು. ಸಂಸ್ಕೃತಿ ಇಲ್ಲದವರು ಸಂಸ್ಕೃತಿ ಸಚಿವರು, ರಾಜ್ಯಕ್ಕೆ ನೀರು ಕೊಡಲು ಯೋಗ್ಯತೆ ಇಲ್ಲದವರು ನೀರಾವರಿ ಸಚಿವರು, ಕೆಆರ್‌ಎಸ್ ಖಾಲಿ, ಆಲಮಟ್ಟಿ ಖಾಲಿ, ಕಬಿನಿ ಖಾಲಿ, ಈ ಖಾಲಿ ಮಾಡುವವರೇ ನೀರಾವರಿ ಸಚಿವರಾಗಿದ್ದಾರೆ ಎಂದು ವ್ಯಂಗ್ಯವಾಡಿದರು.

ಹಿಂದೆ ಚಾಯ್‌ವಾಲಾ ಎಂದಿದ್ದರು, ಬಳಿಕ ಚಾಯ್ ಪೇ ಚರ್ಚಾ ಬಂತು, ಭಾರತದಲ್ಲಿ ಚಾಯ್‌ವಾಲಾ ಕೂಡ ಪ್ರಧಾನಿ ಆಗಲು ಸಾಧ್ಯ ಎಂಬ ಸಂದೇಶ ನೀಡಲಾಗಿದೆ. ಆಮೇಲೆ ಚೌಕಿದಾರ್ ಚೋರ್ ಎಂದರು. ನಾವು ಅದನ್ನೇ ಅಸ್ತ್ರ ಮಾಡಿಕೊಂಡೆವು, ಆಗಲಾದರೂ ಕಾಂಗ್ರೆಸ್ ಬುದ್ಧಿ ಕಲಿಯಬೇಕಿತ್ತು.

ಲಾಲೂ ಪ್ರಸಾದ್ ಯಾದವ್ ಅವರು ಮೋದಿ ಅವರಿಗೆ ಪರಿವಾರ ಇಲ್ಲ ಎಂದರು. ನಾವು ಇಡೀ ದೇಶವೇ ಮೋದಿ ಪರಿವಾರ ಎಂದು ಉತ್ತರ ಕೊಟ್ಟೆವು. ಈಗ ಶಿವರಾಜ್ ತಂಗಡಗಿ ಕೂಡ ನಾಲಿಗೆ ಹರಿಬಿಟ್ಟಿದ್ದಾರೆ, ಮೋದಿ ಅವರಿಗೆ ಜೈ ಎನ್ನುವವರಿಗೆ ಕಪಾಳಕ್ಕೆ ಹೊಡೆಯಿರಿ ಎಂದಿದ್ದಾರೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಪ್ರಹ್ಲಾದ್ ಜೋಶಿ ಬದಲಾವಣೆಗೆ ದಿಂಗಾಲೇಶ್ವರ ಸ್ವಾಮೀಜಿ ಮಾ.31ರ ಗಡುವು



ಹುಬ್ಬಳ್ಳಿ: ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಲಿಂಗಾಯತ ಮತ್ತು ಉಳಿದ ಸಮಾಜವನ್ನು ತುಳಿಯುತ್ತಿದ್ದಾರೆ. ಸ್ವಾಮೀಜಿಗಳನ್ನು ಅಪಮಾನಗೊಳಿಸಿದ್ದಾರೆ. ಧಾರವಾಡ ಲೋಕಸಭಾ ಕ್ಷೇತ್ರದಿಂದ ಅವರಿಗೆ ನೀಡಿರುವ ಟಿಕೆಟ್ ಅನ್ನು ಬಿಜೆಪಿ ವರಿಷ್ಠರು ಮಾ. 31ರೊಳಗೆ ಬದಲಾವಣೆ ಮಾಡಬೇಕು ಎಂದು ಶಿರಹಟ್ಟಿಮಠದ ಫಕೀರ ದಿಂಗಾಲೇಶ್ವರ ಮಹಾಸ್ವಾಮಿಗಳು ಆಗ್ರಹಿಸಿದ್ದಾರೆ.

ಮೂರು ಸಾವಿರ ಮಠದ ಆವರಣದಲ್ಲಿ ವಿವಿಧ ಸ್ವಾಮೀಜಿಗಳೊಂದಿಗೆ ಚಿಂತನ – ಮಂಥನ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಟಿಕೆಟ್ ಬದಲಾವಣೆ ಆಗದಿದ್ದರೆ, ಏಪ್ರಿಲ್ 2 ರಂದು ಮತ್ತೊಮ್ಮೆ ಸಭೆ ನಡೆಸಿ, ನಿರ್ಧಾರ ಪ್ರಕಟಿಸಲಾಗುವುದು ಎಂದು ತಿಳಿಸಿದರು. ಪ್ರಹ್ಲಾದ್ ಜೋಶಿ ಅವರಿಗೆ ಅಧಿಕಾರ ಮತ್ತು ಸಂಪತ್ತಿನ ಮದವೇರಿದ್ದು, ಲಿಂಗಾಯತ, ಕುರುಬ ಸೇರಿದಂತೆ ಎಲ್ಲ ಸಮುದಾಯವನ್ನು ತುಳಿದಿದ್ದಾರೆ. ಸ್ವಾಮೀಜಿಗಳನ್ನು ಅವಮಾನಿಸಿದ್ದಾರೆ. ನಮ್ಮ ವಿರೋಧ ಅವರ ವ್ಯಕ್ತಿತ್ವಕ್ಕೆ ಹೊರತು, ಪಕ್ಷ ಅಥವಾ ಸಮಾಜಕ್ಕೆ ಅಲ್ಲ ಎಂದು ಇದೇ ವೇಳೆ ಶ್ರೀಗಳು ಸ್ಪಷ್ಟಪಡಿಸಿದರು.

ಕೇಂದ್ರ ಸಚಿವರು ಏಕಸ್ವಾಮ್ಯತ್ವವನ್ನು ಸಾಧಿಸುತ್ತಿದ್ದಾರೆ. ಹೀಗಾಗಿ ಧಾರವಾಡ ಲೋಕಸಭಾ ಕ್ಷೇತ್ರಕ್ಕೆ ಸೂಕ್ತ ಅಭ್ಯರ್ಥಿಯನ್ನು ಹಾಕಬೇಕು ಎಂದು ಬಿಜೆಪಿ ಹೈಕಮಾಂಡ್‌ಗೆ ಶ್ರೀಗಳು ಗಡುವು ನೀಡಿದ್ದಾರೆ. ಏ.2 ರಂದು ಜೋಶಿ ಅವರ ಕ್ಷೇತ್ರ ಬದಲಾವಣೆ ವಿಚಾರಕ್ಕೆ ಸಂಬಂಧಿಸಿದಂತೆ ಮತ್ತೊಮ್ಮೆ ನೂರಾರು ಮಠಾಧೀಶರ ಸಮ್ಮುಖದಲ್ಲಿ ಸಭೆ ನಡೆಸಲಾಗುವುದು. ಅಲ್ಲಿ ಮುಂದಿನ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ ಎಂದು ಶ್ರೀಗಳು ತಿಳಿಸಿದ್ದಾರೆ. ಮಾಜಿ ಸಿಎಂ ಜಗದೀಶ್ ಶೆಟ್ಟರ್ ಅವರು ಕ್ಷೇತ್ರ ತ್ಯಾಗ ಮಾಡಿದಂತೆ ಅವರು ಕೂಡ ಕ್ಷೇತ್ರವನ್ನು ತ್ಯಾಗ ಮಾಡಬೇಕು ಎಂದ ಶ್ರೀಗಳು, ಜೋಶಿಯವರಿಗೆ ಚುನಾವಣೆ ಬಂದಾಗ ಮಾತ್ರ ವೀರಶೈವ ಲಿಂಗಾಯತ ಸಮಾಜ ಹಾಗೂ ಇತರ ಸಮಾಜಗಳು ನೆನಪಾಗುತ್ತವೆ. ಅವರ ನಡೆ ನುಡಿ ಬದಲಾಗಿದೆ. ಅವರು ಬಹಳಷ್ಟು ಸಮಾಜವನ್ನು ತುಳಿದಿದ್ದಾರೆ. ಅಲ್ಲದೇ ಮಠಾಧೀಶರಿಗೆ ನೋವು ಕೊಟ್ಟಿದ್ದಾರೆ. ಬಹಳಷ್ಟು ಕಾರ್ಯಕರ್ತರನ್ನು ತುಳಿದಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದ ಅವರು, ರಾಜಕೀಯ ನಾಯಕರಾಗಿ ಅವರು ಇಲ್ಲಿ ಉಳಿಯಲು ಸಾಧ್ಯವಿಲ್ಲ ಎಂದು ಹೇಳಿದರು.

ಜೋಶಿಯವರಿಗೆ ಬೇರೆ ಕ್ಷೇತ್ರಕ್ಕೆ ಟಿಕೆಟ್ ನೀಡಬೇಕು. ನಮ್ಮ ಕಡೆಯಿಂದ ಸದ್ಯಕ್ಕೆ ಯಾವುದೇ ಅಭ್ಯರ್ಥಿಯನ್ನು ಘೋಷಣೆ ಮಾಡುವುದಿಲ್ಲ. ಇಲ್ಲವಾದರೆ ಏ.2ರಂದು ನಮ್ಮ ನಿರ್ಧಾರ ಮಾಡಬೇಕಾಗುತ್ತದೆ ಎಂದು ಅವರು ಇದೇ ವೇಳೆ ಹೇಳಿದರು.

ಉತ್ತರ ಭಾರತದಲ್ಲಿ ಸಾಧು–ಸಂತರು ರಾಜಕಾರಣ ಮಾಡುತ್ತಾರೆ. ಆ ಮಾದರಿಯಲ್ಲಿ ದಕ್ಷಿಣ ಭಾರತದಲ್ಲಿ ರಾಜಕೀಯ ಪಕ್ಷ ಸೇರಿ ನಿಲ್ಲಬೇಕೋ ಬೇಡವಾ ಎಂದು ಮಠಾಧೀಶರು ನಿರ್ಣಯ ತೆಗೆದುಕೊಂಡಿದ್ದಾರೆ. ಈ ವಿಚಾರವಾಗಿ ಸರ್ವಾನುಮತದಿಂದ ನಿರ್ಣಯ ಕೈಗೊಳ್ಳಲಾಗಿದ್ದು, ಅಪಸ್ವರ ಎತ್ತಿಲ್ಲ ಎಂದರು. ಸುದ್ದಿಗೋಷ್ಠಿಯಲ್ಲಿ ವಿವಿಧ ಭಾಗಗಳಿಂದ ಆಗಮಿಸಿದ್ದ 40ಕ್ಕೂ ಹೆಚ್ಚು ಮಠಾಧೀಶರು ಉಪಸ್ಥಿತರಿದ್ದರು.

ವಿಧಾನಪರಿಷತ್ ಸದಸ್ಯ ಸ್ಥಾನಕ್ಕೆ ತೇಜಸ್ವಿನಿಗೌಡ ರಾಜೀನಾಮೆ



ಬೆಂಗಳೂರು, ಮಾ.27–ಬಿಜೆಪಿ ಪಕ್ಷದ ವಿಧಾನಪರಿಷತ್ ಸದಸ್ಯೆ ತೇಜಸ್ವಿನಿ ಗೌಡ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ.

ಸಭಾಪತಿ ಬಸವರಾಜ ಹೊರಟ್ಟಿ ಅವರನ್ನು ಭೇಟಿ ಮಾಡಿದ ತೇಜಸ್ವಿನಿ ಗೌಡ ರಾಜೀನಾಮೆ ಸಲ್ಲಿಕೆ ಮಾಡಿದ್ದಾರೆ. ಈ ಕುರಿತು ಮಾಹಿತಿ ನೀಡಿದ ಹೊರಟ್ಟಿ ಅವರು, ಬಿಜೆಪಿಯ ತೇಜಸ್ವಿನಿಗೌಡ ರಾಜೀನಾಮೆ ನೀಡಿದ್ದಾರೆ.

ವೈಯಕ್ತಿಕ ಕಾರಣಗಳಿಂದ ರಾಜೀನಾಮೆ ನೀಡುತ್ತಿದ್ದೇನೆ ಎಂದು ಹೇಳಿದ್ದಾರೆ ಎಂದು ಸ್ಪಷ್ಟಪಡಿಸಿದ್ದಾರೆ. ತೇಜಸ್ವಿನಿ ಅವರ ಅವಧಿ ಜೂನ್‌ವರೆಗೂ ಇತ್ತು, ಅವರೇ ಖುದ್ದು ಹಾಜರಾಗಿ ರಾಜೀನಾಮೆ ಕೊಟ್ಟ ಕಾರಣ ಸ್ವೀಕಾರ ಮಾಡಿದ್ದೇನೆ. ಯಾರೇ ಶಾಸಕರು ರಾಜೀನಾಮೆ ನೀಡಿದರೂ ನಮಗೆ ಮನವರಿಕೆ ಆದ ಮೇಲೆ ಸ್ವೀಕಾರ ಮಾಡೋದು, ಕೆಲವೊಮ್ಮೆ ಭಾವೋದ್ವೇಗಕ್ಕೆ ಒಳಗಾಗಿ, ಒತ್ತಡಗಳಿಗೆ ಒಳಗಾಗಿ ರಾಜೀನಾಮೆ ಕೊಡಬಹುದು. ಹೀಗಾಗಿ ಸ್ವಲ್ಪ ಸಮಯ ಅವಕಾಶ ನೀಡಿ ಆ ಬಳಿಕ ರಾಜೀನಾಮೆ ಸ್ವೀಕಾರ ಮಾಡ್ತೀವಿ ಎಂದು ಸ್ಪೀಕರ್ ತಿಳಿಸಿದ್ದಾರೆ. ತೇಜಸ್ವಿನಿ ಗೌಡ ಸದ್ಯದಲ್ಲೇ ಕಾಂಗ್ರೆಸ್ ಸೇರ್ಪಡೆಯಾಗಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಭಾಪತಿಗಳ ಕೊಠಡಿಯಲ್ಲಿ ಹೈಡ್ರಾಮಾ: ರಾಜೀನಾಮೆ ಪತ್ರ ತೋರಿಸಿದ ಕಾಂಗ್ರೆಸ್ ಎಂಎಲ್ಸಿಗಳು

ಬೆಂಗಳೂರು, ಮಾ.27– ಕೋಲಾರ ಕ್ಷೇತ್ರದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಸಚಿವ ಕೆ.ಹೆಚ್.ಮುನಿಯಪ್ಪ ಅವರ ಅಳಿಯ ಕೆ.ಜಿ.ಚಿಕ್ಕಪೆದ್ದಣ್ಣ ಅವರಿಗೆ ನೀಡಲು ಪಕ್ಷ ನಿರ್ಧಾರ ಮಾಡಿರುವ ಬೆನ್ನಲ್ಲೇ ಅದನ್ನು ಖಂಡಿಸಿ ಕೋಲಾರ ಭಾಗದ ಶಾಸಕರು, ವಿಧಾನ ಪರಿಷತ್ ಸದಸ್ಯರು ರಾಜೀನಾಮೆ ನೀಡಲು ಮುಂದಾದರು.

ಅಷ್ಟೇ ಅಲ್ಲದೆ ಇಂದು ಮಧ್ಯಾಹ್ನ ಬೆಂಗಳೂರಿನ ವಿಧಾನಸೌಧದಲ್ಲಿರುವ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿಯವರ ಕೊಠಡಿಗೆ ಸ್ವತಃ ಸಿಎಂ ರಾಜಕೀಯ ಕಾರ್ಯದರ್ಶಿ ಆಗಿರುವ ನಜೀರ್ ಅಹ್ಮದ್ ಮತ್ತು ಅನಿಲ್ ಅವರು ಬಸವರಾಜ ಹೊರಟ್ಟಿಯವರ ಮುಂದೆ ಬಂದು ಕುಳಿತು ಕ್ಯಾಮರಾ ಮುಂದೆ ರಾಜೀನಾಮೆ ಪತ್ರ ಪ್ರದರ್ಶಿಸಿದರು.

ಕೋಲಾರ ಬಣ ರಾಜಕೀಯ ತಡೆಯುವಲ್ಲಿ ಸಿಎಂ, ಡಿಸಿಎಂ ವಿಫಲರಾಗಿದ್ದಾರೆ. ಕೋಲಾರ ನಾಯಕರ ಪ್ರತಿಷ್ಠೆ ಮುಂದೆ ಸ್ವತಃ ಸಿಎಂ, ಡಿಸಿಎಂ ಫೇಲ್ ಆಗಿದ್ದಾರೆ. ಸಿಎಂ ಅತ್ಯಾಪ್ತರಾಗಿರುವ ಬಹುತೇಕ ಶಾಸಕರು ರಾಜೀನಾಮೆ ನೀಡುತ್ತೇವೆ ಎಂದಿದ್ದಾರೆ. ಈ ವೇಳೆ ಸಿಎಂ ಮತ್ತು ಡಿಸಿಎಂ ಅವರಿಗೆ ಕರೆ ಬಂದು ಸಾಯಂಕಾಲ ಬೆಂಗಳೂರಿಗೆ ಬಂದು ಮಾತನಾಡುತ್ತೇವೆ, ಯಾವುದಕ್ಕೂ ದುಡುಕು ನಿರ್ಧಾರ ಕೈಗೊಳ್ಳಬೇಡಿ ಎಂದರು. ಸಚಿವ ಭೈರತಿ ಸುರೇಶ್ ಸಭಾಪತಿಗಳ ಕೊಠಡಿಗೆ ಬಂದು ರಾಜೀನಾಮೆ ನೀಡದಂತೆ ತಡೆದು ಮನವೊಲಿಸಿದರು. ಈ ಹೈಡ್ರಾಮಾದ ಮಧ್ಯೆ, ತಾವು ರಾಜೀನಾಮೆ ಪತ್ರ ಸ್ವೀಕರಿಸುವುದಿಲ್ಲ, ಹಾಗೆ ತೆಗೆದುಕೊಳ್ಳಲು ಬರುವುದಿಲ್ಲ ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು. ಕೋಲಾರ ಎಂಎಲ್ಸಿಗಳು ಮತ್ತು ಶಾಸಕರು ರಾಜೀನಾಮೆ ನೀಡುವುದಾಗಿ ದೂರವಾಣಿ ಮೂಲಕ ಕರೆ ಮಾಡಿ ಹೇಳಿ ಬೆಳಗ್ಗೆ 11.30ರೊಳಗೆ ಬನ್ನಿ ಎಂದು ಸಮಯ ನೀಡಿದ್ದೆ. ಅಷ್ಟರೊಳಗೆ ಬಂದಿಲ್ಲ. ಮಧ್ಯಾಹ್ನ ಹೊತ್ತಿಗೆ ಬಿಳಿ ಕಾಗದದಲ್ಲಿ ಬರೆದು ತಂದಿದ್ದರು. ಇದನ್ನು ತೆಗೆದುಕೊಳ್ಳಲು ಬರುವುದಿಲ್ಲ, ಲೆಟರ್‌ಹೆಡ್‌ನಲ್ಲಿ ಅಧಿಕೃತವಾಗಿ ಬರೆದುಕೊಡಿ ತೆಗೆದುಕೊಳ್ಳುತ್ತೇನೆ ಎಂದೆ. ಅವರು ಕೊಡಲಿಲ್ಲ, ನಾನು ಹಾಗಾಗಿ ರಾಜೀನಾಮೆ ಸ್ವೀಕರಿಸಲಿಲ್ಲ ಎಂದು ಸಭಾಪತಿ ಹೊರಟ್ಟಿ ಸ್ಪಷ್ಟಪಡಿಸಿದರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : "ಎಲ್ಲಾ ಮದುವೆಗಳಲ್ಲಿ ವಧು ಎಡಗಡೆಗೆ ಮತ್ತು ವರ ಬಲಗಡೆಗೆ ಯಾಕೆ ಕೂತಿರುತ್ತಾರೆ?"

ಗಂಡ : "ಲಾಭ ಮತ್ತು ನಷ್ಟದ ಸ್ಟೇಟ್‌ಮೆಂಟ್ ಅಕೌಂಟ್‌ನ ಪ್ರಕಾರ ಎಲ್ಲಾ ಆದಾಯ ಬಲ ಬದಿಗೆ ಇರುತ್ತದೆ ಮತ್ತು ಖರ್ಚುಗಳು ಎಡ ಬದಿಗೆ ಇರುತ್ತದೆ ಅದಕ್ಕೆ!"

ಮೈಸೂರು ಮಿತ್ರ

ಗುರುವಾರ, 28 ಮಾರ್ಚ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........


ಎಲ್ಲಾ ಮಹಾನ್ ಸಾಧನೆಗಳು ದಿಢೀರ್ ಎಂದು ಆಗುವುದಿಲ್ಲ. ಸಾಕಷ್ಟು ಸಮಯ ಬೇಕಾಗುತ್ತದೆ. ತಾಳ್ಮೆ ಮುಖ್ಯ – ಮಾಯಾ ಏಂಜೆಲೊ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಗ ಸಣ್ಣವನಾದರೂ, ಮಾತು ಸಣ್ಣದಲ್ಲ

ನಿಮ್ಮ ಪತ್ರಗಳು

ಜನಾರ್ಧನ ರೆಡ್ಡಿಯವರತ್ತ ಅದೃಷ್ಟದ ಗಾಲಿ

ಮಾನ್ಯರೆ,



ರಾಜ್ಯದ ಅತ್ಯಂತ ಪ್ರಭಾವಶಾಲಿ ರಾಜಕಾರಣಿಯಾಗಿ ಹಲವು ವರ್ಷಗಳ ಕಾಲ ಮೆರೆದು, ಅಕ್ರಮ ಗಣಿಗಾರಿಕೆ ಪ್ರಕರಣಗಳಲ್ಲಿ ಜೈಲು ಪಾಲಾಗಿ ಮೂರು ವರ್ಷಗಳ ನಂತರ ಬಿಡುಗಡೆಯಾಗಿ ತಮ್ಮದೇ ಆದ 'ಕಲ್ಯಾಣ ರಾಜ್ಯ ಪ್ರಗತಿ ಪಕ್ಷ' ಎಂಬ ಹೆಸರಿನ ಪ್ರಾದೇಶಿಕ ಪಕ್ಷ ಸ್ಥಾಪಿಸಿ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಗಂಗಾವತಿ ಕ್ಷೇತ್ರದಿಂದ ರಾಜ್ಯ ವಿಧಾನಸಭೆಗೆ ಆಯ್ಕೆಯಾಗಿರುವ ಗಾಲಿ ಜನಾರ್ಧನ ರೆಡ್ಡಿ ಹೊಸ ಖದರ್‌ನಿಂದ ಮತ್ತೆ ಭಾರತೀಯ ಜನತಾ ಪಕ್ಷಕ್ಕೆ ಸೇರ್ಪಡೆಗೊಂಡಿದ್ದಾರೆ. ಇತ್ತೀಚೆಗೆ ನಡೆದ ವಿಧಾನಪರಿಷತ್ತಿನ ಚುನಾವಣೆಯಲ್ಲಿ ಅವರು ಕಾಂಗ್ರೆಸ್ ಅಭ್ಯರ್ಥಿ ಪರ ಮತ ಚಲಾಯಿಸಿದ್ದರು. ಜನಾರ್ಧನ ರೆಡ್ಡಿ ಯಾರೆಂಬುದೇ ತಮಗೆ ಗೊತ್ತಿಲ್ಲವೆಂದಿದ್ದ ಕೇಂದ್ರ ಗೃಹ ಸಚಿವರು ಈಗ ರೆಡ್ಡಿ ಅವರನ್ನು ಸ್ವತಃ ಪಕ್ಷಕ್ಕೆ ಆಹ್ವಾನಿಸಿದ್ದರು ಎಂದು ಸ್ವತಃ ಜನಾರ್ಧನ ರೆಡ್ಡಿಯವರೇ ಹೇಳಿದ್ದಾರೆ. ಅದೇನೆ ಇರಲಿ ಈ ರಾಜಕೀಯವೆಂಬ ಚಕ್ರವ್ಯೂಹದಲ್ಲಿ ಯಾರು ಯಾವಾಗ ಯಾರ ಪಾಳೆಯ ಸೇರುತ್ತಾರೋ ಆ ದೇವರಿಗೆ ಮಾತ್ರ ಗೊತ್ತು. ಇದೀಗ ಅದೃಷ್ಟ ಗಾಲಿ ಜನಾರ್ಧನ ರೆಡ್ಡಿಯವರತ್ತ ತಿರುಗಿದಂತಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

ಕಳಚಿ ಬೀಳುತ್ತಿರುವ ಕಸದ ಡಬ್ಬಿಗಳು



ಮಾನ್ಯರೆ,

ಬೀದಿಯಲ್ಲಿ ಕಸ ಬೀಳಬಾರದೆಂದು ಕಸದ ಡಬ್ಬಿಗಳೇ ಬೀಳುತ್ತಿರುವುದು ನಗರ ಪಾಲಿಕೆಯ ಕೆಲಸದ ಅವ್ಯವಸ್ಥೆ ಹಾಗೂ ಅಸಡ್ಡೆಯನ್ನು ತೋರಿಸುತ್ತಿದೆ. ಇದು ಟಿ.ಕೆ. ಬಡಾವಣೆ ಮುಖ್ಯಮಂತ್ರಿಗಳ ಮನೆಗೆ ಸಾಗುವ ಮುಖ್ಯ ರಸ್ತೆಯ ದೃಶ್ಯ. ಹೀಗೆ ಬೇರೆಡೆಯೂ ಕಸದ ಡಬ್ಬಿಗಳು ಬಿದ್ದ ಬಗ್ಗೆ ಮಾಹಿತಿ ಇದೆ. ಇದನ್ನು ವಿವೇಚನಾರಹಿತ ಅಳವಡಿಕೆ ಎನ್ನುವುದೋ ಅಥವಾ ನಿರ್ಲಕ್ಷ್ಯ ಎನ್ನುವುದೋ ಗೊತ್ತಾಗುತ್ತಿಲ್ಲ. ಈ ರೀತಿಯ ಅಳವಡಿಕೆ ಕಳ್ಳರಿಗಂತೂ ಅನುಕೂಲ ವಾದೀತು. ಒಟ್ಟಾರೆ ಇದನ್ನು ಯಾರಾದರೂ ಕದ್ದು ಸಾಗಿಸುವ ಮೊದಲು ಮಹಾನಗರ ಪಾಲಿಕೆ ಗಟ್ಟಿಯಾಗಿ ಮತ್ತೆ ನಿಲ್ಲಿಸಲಿ.

–ಅನಿಲ್ ಕುಮಾರ್ ನಾಡಿಗೇರ್,
ಇಂಧನ ಮತ್ತು ಪರಿಸರ ಸಲಹೆಗಾರರು, ಮೈಸೂರು.

ಫುಟ್‌ಪಾತ್ ವ್ಯಾಪಾರಿಗಳಿಗೆ ಶಾಶ್ವತ ಸೂರು ಕಲ್ಪಿಸಿ

ಮಾನ್ಯರೆ,

ದೇವರಾಜ ಮಾರುಕಟ್ಟೆ ಮತ್ತು ಸುತ್ತಲ ಪ್ರದೇಶದ ಫುಟ್‌ಪಾತ್ ಪ್ರದೇಶದಲ್ಲಿ ವ್ಯಾಪಾರ ಮಾಡುತ್ತಿದ್ದ ವ್ಯಾಪಾರಿಗಳನ್ನು ಮಹಾನಗರಪಾಲಿಕೆ ಆಯುಕ್ತರಾದ ಡಾ.ಮಧು ಅವರು ತೆರವುಗೊಳಿಸಿದ್ದನ್ನು ಮಾಧ್ಯಮಗಳು ಪ್ರಕಟಿಸಿವೆ. ಫುಟ್‌ಪಾತ್ ವ್ಯಾಪಾರಿಗಳನ್ನು ತೆರವುಗೊಳಿಸುತ್ತಿರುವುದು ಇದೇನು ಮೊದಲ ಸಲವಲ್ಲ. ಈ ಹಿಂದೆಯೂ ನಗರದ ವಿವಿಧ ಭಾಗಗಳಲ್ಲಿ ಈ ರೀತಿಯ ತೆರವು ಕಾರ್ಯಕ್ರಮಗಳಾಗಿವೆ. ಆದರೆ, ಪ್ರಶ್ನೆ ಏನೆಂದರೆ ಈ ತರಹದ ತೆರವುಗಳಿಂದ ಏನಾದರೂ ಪ್ರಯೋಜನವಾಗಿದೆಯೇ ಎಂದರೆ ಉತ್ತರ ಶೂನ್ಯ. ಕೆಲವು ದಿನಗಳ ನಂತರ ಫುಟ್‌ಪಾತ್ ವ್ಯಾಪಾರ ಮತ್ತೆ ಪ್ರಾರಂಭವಾಗುತ್ತದೆ.

ಇಂತಹ ಕಾರ್ಯಕ್ರಮಗಳಿಂದ ಏನೂ ಪ್ರಯೋಜನವಿಲ್ಲ. ಹಾಗಾಗಿ ಫುಟ್‌ಪಾತ್ ವ್ಯಾಪಾರಿಗಳಿಗಾಗಿ ನಗರದ ವಿವಿಧ ಬಡಾವಣೆಗಳಲ್ಲಿ ಪಾಲಿಕೆಯಡಿಯಲ್ಲಿ ಬರುವ ಜಾಗವನ್ನು ಗುರುತಿಸಿ, ಅಲ್ಲಿ ಈ ವ್ಯಾಪಾರಿಗಳಿಂದ ಸೂಕ್ತ ಹಣ ತೆಗೆದುಕೊಂಡು ಜಾಗ ಮಾಡಿಕೊಟ್ಟರೆ ನಾಗರಿಕರಿಗೆ ಅನುಕೂಲವಾಗುವುದಲ್ಲದೆ ಪಾಲಿಕೆಗೂ ಆದಾಯ ಬರುತ್ತದೆ. ಹಾಗಾಗಿ ಇಂತಹ ತೆರವುಗಳು ಕೇವಲ ನಾಟಕೀಯ ಮತ್ತು ಇದು ಆಗಿಂದಾಗ್ಗೆ ತಲೆ ಎತ್ತುತ್ತಲೇ ಇರುತ್ತದೆ. ಹಾಗಾಗಿ ನಗರಪಾಲಿಕೆ ಈ ವಿಚಾರವನ್ನು ಗಂಭೀರವಾಗಿ ಯೋಚಿಸಿ, ಶಾಶ್ವತವಾದ ಪರಿಹಾರ ಕಂಡು ಹಿಡಿಯಬೇಕೆಂದು ಈ ಮೂಲಕ ಮನವಿ.

–ಬ್ಯಾಂಕ್ ಶಿವಕುಮಾರ್, ಜೆ.ಪಿ.ನಗರ, ಮೈಸೂರು.

ಅಂಕಿ

ಮಾನ್ಯರೆ,
ಈಗ ಪತ್ರಿಕೆಗಳಲ್ಲಿ
ಅಕ್ಷರಗಳೆಲ್ಲಿ?
ಕಣ್ಣು ಹಾಯಿಸಿದೆಡೆಯೆಲ್ಲ
(ಮೊಬೈಲ್) ಅಂಕಿಗಳ ಮಂಕರಿ!
(ಮುಂದಿನ ಸಮಾಜ ನಿರಕ್ಷರಿ?)

ಸಂಖ್ಯೆ?

ಛೇ! ಮಹಿಳೆಯರಿಗೆ
'ಹೊಲಿಗೆಯಂತ್ರ' ವಿತರಣೆ
ಎಂಬುದು ಅಚ್ಚಿನ ತಪ್ಪಿನಿಂದ
'ಹೆರಿಗೆ ಯಂತ್ರ...' ಎಂದಾಗಬೇಕೆ?
(ಸಾಲದೆ ಈಗಿನ ಜನಸಂಖ್ಯೆ?)

ಜಲಗಾಥೆ

ಬಾವಿ ತೋಡಿದ
ಗೌರಿಯ (ಜಲ)ಗಾಥೆ:
ವಾಸ್ತವವಾಗಿ ಆಕೆ ಗಂಗಾಮಾತೆ,
'ಭಾವಿ ಭಾಗೀರಥಿ' ಎನ್ನೋಣ!
(ವೃದ್ಧಿಸಲಿ ಅಂಥವರ ಸಂತಾನ).

–ಸಿಪಿಕೆ, ಮೈಸೂರು.

ಮಂಥನ



ನಿವೇದಿತಾ ಎಚ್
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು

ಮನೆಯ ಆವರಣದಲ್ಲಿ ಆಡಿ ಬೆಳೆದ ಮಕ್ಕಳು ಶಿಬಿರಗಳ ಶಿಲೆಯಾದವೇ...

ಈಗ ಒಂದೆರಡು ವಾರಗಳಿಂದ, ದಿನಪತ್ರಿಕೆಗಳ ಜೊತೆಯಲ್ಲಿ ಹತ್ತಾರು ಕರಪತ್ರಗಳು... ಯುಗಾದಿ ಹೊಸವರ್ಷ, ದಸರಾ, ದೀಪಾವಳಿ ಹಬ್ಬಗಳ ಸಂದರ್ಭಗಳಲ್ಲಿ ಹಾಗೆ ದಿನ ಪತ್ರಿಕೆಗಳ ಜೊತೆ ಹಲವಾರು ಅಂಗಡಿಗಳ ಹಲವು ಆಫರ್‌ಗಳ ಕರಪತ್ರಗಳು ದಂಡಿಯಾಗಿ ಬಂದು ಬೀಳುತ್ತವೆ. ದಸರೆ ದೀಪಾವಳಿ ಮುಗಿದಿವೆ. ಯುಗಾದಿಗಿನ್ನೂ ದಿನಗಳು ಬಾಕಿಯಿವೆ. ಈಗ ಬಂದು ಬೀಳುತ್ತಿರುವವು ಹೆಚ್ಚಾಗಿ ಬೇಸಿಗೆ ಶಿಬಿರಕ್ಕೆ ಸಂಬಂಧಿಸಿದವು!

ಮಕ್ಕಳ ಪರೀಕ್ಷೆಗಳು ಮುಗಿದು ಇನ್ನೇನು ಬೇಸಿಗೆ ರಜೆ ಆರಂಭವಾಗುವುದರಲ್ಲಿದೆ. ಅದಾಗಲೇ ಶಿಬಿರಗಳ ಪ್ರಚಾರದ ಭರಾಟೆ ಪ್ರಾರಂಭವಾಗಿ ಬಿಟ್ಟಿದೆ. ಶಾಲೆಗಳಂತಹ ದೊಡ್ಡ ಜಾಗಗಳಿರಲಿ, ಎಲ್ಲೆಲ್ಲಿ ಹತ್ತಾರು ಮಕ್ಕಳನ್ನು ಒಟ್ಟಿಗೆ ಸೇರಿಸಲು ಸಾಧ್ಯವಿದೆಯೋ ಅಲ್ಲೆಲ್ಲಾ ಬೇಸಿಗೆ ಶಿಬಿರಗಳು ನಡೆಯುತ್ತಿವೆ. ಮತ್ತೆ ಭೂಮಿಯ ಮೇಲೆ ಕಲಿಕೆಗೆ ಅವಕಾಶವಿರುವ ಪ್ರತಿ ವಿಷಯಗಳ ಮೇಲೂ ಶಿಬಿರಗಳು ಆಯೋಜನೆಗೊಳ್ಳುತ್ತಿವೆ. ನಾಟಕ, ಕ್ರೀಡೆ, ಚಿತ್ರಕಲೆ, ಶಿಲ್ಪಕಲೆ, ಫೋಟೋಗ್ರಫಿ, ನೃತ್ಯ, ಗಣಿತ(ವೇದ ಗಣಿತ, ಅಬ್ಯಾಕಸ್) , ಓರಿಗಾಮಿ, ಚಾರಣ, ಪರಿಸರ ಪ್ರಜ್ಞೆ, ಕುಂಬಾರಿಕೆ, ಹೊಲಿಗೆ, ಅಡುಗೆ, ಸಂವಹನ ಕೌಶಲ, ಕ್ಯಾಲಿಗ್ರಫಿ, ಭಾಷಾ ಕಲಿಕೆ, ಆಧ್ಯಾತ್ಮ, ಸುಗಮ ಸಂಗೀತ ಹೀಗೆ ಯಾರಿಗೆ ಯಾವುದರಲ್ಲಿ ಆಸಕ್ತಿ ಇದೆಯೋ ಆ ವಿಷಯದ ಶಿಬಿರ ಆರಿಸಿಕೊಂಡು ಅದರಲ್ಲಿ ಪಾಲ್ಗೊಳ್ಳುವ ಸದವಕಾಶ.

ಈ ಶಿಬಿರಗಳು ಬೇಸಿಗೆಯಲ್ಲಿ ಮಕ್ಕಳ ಕಲಿಕೆಯ ದಿಶೆಯನ್ನು ಸ್ವಲ್ಪಮಟ್ಟಿಗೆ ಬದಲಿಸಿ ಕಲಿಕೆಯನ್ನು ರಸಮಯವಾಗಿಸಿ ಪುಟಾಣಿಗಳಲ್ಲಿ ಹೊಸ ಶೈಕ್ಷಣಿಕ ವರ್ಷಕ್ಕೆ ನೂತನ ಹುರುಪು ತುಂಬುತ್ತವೆ. ಅವುಗಳಲ್ಲಿ ಅಡಗಿರುವ ಸುಪ್ತ ಪ್ರತಿಭೆಯನ್ನು ಹೊರಗೆಡವಲು ಮಕ್ಕಳಿಗೆ ಶಿಬಿರಗಳು ವೇದಿಕೆಯಾಗಿವೆ. ಹೊರಾಂಗಣ ಶಿಕ್ಷಣಕ್ಕೆ ಒತ್ತು ನೀಡುತ್ತಾ ಔಪಚಾರಿಕ ಕಲಿಕಾ ವಿಧಾನವನ್ನು ಅನುಸರಿಸದ ಶಿಬಿರಗಳು ಮಕ್ಕಳಲ್ಲಿ ಭಯ ಉಂಟುಮಾಡುವುದಿಲ್ಲ ಮತ್ತು ನಿರ್ಭಿಡೆಯಿಂದ ತಮ್ಮನ್ನು ತೆರೆದುಕೊಳ್ಳಲು ಅವಕಾಶ ವೀಯುತ್ತವೆ. ಎಷ್ಟೋ ಮಕ್ಕಳಿಗೆ ತಮ್ಮ ಆಸಕ್ತಿಯ ಕ್ಷೇತ್ರಗಳನ್ನು ಕಂಡುಕೊಳ್ಳಲು ಶಿಬಿರಗಳು ಸಹಾಯ ಮಾಡಿವೆ. ಉಚಿತವಾಗಿ ತರಬೇತಿ ಕೊಡುವ ಶಿಬಿರಗಳು ಈಗ ಬೆರಳೆಣಿಕೆಯಷ್ಟೇ. ಕೆಲವು ನೆಪಮಾತ್ರಕ್ಕೆ ಮೂಲಸೌಕರ್ಯ ಒದಗಿಸಲು ಒಂದಷ್ಟು ಶುಲ್ಕವನ್ನು ತೆಗೆದುಕೊಂಡರೆ, ಕೆಲವು ಅತ್ಯಾಸಕ್ತಿ ಇರುವವರೂ ಭರಿಸಲು ಅಸಾಧ್ಯವೆನಿಸುವಷ್ಟು ಶುಲ್ಕ ತೆಗೆದುಕೊಂಡು, ಶಿಬಿರಗಳನ್ನು ಕೈಗೆಟುಕದ ದ್ರಾಕ್ಷಿಗಳನ್ನಾಗಿಸಿವೆ.

ಆಧುನಿಕ ಯುಗದಲ್ಲಿ ಶಿಬಿರಗಳ ಪರಿಪಾಠ ಪ್ರಾರಂಭವಾದದ್ದು 1861ರಲ್ಲಿ. Frederick W Gunn ಎಂಬಾತ ಮೊದಲ ಬಾರಿಗೆ ಅಮೆರಿಕದಲ್ಲಿ The Gunnary Camp ಅನ್ನು ಕನ್ನೆಕ್ಟಿಕಟ್‌ನಲ್ಲಿ ಅಲ್ಲಿನ ಶಾಲಾ ಬಾಲಕರಿಗಾಗಿ ಆಯೋಜಿಸಿದ. ಅತಿಯಾದ ಕೈಗಾರೀಕೀಕರಣದಿಂದ ಪ್ರಕೃತಿಯೊಂದಿಗೆ ಸಂಬಂಧ ಕಳೆದುಕೊಳ್ಳುತ್ತಿದ್ದ ಮಕ್ಕಳಲ್ಲಿ ಪ್ರಕೃತಿಯೆಡೆಗೆ ಪ್ರೀತಿ ಮತ್ತು ಅರಿವು ಮೂಡಿಸುವುದು ಅವನ ಗುರಿಯಾಗಿತ್ತು. ಈಗ ನಾವು crash course ಎನ್ನುವ ರೀತಿಯ ಕಲಿಕಾ ವಿಧಾನ ಜನರ ನಡುವೆ ಭಾರಿ ಮೆಚ್ಚುಗೆ ಗಳಿಸಿ ಎಲ್ಲೆಡೆ ಜನಪ್ರಿಯವಾಗಲು ಶುರುವಿಟ್ಟುಕೊಂಡಿತು.

ಭಾರತದಲ್ಲಿ ಶಿಬಿರಗಳ ಸಂಸ್ಕೃತಿ ಪ್ರಾರಂಭವಾಗಿ ಬಹಳ ವರ್ಷಗಳ ಮೇಲಾದರೂ ಈಗ್ಗೆ 20–25 ವರ್ಷಗಳಲ್ಲಿ ಇದರ ಭರಾಟೆ ಹೆಚ್ಚಿದೆ. ಬೇಸಿಗೆಯಲ್ಲಿ ಎಲ್ಲಿ ನೋಡಿದರೂ ಅಲ್ಲಿ ಶಿಬಿರಗಳು. ಯಾವುದೇ ಶಿಬಿರಕ್ಕೆ ಹೋಗದ ಮಗುವನ್ನು ನೋಡುವ ದೃಷ್ಟಿಯೇ ಬೇರೆ ಎಂಬಷ್ಟು ಇವುಗಳು ಪ್ರಸ್ತುತ ಮತ್ತು ಅಗತ್ಯವೆಂಬ ಭ್ರಮೆ ಹುಟ್ಟಿಕೊಂಡು ಬಿಟ್ಟಿದೆ. ರಜೆ ಎಂದರೆ, ಶಿಬಿರಗಳು ಎನ್ನುವ ಪರ್ಯಾಯ ಅರ್ಥವೇ ಹುಟ್ಟಿಕೊಂಡುಬಿಟ್ಟಿದೆ ಎಂದರೆ ಖಂಡಿತವಾಗಿ ಅತಿಶಯೋಕ್ತಿಯಲ್ಲ.

ಏಕೆ ಹೀಗೆ? ಏಕೆ ರಜೆಯ ಪರಿಭಾಷೆಯೇ ಬದಲಾಗಿಬಿಟ್ಟಿದೆ? ಮನೆಯೇ ಮಕ್ಕಳ ಮೊದಲ ಪಾಠಶಾಲೆ ಎಂಬ ಹೇಳಿಕೆಗೆ ಅರ್ಥವೇ ಇಲ್ಲವೇನೋ ಎಂಬಂತೆ, ಮಕ್ಕಳನ್ನು ರಜೆಯ ಸಮಯದಲ್ಲೂ ಮನೆಯಿಂದ ದೂರವಿಡುವಂತಹ ಈ ಶಿಬಿರಗಳ ಮೇಲೆ ಪೋಷಕರಿಗೇಕೆ ಇಷ್ಟು ಒಲವು? ಶಾಲೆಯ ಸಮಯದಲ್ಲಂತೂ ಮಕ್ಕಳು ಬೇಗನೆ ಎದ್ದು ಶಾಲೆಗೆ ತಡವಾಗದಂತೆ ಸಿದ್ಧವಾಗಿ ಮನೆ ಬಿಡಲೇಬೇಕು. ರಜೆಯ ಸಮಯದಲ್ಲೂ ಅದು ಸ್ವಲ್ಪವೂ ವ್ಯತ್ಯಯವಾಗದಂತೆ ಕೊಂಚ ಹೆಚ್ಚು ನಿದ್ರೆಯ ಸುಖ, ಬಿಡುವು, ಆರಾಮದ ಸಮಯವನ್ನು ಕಳೆಯಲು ಮಕ್ಕಳಿಗೆ ಅವಕಾಶವೇ ಇಲ್ಲದಂತಾಗಿದೆ. ಶಾಲೆಯ ಸಮಯದಲ್ಲಿ ಶಾಲೆ ನೀಡುವ ವೇಳಾಪಟ್ಟಿಯಾದರೆ, ರಜೆಯಲ್ಲಿ ಶಾಲೆಯ home work ಮಾಡುತ್ತಲೇ ಶಿಬಿರದ ನಿರ್ದೇಶಕರ ಇಚ್ಛೆಯಂತೆ ಮಕ್ಕಳು ನಡೆದುಕೊಳ್ಳುವಂತಾಗಿದೆ. ಶಿಬಿರಗಳು ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಹಲವು ರೀತಿಯಲ್ಲಿ ದಾರಿಯಾಗಿವೆ. ಅದರ ಬಗ್ಗೆ ನನ್ನ ಆಕ್ಷೇಪಣೆಯಿಲ್ಲ. ಶಿಬಿರಗಳ ಸಂಖ್ಯೆಯಲ್ಲಿ ಈ ಮಟ್ಟದ ಹೆಚ್ಚಳ ವೇಕಾಗಿದೆ? ಪೋಷಕರು ಬೇಸಿಗೆ ಬಂದರೆ ಶಿಬಿರಗಳ ಹುಡುಕಾಟಕ್ಕೇಕೆ ತೊಡಗುತ್ತಾರೆ ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕುವ ಅಥವಾ ಊಹಿಸುವ ಒಂದು ಪ್ರಯತ್ನ?



ಸಂಗ್ರಹ ಚಿತ್ರ

ಶಿಬಿರಗಳೇ ರಜೆ ಕಳೆಯಲು ಅಂತಿಮ ಆಯ್ಕೆಯಾಗಬೇಕಿಲ್ಲ. ಮಕ್ಕಳಲ್ಲಿ ಓದುವ ಹವ್ಯಾಸ ಬೆಳೆಸಲು ರಜೆ ಉತ್ತಮ ಸಮಯ. ಪುಟ್ಟ ಪುಟ್ಟ ಪುಸ್ತಕಗಳಿಂದ ಪ್ರಾರಂಭಿಸಬಹುದು. ಮಕ್ಕಳ ಆಸಕ್ತಿಯನ್ನು ಅರಿತು ಅವನ್ನು ಪ್ರೋತ್ಸಾಹಿಸಿ, ದಿನಕ್ಕೆ ಇಂತಿಷ್ಟಂತೆ ಅಭ್ಯಾಸ ಮಾಡಿಸಬಹುದು. ಸಂಜೆಯ ಸಮಯದಲ್ಲಿ ಮಕ್ಕಳ ಜೊತೆ ಆಡಬಹುದು, ವಾಯು ವಿಹಾರಕ್ಕೆ ಕರೆದೊಯ್ಯಬಹುದು. ರಜೆಯ ಸಮಯದಲ್ಲಿ ನಿಧಾನಕ್ಕೆ ಮನೆಗೆಲಸಗಳನ್ನು ರೂಢಿ ಮಾಡಿಸಬಹುದು. ಇಂದು ಮಕ್ಕಳು ಹೆಚ್ಚಿನ ವಿದ್ಯಾಭ್ಯಾಸಕ್ಕೆಂದೋ, ಓದಿಗಾಗಿಯೋ ಮನೆಯಿಂದ ದೂರವಿರಬೇಕಾದ ಅಗತ್ಯ ಬಿದ್ದೇ ಬೀಳುತ್ತದೆ. ಆಗ ಅವರಿಗೆ ನಿಭಾವಣೆ ಸುಲಭವಾಗುತ್ತದೆ. ಇದು ಗೌಣವಾದ ಚಿಕ್ಕ ವಿಷಯವೆನಿಸಬಹುದು. ಆದರೆ ಅಲ್ಲ!

ಬಹಳ ಹಿಂದೇನಲ್ಲ ಈಗ ಸುಮಾರು 15–20 ವರುಷಗಳ ಕೆಳಗೆ, ಮಕ್ಕಳು ರಜೆಗಾಗಿ ಕಾಯುವುದಕ್ಕಿಂತ ಹೆಚ್ಚಾಗಿ ಮಕ್ಕಳ ಅಪ್ಪ–ಅಮ್ಮ, ಅತ್ತೆ–ಮಾವ, ಚಿಕ್ಕಪ್ಪ–ಚಿಕ್ಕಮ್ಮ ಎಲ್ಲರೂ ಕಾಯುತ್ತಿದ್ದರು. ಆಧುನೀಕರಣ ಪ್ರಾರಂಭವಾದ ಮೇಲೆ ಕೂಡು ಕುಟುಂಬಗಳ ಚಿತ್ರಣ ಬದಲಾಯಿತು. ಶಿಕ್ಷಣ ಎಲ್ಲರಿಗೂ ದೊರಕುವಂತಾಯಿತು. ಶಿಕ್ಷಣ ಪಡೆದ ಯುವಕರು ಕೃಷಿ ಅಥವಾ ತಮ್ಮ ತಮ್ಮ ಕೌಟುಂಬಿಕ ವೃತ್ತಿಗಳಲ್ಲಿ ಆಸಕ್ತಿ ತೋರಿಸದೆಯೆ, ತಾವು ಪಡೆದ ಶಿಕ್ಷಣಕ್ಕನುಸಾರವಾಗಿ ನಗರಗಳಿಗೆ ಕೆಲಸ ಹುಡುಕಿಕೊಂಡು ಹೊರಟರು. ಅಲ್ಲಿಯೇ ನೆಲೆ ಕಂಡುಕೊಂಡರು. ಆದರೂ ಹಳ್ಳಿಯೇ ಕುಟುಂಬದ ಕೇಂದ್ರಬಿಂದುವಾಗಿತ್ತು. ಹಬ್ಬ–ಹರಿದಿನ, ಪೂಜೆ–ಪುನಸ್ಕಾರ, ಮದುವೆ–ಮುಂಜಿಗಳು, ಜಾತ್ರೆಗಳಿಗೆ ಹಳ್ಳಿಗೆ ಓಡೋಡಿ ಬರುತ್ತಿದ್ದರು. ಎಲ್ಲರೊಡಗೂಡಿ ಸಂಭ್ರಮಿಸಿ ಮತ್ತೆ ನಗರಕ್ಕೆ ಮರಳುತ್ತಿದ್ದರು. ಮಕ್ಕಳಿಗೆ ರಜೆ ಬಂತೆಂದರೆ ಹಳ್ಳಿಗೆ ಬಂದು, ಅಲ್ಲಿ ಪೂರ್ತಾ ರಜೆಯನ್ನು ಕಳೆದು ಮಣ್ಣಿನ ಸಂಬಂಧ ಕಳೆದುಕೊಳ್ಳದೆ ಪ್ರೀತಿಯನ್ನು ಬೆಳೆಸಿಕೊಳ್ಳುತ್ತಿದ್ದರು. ಅಪ್ಪ, ಹೆಂಡತಿ ಮಕ್ಕಳ ಜೊತೆ ಬಂದು ಒಂದೆರಡು ದಿನ ಕಳೆದು ಮತ್ತೆ ಹೊರಡುತ್ತಿದ್ದ, ಅವನು ಮತ್ತೆ ಬರುತ್ತಿದ್ದುದೇ ರಜೆ ಇನ್ನೇನು ಮುಗಿಯಲಿದೆ ಎಂದಾಗ. ವಾಪಸ್ ಕರೆದೊಯ್ಯಲು. ಅಲ್ಲಿಯವರೆಗೂ ಮಕ್ಕಳು, ತಮ್ಮ ಹಾಗೆಯೇ ಊರಿಗೆ ಬಂದ ತಮ್ಮ ಬಂಧುಗಳ ಜೊತೆ ಮಜವಾಗಿ ರಜೆ ಕಳೆಯುತ್ತಿದ್ದರು. ಅಜ್ಜ–ಅಜ್ಜಿಯ ನಿರ್ಮಲ ಪ್ರೀತಿಯ ಜೊತೆಗೆ, ಅವರೊಂದಿಗೆ ಮಾತು–ಕತೆ, ತೋಟ ತುಡಿಕೆಗಳ ಸುತ್ತಾಟ, ಅವರು ಪ್ರೇಮದಿಂದ ಉಣಬಡಿಸುತ್ತಿದ್ದ ಊಟ–ತಿಂಡಿಗಳು, ಅಲ್ಲಿಯ ಅಕ್ಕ–ಪಕ್ಕದ ಮಕ್ಕಳು, ಬಂಧುಗಳ ಮಕ್ಕಳೊಡನೆ ದಣಿವರಿಯದ ಆಟ, ನದಿ ಕೆರೆ ಹೊಂಡಗಳಲ್ಲಿ ನೀರಾಟ, ಬಚ್ಚೆಯಾಟ, ಲಗೋರಿ, ಮರಕೋತಿಯಾಟ, ಗೋಲಿಯಾಟ, ಚಿನ್ನಿದಾಂಡು, ಮರಗಳನ್ನು ಹತ್ತುವುದು, ಹೊಳೆ ಸಾಲಲ್ಲಿ ಮರಳಲ್ಲಿ ಬಿದ್ದೇಳುವುದು, ಒಂದೇ... ಎರಡೇ...? ಒಂದೆರಡು ತಲೆಮಾರು ಹಿಂದಿನವರಿಗೆ ಬಹುಶಃ ನೆನಪಿರುತ್ತದೆ, ಓದುತ್ತಿರುವ ಬದುಕುತ್ತಿರುವ ಊರಿನಲ್ಲಿ ಇದ್ದ ಸ್ನೇಹಿತರಲ್ಲದೆ, ರಜೆ ಬಂದಾಗ ಊರಿನಲ್ಲಿ ಸಿಗುತ್ತಿದ್ದ ಗೆಳೆಯರ ಭೇಟಿಗೆ ಕಾತುರದಿಂದ ಕಾಯುತ್ತಿದ್ದುದು. ಅಜ್ಜ ಅಜ್ಜಿ ಮಾತ್ರವಲ್ಲದೆ, ಅತ್ತೆ–ಮಾವ, ಚಿಕ್ಕಪ್ಪ–ಚಿಕ್ಕಮ್ಮಂದಿರ ಮನೆಗಳಿಗೂ ಭೇಟಿ ನೀಡುವುದು ರಜೆಯ ವೇಳಾಪಟ್ಟಿಯಲ್ಲಿರುತ್ತಿತ್ತು. ಅಲ್ಲಿಯೂ ಮಕ್ಕಳ ಸಂತೋಷಕ್ಕೆ ಪಾರವೇ ಇಲ್ಲದಂತಾಗುತ್ತಿತ್ತು.

ಈ ಅವಧಿಯಲ್ಲಿ ಮಕ್ಕಳು ಕೇವಲ ಕುಣಿದು ಕುಪ್ಪಳಿಸುತ್ತಿರಲಿಲ್ಲ. ಅದರೊಂದಿಗೆ ಸಾಕಷ್ಟು ಜೀವನ ಪಾಠಗಳನ್ನೂ ಕಲಿಯುತ್ತಿದ್ದರು. ಹೊಂದಾಣಿಕೆ, ಹಂಚಿ ತಿನ್ನುವ ಅಭ್ಯಾಸ, ಕ್ಷಮೆ, ಸೌಜನ್ಯ, ವಿಧೇಯತೆಗಳನ್ನು ರೂಢಿಸಿಕೊಳ್ಳುತ್ತಿದ್ದರು. ಊರಿಗೆ ಹೋಗುವ ಅವಕಾಶವಿಲ್ಲದ ಮಕ್ಕಳು, ಮನೆಯಲ್ಲಿಯೇ ಪುಸ್ತಕಗಳನ್ನು ಓದುತ್ತಿದ್ದರು, ಅಕ್ಕಪಕ್ಕದ ಮನೆಗಳ ಮಕ್ಕಳ ಜೊತೆ ದಂಡಿಯಾಗಿ ಆಡುತ್ತಿದ್ದರು. ಅಜ್ಜ–ಅಜ್ಜಿ, ಅಪ್ಪ–ಅಮ್ಮನ ಜೊತೆ ಕಾಲ ಕಳೆಯುತ್ತಿದ್ದರು. ಪ್ರವಾಸಗಳಿಗೆ ಹೋಗುತ್ತಿದ್ದರು.

ಒಟ್ಟಿನಲ್ಲಿ ರಜೆ ಎನ್ನುವುದು ಮಕ್ಕಳಿಗೆ ಚೇತೋಹಾರಿಯೆನಿಸುತ್ತಿತ್ತು. ಮತ್ತೆ ಶಾಲೆ ಪ್ರಾರಂಭವಾಗಿ ಓದು ಬರಹ ಎಂದು ವ್ಯಸ್ತರಾದ ಮೇಲೂ, ರಜೆ ಕಟ್ಟಿಕೊಟ್ಟ ನೆನಪಿನ ಬುತ್ತಿ ಅವರಿಗೆ ಕಚಗುಳಿಯಿಟ್ಟು ಉಲ್ಲಾಸ ಮೂಡಿಸುತ್ತಿತ್ತು. ಈ ಚಿತ್ರ ಸಂಪೂರ್ಣ ಬದಲಾಗಿದೆ ಎಂದು ನಾನು ಹೇಳುತ್ತಿಲ್ಲ. ಆದರೆ ಬೆರಳೆಣಿಕೆಯಷ್ಟು ಮಕ್ಕಳು ಮಾತ್ರ ಬಾಲ್ಯವನ್ನು ಸಂಪೂರ್ಣವಾಗಿ ಮುಗ್ಧತನ ಕಳೆದುಕೊಳ್ಳದೆ ಅನುಭವಿಸುತ್ತಿದ್ದಾರೆ. ಬಹುತೇಕರು ಇಷ್ಟವಿಲ್ಲದ ಚಟುವಟಿಕೆಗಳಲ್ಲಿ ಬಲವಂತವಾಗಿ ತೊಡಗಿಕೊಂಡು, ರಜೆ ಏಕಾದರು ಬರುತ್ತದಪ್ಪಾ ಎಂದು ಪೇಚಾಡಿಕೊಳ್ಳುವವರಿದ್ದಾರೆ. ಕಾರಣ ಏನೆಂದು ವಿಶ್ಲೇಷಣೆಗೆ ತೊಡಗಿದರೆ, ಬಹು ಕ್ಲಿಷೆಯೆನಿಸುವ ಉತ್ತರವೇ ದೊರೆಯುವುದು ಬದಲಾದ ಜೀವನ ಶೈಲಿ ಎಂದು. ಆದರೆ ಇದು ನಿಜ ಎನ್ನುವುದು ಬೇಸರದ ಸಂಗತಿ.

ಹೌದು, ಶಿಕ್ಷಿತ ಸಮುದಾಯ ಹೆಚ್ಚಾಗಿ, ಪ್ರಪಂಚ ಚಿಕ್ಕದಾಗತೊಡಗಿ, ಹೊಸ ಹೊಸ ವಿಷಯಗಳ ಕ್ಷೇತ್ರಗಳ ಆವಿಷ್ಕಾರವಾಗತೊಡಗಿದಾಗ ವಿಶ್ವವೇ ಮನುಷ್ಯನ ಕುಟುಂಬವಾಯಿತು. ಅವನು ಮುಟ್ಟದ ಮೂಲೆಯೇ ಇಲ್ಲವೆಂಬಂತಾಯಿತು. ಎಲ್ಲೆಡೆ ಕಾಲಿಟ್ಟು ತಾನು ವಿಜಯಪತಾಕೆಯನ್ನು ಹಾರಿಸಬೇಕೆಂಬ ಇಚ್ಛೆ ಬಲವಾಗತೊಡಗಿತು. ಆಗ, ಜ್ಞಾನಾರ್ಜನೆಯ ಹಸಿವು ಸಹಜವಾಗಿಯೇ ಬೆಳೆಯುತ್ತಾ ಹೋಯಿತು. ಶಾಲೆ ಕಲಿಸುವುದಕ್ಕಿಂತ ಹೆಚ್ಚಿನ ಕಲಿಕೆ ಬೇಕಾಗಿದೆ ಎಂಬ ಅರಿವಾಗಿ, ತನ್ನ ಮೆದುಳಿಗೆ ಕೊಡುವ ಬಿಡುವು ವ್ಯರ್ಥವೆನಿಸತೊಡಗಿತು. ಆದ್ದರಿಂದ ಸಿಕ್ಕ ಸಿಕ್ಕದ್ದನ್ನೆಲ್ಲಾ ಕಲಿಯಲು ತೊಡಗಿದ. ತನ್ನ ಮಕ್ಕಳನ್ನೂ ಮುಂದಿನ ನಾಗಾಲೋಟದ ಬದುಕಿಗೆ ತಯಾರು ಮಾಡಬೇಕು ಎಂದು ಅವನ ತಲೆಗೆ ಬಂದದ್ದೇ ತಡ, ಮಕ್ಕಳನ್ನೂ ಸಕಲಾಕಲಾವಲ್ಲಭರನ್ನಾಗಿಸಬೇಕು ಎಂದು ಪಣ ತೊಟ್ಟ. ಶಾಲಾ ಸಮಯದಲ್ಲಿಯೂ ಹಲವಾರು ಬೇರೆ ಬೇರೆ ರೀತಿಯ ಕೋರ್ಸುಗಳಲ್ಲಿ ಮಕ್ಕಳನ್ನು ತೊಡಗಿಸಿದ. ರಜೆಯ ಸಮಯ ಕಲಿಕೆ ಇಲ್ಲದೆ ವ್ಯರ್ಥವಾಗುದನ್ನು ನೋಡಲಾರದೆ ಕಲಿಕೆಯ ಹೊಸ ದಾರಿಗಳನ್ನು ಹುಡುಕತೊಡಗಿದ. ಆಗ ಹೊಳೆದದ್ದೇ ಈ ಶಿಬಿರಗಳು.

ಅಲ್ಲದೆ, ಇಂದು ಮಕ್ಕಳ ಅಮ್ಮ, ಮನೆಯ್ಲ ಅಡುಗೆ ಮನೆಯಲ್ಲಿ ಮಾತ್ರ ಬಂಧಿಯಾಗಿಲ್ಲ. ಶಿಕ್ಷಿತಳಾದ ಆಕೆ, ಕುಟುಂಬಕ್ಕೆ ಆಧಾರಸ್ತಂಭವಾಗಿ ನಿಲ್ಲಬೇಕು ಮತ್ತು ಜವಾಬ್ದಾರಿಯನ್ನು ಹಂಚಿಕೊಳ್ಳಬೇಕು. ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು ಎಂಬ ಉದ್ದೇಶದಿಂದ, ವೃತ್ತಿನಿರತಳಾಗಿದ್ದಾಳೆ. ಮಕ್ಕಳ ಜವಾಬ್ದಾರಿಯನ್ನು ಆಕೆ ಹಿಂದೆಂದಿಗಿಂತಲೂ ಸಮರ್ಥವಾಗಿ ನಿಭಾಯಿಸುತ್ತಿದ್ದಳಾದರೂ, ಮಕ್ಕಳಿಗೆ ಪೂರ್ಣ ಸಮಯವನ್ನು ಮೀಸಲಿರಿಸಲಾಗದ ಅನಿವಾರ್ಯತೆ ಆಕೆಗಿದೆ. ಮನೆಯಲ್ಲಿ ಮಕ್ಕಳು ಸುಮ್ಮನೆ ಒಂಟಿಯಾಗಿ ಕಾಲಹರಣ ಮಾಡುವುದಕ್ಕಿಂತ ಶಿಬಿರಗಳಲ್ಲಿ ಮಕ್ಕಳು ಹೊಸತೇನಾದರೂ ಕಲಿಯಲಿ ಎಂಬುದು ಅವಳ ಬಯಕೆ ಸಹ. ಹಾಗಾಗಿ, ತನ್ನ ಮಗುವಿನ ವ್ಯಕ್ತಿತ್ವ ಅರಳಲು ಪೂರಕ ವಾತಾವರಣವಿರುವಂತಹ ಶಿಬಿರಗಳನ್ನು ಮುತುವರ್ಜಿಯಿಂದ ಹುಡುಕಿ ಸೇರಿಸುತ್ತಾಳೆ. ಬಹುತೇಕ ಎಲ್ಲ ಮನೆಗಳಲ್ಲೂ ಇದೇ ಸಂದರ್ಭವಿರುವುದರಿಂದ, ಊರಿನಿಂದ ಮಕ್ಕಳು ಬಂದಾಗ, ಅಕ್ಕರೆ ಆದರವಿದ್ದರೂ ಮಕ್ಕಳನ್ನು ಬರಮಾಡಿಕೊಂಡು ಅವರನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿಕೊಳ್ಳುವ ದೊಡ್ಡಮ್ಮ–ಚಿಕ್ಕಮ್ಮ, ಅತ್ತೆಯಂದಿರ ಸಂಖ್ಯೆಯೂ ಕಡಿಮೆಯಾಗಿ ಮಕ್ಕಳನ್ನು ರಜಾಸಮಯದಲ್ಲಿ ತೊಡಗಿಸಲು ಶಿಬಿರಗಳ ಮೊರೆ ಹೋಗುವ ಅನಿವಾರ್ಯತೆ ಇಂದಿನ ಪೋಷಕರಿಗೆ.

ಮಕ್ಕಳಿಗೆ ಹಿಂದಿನ ಸ್ವಚ್ಛಂದ ಜೀವನ ಇಲ್ಲವಾಗಿದೆ ಎಂಬುದು ನಿಜವಾದರೂ, ಪ್ರಪಂಚ ಹಿಂದಿನಂತಿಲ್ಲ ಎಂಬುದೂ ನಾವೆಲ್ಲರೂ ಒಪ್ಪಿಕೊಳ್ಳಬೇಕಾದ ಸತ್ಯವೇ. ಹುಚ್ಚು ರೇಸ್‌ನಲ್ಲಿ ಪಾಲ್ಗೊಳ್ಳುವ ಹುಂಬತನ ಅಪೇಕ್ಷಣೀಯವಲ್ಲದಿದ್ದರೂ ಜೀವನದಲ್ಲಿ ಏನನ್ನಾದರೂ ಸಾಧಿಸಲು ಸಾಧ್ಯವಾಗುವುದು ನಾವು ಸಮರ್ಥರಾಗಿದ್ದರೆ ಮಾತ್ರ. ಆ ನಿಟ್ಟಿನಲ್ಲಿ ಸ್ವಲ್ಪಮಟ್ಟಿನ ಪೂರಕ ವಾತಾವರಣವನ್ನು ಶಿಬಿರಗಳು ಒದಗಿಸುತ್ತವೆ. ಗಾಜೆಟ್‌ಗಳಿಗೆ ಇಂದಿನ ಮಕ್ಕಳು ದಾಸರಾಗಿರುವುದು ಆತಂಕಕಾರಿಯೇ. ಅಪ್ಪ–ಅಮ್ಮ ಇಬ್ಬರೂ ವೃತ್ತಿನಿರತರಾಗಿರುವ ಈ ಕಾಲದಲ್ಲಿ ಮಕ್ಕಳ ಈ ಗಾಜೆಟ್ ಅವಲಂಬನೆಯನ್ನು ಸ್ವಲ್ಪಮಟ್ಟಿಗಾದರೂ ಶಿಬಿರಗಳು ಇಲ್ಲವಾಗಿಸುತ್ತವೆ.

ಹಾಗಂತ ಶಿಬಿರಗಳೇ ರಜೆ ಕಳೆಯಲು ಅಂತಿಮ ಆಯ್ಕೆಯಾಗಬೇಕಿಲ್ಲ. ಮಕ್ಕಳಲ್ಲಿ ಓದುವ ಹವ್ಯಾಸ ಬೆಳೆಸಲು ರಜೆ ಉತ್ತಮ ಸಮಯ. ಪುಟ್ಟ ಪುಟ್ಟ ಪುಸ್ತಕಗಳಿಂದ ಪ್ರಾರಂಭಿಸಬಹುದು. ಮಕ್ಕಳ ಆಸಕ್ತಿಯನ್ನು ಅರಿತು ಅವನ್ನು ಪ್ರೋತ್ಸಾಹಿಸಿ, ದಿನಕ್ಕೆ ಇಂತಿಷ್ಟಂತೆ ಅಭ್ಯಾಸ ಮಾಡಿಸಬಹುದು. ಸಂಜೆಯ ಸಮಯದಲ್ಲಿ ಮಕ್ಕಳ ಜೊತೆ ಆಡಬಹುದು, ವಾಯುವಿಹಾರಕ್ಕೆ ಕರೆದೊಯ್ಯಬಹುದು. ರಜೆಯ ಸಮಯದಲ್ಲಿ ನಿಧಾನಕ್ಕೆ ಮನೆಗೆಲಸಗಳನ್ನು ರೂಢಿ ಮಾಡಿಸಬಹುದು. ಇಂದು ಮಕ್ಕಳು ಹೆಚ್ಚಿನ ವಿದ್ಯಾಭ್ಯಾಸಕ್ಕೆಂದೋ, ಓದಿಗಾಗಿಯೋ ಮನೆಯಿಂದ ದೂರವಿರಬೇಕಾದ ಅಗತ್ಯ ಬಿದ್ದೇ ಬೀಳುತ್ತದೆ. ಆಗ ಅವರಿಗೆ ನಿಭಾವಣೆ ಸುಲಭವಾಗುತ್ತದೆ. ಇದು ಗೌಣವಾದ ಚಿಕ್ಕ ವಿಷಯವೆನಿಸಬಹುದು. ಆದರೆ ಅಲ್ಲ!


ಮೈಸೂರಿನಲ್ಲಿ ಕೂಡ ಹಲವಾರು ಶಾಲೆಗಳು ಮತ್ತು ಸಂಸ್ಥೆಗಳು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಪೂರಕವಾಗುವಂತಹ ಶಿಬಿರಗಳನ್ನು ನಡೆಸಿಕೊಂಡು ಬರುತ್ತಿವೆ. ಅವುಗಳಲ್ಲಿ ಪಾಲ್ಗೊಂಡ ಮಕ್ಕಳು ಧೈರ್ಯ, ಆತ್ಮವಿಶ್ವಾಸಗಳನ್ನು ಬೆಳೆಸಿಕೊಂಡು ಪ್ರಪಂಚವನ್ನೆದುರಿಸಲು ಸರ್ವಸನ್ನದ್ಧರಾಗಿದ್ದಾರೆ. ಆದರೆ ಅತಿಯಾದರೆ ಯಾವುದೂ ವಿಷ, ಮನೆಯೇ ಮಕ್ಕಳ ಪಾಠಶಾಲೆ ಎನ್ನುವ ನಾಣ್ಣುಡಿಯನ್ನು ಯಾರೂ ಮರೆಯುವುದು ಬೇಡ.

ಸರಸ್ವತಿಪುರಂನಲ್ಲಿ ಮತ್ತೆ 3 ಭಾರಿ ಗಾತ್ರದ ಮರಗಳಿಗೆ ಕೊಡಲಿ

ಮೈಸೂರು, ಮಾ.27(ಬಿಎಲ್‌ಯು)– ಮೈಸೂರಿನಲ್ಲಿ ಮರಗಳ ಹನನ ಹೆಚ್ಚಾಗುತ್ತಿದ್ದು, ನಗರದ ಸರಸ್ವತಿಪುರಂನ ಸಮಾಜ ಕಲ್ಯಾಣ ಇಲಾಖೆ ಕಚೇರಿ ಹಾಗೂ ಎಸ್‌ಬಿಐ ಆವರಣದಲ್ಲಿ ಭಾರಿ ಗಾತ್ರದ ಮೂರು ಮರಗಳನ್ನು ಉರುಳಿಸಲಾಗಿದೆ.

ಸರಸ್ವತಿಪುರಂನ ಒಂದನೇ ಮೈನ್ ಬಳಿ ಹೊಸದಾಗಿ ನಿರ್ಮಾಣ ಮಾಡುತ್ತಿರುವ ಕಮರ್ಷಿಯಲ್ ಕಾಂಪ್ಲೆಕ್ಸ್‌ಗೆ ಅಡ್ಡವಾಗುತ್ತದೆ ಎಂಬ ಕಾರಣದಿಂದ 40 ವರ್ಷದ ಭಾರಿ ಗಾತ್ರದ ಮರವನ್ನು ಕತ್ತರಿಸಲಾಗಿತ್ತು. ಈ ಸಂಬಂಧ ಅರಣ್ಯ ಇಲಾಖೆಯವರು ಪ್ರಕರಣ ಕೂಡ ದಾಖಲಿಸಿದ್ದರು.


ಆದರೆ ಈಗ ಇದೇ ಸರಸ್ವತಿಪುರಂನ ಸಮಾಜ ಕಲ್ಯಾಣ ಇಲಾಖೆಯ ಕಚೇರಿ ಹಾಗೂ ಎಸ್‌ಬಿಐ ಆವರಣದಲ್ಲಿ ಮೂರು ಮರಗಳನ್ನು ಕ್ಯಾಂಟೀನ್ ನಿರ್ಮಾಣ ಮಾಡಲು ಕತ್ತರಿಸಲಾಗಿದೆ ಎನ್ನಲಾಗಿದೆ. ಅರಣ್ಯ ಇಲಾಖೆ ಅನುಮತಿ ಪಡೆಯದೇ ಈ ಮರವನ್ನು ಕತ್ತರಿಸಲಾಗಿದೆ. ಇದಕ್ಕೆ ಬಹಳಷ್ಟು ಪರಿಸರ ಪ್ರೇಮಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಮೈಸೂರಿನ ಸರಸ್ವತಿಪುರಂನ ಸಮಾಜ ಕಲ್ಯಾಣ ಇಲಾಖೆ ಕಚೇರಿ ಆವರಣದಲ್ಲಿ ಭಾರಿ ಮರಗಳನ್ನು ಕತ್ತರಿಸಿರುವುದು.

ಹೀಗೆ ಮರಗಳನ್ನು ಕಡಿಯುತ್ತಾ ಹೋದರೆ ಮೈಸೂರು ಬರಡಾಗಲಿದೆ. ಇಲ್ಲಿನ ಪರಿಸರದ ಮೇಲೆ ಭಾರಿ ಪರಿಣಾಮ ಬೀರುತ್ತದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಅರಣ್ಯ ಇಲಾಖೆಯ ಅನುಮತಿ ಪಡೆಯದೆ ಖಾಸಗಿ ಜಾಗದಲ್ಲಿದ್ದ ಮೂರು ಮರಗಳನ್ನು ಕತ್ತರಿಸಿದ್ದಾರೆ. ಈ ಸಂಬಂಧ ಸ್ಥಳಕ್ಕೆ ಭೇಟಿ ನೀಡಿ ಕತ್ತರಿಸಿರುವ ಮರಗಳನ್ನು ವಶಕ್ಕೆ ಪಡೆಯಲಾಗಿದೆ. ಈ ಸಂಬಂಧ ಜಾಗದ ಮಾಲೀಕರನ್ನು ನಾಳೆ ವಿಚಾರಣೆ ಮಾಡಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಆರ್‌ಎಫ್‌ಓ ಸುಧೀಂದ್ರ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com



ನನ್ನ ಬೂತ್, ನನ್ನ ಪಕ್ಷ, ನಾನೇ ಅಭ್ಯರ್ಥಿ ಎಂಬುದು ಕಾಂಗ್ರೆಸ್ ಕಾರ್ಯಕರ್ತರ ಜಪ ಆಗಬೇಕು

ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶ ; ಪಕ್ಷದ ಕಾರ್ಯಕರ್ತರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ



ಮೈಸೂರಿನ ಕಾಂಗ್ರೆಸ್ ಭವನದ ಆವರಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕೆಆರ್, ಎನ್‌ಆರ್, ಚಾಮರಾಜ ಮತ್ತು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರಗಳ ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶದಲ್ಲಿ ಕಾಂಗ್ರೆಸ್ ಧ್ವಜ ಸ್ವೀಕರಿಸುವ ಮೂಲಕ ಮಾಜಿ ಸಚಿವ ಕೋಟೆ ಎಂ.ಶಿವಣ್ಣ, ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಯಾದರು.

ಮೈಸೂರು,ಮಾ.27(ಪಿಎಂ)– 'ನನ್ನ ಬೂತ್, ನನ್ನ ಪಕ್ಷ, ನಾನೇ ಅಭ್ಯರ್ಥಿ' ಎಂಬುದು ಪ್ರತಿಯೊಬ್ಬ ಕಾಂಗ್ರೆಸ್ ಕಾರ್ಯಕರ್ತರ ಜಪ ಆಗಬೇಕು. ಆ ಮೂಲಕ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಅವರು ಗೆದ್ದು ಸಂಸತ್‌ಗೆ ಹೋಗುವಂತಾಗಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾಂಗ್ರೆಸ್ ಕಾರ್ಯಕರ್ತರಿಗೆ ಕರೆ ನೀಡಿದರು.

ಮೈಸೂರಿನ ಕಾಂಗ್ರೆಸ್ ಭವನದ ಆವರಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕೆಆರ್, ಎನ್‌ಆರ್ ಹಾಗೂ ಚಾಮರಾಜ ವಿಧಾನಸಭಾ ಕ್ಷೇತ್ರಗಳು ಮತ್ತು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಜನರ ಧ್ವನಿಯಾಗಿ ಕೆಲಸ ಮಾಡುವ ಜನಪ್ರತಿನಿಧಿ ಬೇಕೆಂದರೆ ಎಂ.ಲಕ್ಷ್ಮಣ ಪರವಾಗಿ ಕೆಲಸ ಮಾಡಿ. ಲಕ್ಷ್ಮಣ ಗೆದ್ದರೆ ನೀವೇ ಗೆದ್ದಂತೆ. ಜೊತೆಗೆ ನಾನೂ ಗೆದ್ದಂತೆ ಎಂದು ಹೇಳಿದರು.

ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಮರಳಿ ಕಾಂಗ್ರೆಸ್‌ಗೆ ಬಂದಿದ್ದಾರೆ. ನಾನು ವಿಧಾನಸಭಾ ಚುನಾವಣೆಗೂ ಮುನ್ನ ಅವರೊಂದಿಗೆ ಮಾತನಾಡಿದ್ದೆ. ನಿಮಗೆ ಸರಿಯಾದ ಜಾಗ ಕಾಂಗ್ರೆಸ್ ಎಂದಿದ್ದೆ. ಏಕೆಂದರೆ ಕಾಂಗ್ರೆಸ್ ಪಕ್ಷ ಮಾತ್ರ ಜಾತ್ಯಾತೀತ ತತ್ವ, ಸಾಮಾಜಿಕ ನ್ಯಾಯ, ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಸಂವಿಧಾನದಲ್ಲಿ ನಂಬಿಕೆ ಹೊಂದಿರುವ ಪಕ್ಷ. ಕೋಮುವಾದಿ ಪಕ್ಷದಲ್ಲಿ ಇರುವುದು ಒಳ್ಳೆಯದಲ್ಲ ಎಂದಿದ್ದೆ. ಬಹುಶಃ ಈಗ ಅವರಿಗೆ ಅರಿವಾಗಿರಬೇಕು ಎಂದರು. ಬಿಜೆಪಿ ಒಂದು ಕೋಮುವಾದಿ ಪಕ್ಷ, ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಅನ್ಯಾಯ, ದೌರ್ಜನ್ಯ ಮತ್ತು ಶೋಷಣೆಗೆ ಒಳಗಾದವರು ಬಿಜೆಪಿಗೆ ಹೋಗಬಾರದು. ಅದರ ಇತಿಹಾಸ ನೋಡಿದರೆ ಏಕೆಂಬುದು ಸ್ಪಷ್ಟವಾಗುತ್ತದೆ.

ಬಿಜೆಪಿ ಮನುಸ್ಮೃತಿಯಲ್ಲಿ ನಂಬಿಕೆ ಇಟ್ಟಿರುವ ಪಕ್ಷ. ಜಾತಿ ವ್ಯವಸ್ಥೆಯ ಪೋಷಿಸುವ ಪಕ್ಷ. ಅದಕ್ಕೆ ನಾವು ಅವರನ್ನು ಮನುವಾದಿಗಳು ಎಂದು ಕರೆಯುತ್ತೇವೆ ಎಂದು ಟೀಕಿಸಿದರು. ಸಮಾಜದಲ್ಲಿ ಸಾಮಾಜಿಕ, ಆರ್ಥಿಕ ಅಸಮಾನತೆ ನಿರ್ಮಾಣವಾಗಿದ್ದರೆ, ಅದಕ್ಕೆ ಜಾತಿ ವ್ಯವಸ್ಥೆ ಕಾರಣ ಎಂಬುದನ್ನು ನಾವು ಮರೆಯಲು ಸಾಧ್ಯವಿಲ್ಲ. ಜಾತಿ ವ್ಯವಸ್ಥೆಯ ಕಾರಣಕ್ಕಾಗಿ ಶೂದ್ರರು, ದಲಿತರು ಹಾಗೂ ಮಹಿಳೆಯನ್ನು ಅಕ್ಷರ ಸಂಸ್ಕೃತಿಯಿಂದ ವಂಚಿಸಲಾಗಿತ್ತು. ಸ್ವಾತಂತ್ರ್ಯ ಬಳಿಕ ಸಂವಿಧಾನ ಜಾರಿಯಾದ ಮೇಲೆ ದಲಿತರು, ಶೂದ್ರರು, ಮಹಿಳೆಯರಿಗೆ ಅಕ್ಷರ ಕಲಿಯುವ ಅವಕಾಶ ದೊರೆಯಿತು. ಡಾ.ಬಿ.ಆರ್. ಅಂಬೇಡ್ಕರ್ ಅವರ ಸಂವಿಧಾನ ಎಲ್ಲರಿಗೂ ಸಮಾನ ಅವಕಾಶ ನೀಡಿದೆ. ಅಂತಹ ಸಂವಿಧಾನದಲ್ಲಿ ಬದ್ಧತೆ ಹೊಂದಿರುವ ಪಕ್ಷ ಕಾಂಗ್ರೆಸ್. ಅಂಬೇಡ್ಕರ್ 'ಇತಿಹಾಸ ತಿಳಿಯದವರು ಇತಿಹಾಸ ಸೃಷ್ಟಿಸಲಾರರು' ಎಂದಿದ್ದರು. ಹಾಗಾಗಿ ನಾವು ಈ ದೇಶದ ಇತಿಹಾಸ ತಿಳಿದುಕೊಳ್ಳಬೇಕು. ಸಂವಿಧಾನವನ್ನು ಅರ್ಥ ಮಾಡಿಕೊಳ್ಳಬೇಕು ಎಂದು ತಿಳಿಸಿದರು. ನರೇಂದ್ರ ಮೋದಿಯವರು 'ಅಚ್ಛೆ ದಿನ್ ಆಯೇಗಾ' ಎಂದರು. ಅವರ ಆಡಳಿತದಲ್ಲಿ ಬೆಲೆ ಏರಿಕೆಯಲ್ಲಿ ಇಳಿಕೆ ಉಂಟಾಗಿದೆಯೇ? ಅಡುಗೆ ಅನಿಲದ ಸಿಲಿಂಡರ್ ಬೆಲೆ ಇವರ ಆಡಳಿತಕ್ಕೂ ಮುನ್ನ 440 ರೂ. ಇತ್ತು. ಇಂದು 1,100 ರೂ. ಆಗಿದೆ. ಇದೇನಾ ಅಚ್ಛೆ ದಿನ್. ಈಗ ಹೇಳಿ ಮಹಿಳೆಯರು ಬಿಜೆಪಿಗೆ ಓಟು ಹಾಕಬೇಕಾ? ಪೆಟ್ರೋಲ್, ಡೀಸೆಲ್ ಮತ್ತು ಗೊಬ್ಬರದ ಬೆಲೆ ಕಡಿಮೆಯಾಗಿದೆಯೇ? ಮೋದಿಯವರು ತಮ್ಮ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಒಂದೇ ಒಂದು ದಿನವೂ ಬೆಲೆ ಏರಿಕೆ, ನಿರುದ್ಯೋಗದ ಬಗ್ಗೆ ಮಾತನಾಡಿಲ್ಲ. ಏಕೆಂದರೆ ಅವರು ಕೊಟ್ಟ ಮಾತಿಗೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ. ಪ್ರಶ್ನೆ ಕೇಳುತ್ತಾರೆಂದು ಮಾಧ್ಯಮ ಗೋಷ್ಠಿ ಕೂಡ ಮಾಡಿಲ್ಲ ಎಂದು ದೂರಿದರು.

ಸಮಾಜ–ಕುಟುಂಬ ಒಡೆಯುವ ಬಿಜೆಪಿ: ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣದಿಂದ ಇಡೀ ದೇಶದಲ್ಲಿ ಜನ ಬಿಜೆಪಿ ಪರವಾಗುತ್ತಾರೆ ಎಂದುಕೊಂಡಿದ್ದರು. ಆದರೆ ಅದು ತಿರುವು ಮುರುವು ಆಯಿತು. ಕೇವಲ ಶ್ರೀರಾಮನ ಮೂರ್ತಿ ಮಾತ್ರ ರಾಮಮಂದಿರದಲ್ಲಿ ಪ್ರತಿಷ್ಠಾಪನೆ ಮಾಡಿದ್ದಾರೆ. ಸೀತೆ, ಲಕ್ಷ್ಮಣ, ಆಂಜನೇಯ ಅಲ್ಲಿಲ್ಲ. ಏಕೆ ಅವರನ್ನೆಲ್ಲಾ ಬೇರ್ಪಡಿಸಿದ್ದೀರಿ ಎಂದು ಪ್ರಶ್ನಿಸಿದರಲ್ಲದೆ, ಅದಕ್ಕಾಗಿ ಅವರು ಜೈ ಶ್ರೀರಾಮ ಎಂದಾಗ, ನಾನು ಜೈ ಸೀತಾರಾಮ್ ಎಂದು ಹೇಳಿದ್ದೆ. ಇವರು ಕುಟುಂಬ ಹಾಗೂ ಸಮಾಜ ಒಡೆಯುವವರು ಎಂದು ಕಿಡಿಕಾರಿದರು.

ಇದಕ್ಕೂ ಮುನ್ನ ಶಾಸಕ ತನ್ವೀರ್ ಸೇಠ್ ಅವರು ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು. ಅಲ್ಲದೆ, ಮಾಜಿ ಸಚಿವ ಕೋಟೆ ಎಂ.ಶಿವಣ್ಣ, ಸಹಕಾರ ಕ್ಷೇತ್ರದ ವಾಸು, ಶಶಿಕಲಾ ನಾಗರಾಜು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು. ಕೆಪಿಸಿಸಿ ಅಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವ ಕೆ.ವೆಂಕಟೇಶ್, ಶಾಸಕರಾದ ಕೆಹರೀಶ್‌ಗೌಡ, ಅನಿಲ್ ಚಿಕ್ಕಮಾದು, ಎಂಎಲ್‌ಸಿ ಡಾ.ಡಿ. ತಿಮ್ಮಯ್ಯ, ಮಾಜಿ ಎಂಎಲ್‌ಸಿ ಧರ್ಮಸೇನ, ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ಮಾಜಿ ಶಾಸಕರಾದ ಡಾ.ಯತೀಂದ್ರ ಸಿದ್ದರಾಮಯ್ಯ, ಎಂ.ಕೆ. ಸೋಮಶೇಖರ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಡಾ.ಬಿ.ಪುಷ್ಪ ಅಮರನಾಥ್, ಮುಡಾ ಅಧ್ಯಕ್ಷ ಕೆ.ಮರೀಗೌಡ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಹಾಜರಿದ್ದರು.

ಕಾಂಗ್ರೆಸ್ ಸೇರಲಿರುವ ಬಿಜೆಪಿಯವರ ದೊಡ್ಡ ಪಟ್ಟಿಯೇ ಇದೆ

- ಕೆಪಿಸಿಸಿ ಅಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್
- ರಾಜ್ಯದಲ್ಲಿ ಮೋದಿ ಅಲೆಯಲ್ಲ, ಕಾಂಗ್ರೆಸ್ ಗ್ಯಾರಂಟಿ ಅಲೆ ಇದೆ

ಮೈಸೂರು,ಮಾ.27(ಪಿಎಂ)–ಕಾಂಗ್ರೆಸ್ ಸೇರಲಿರುವ ಬಿಜೆಪಿಯವರ ದೊಡ್ಡ ಪಟ್ಟಿಯೇ ಇದೆ ಎಂದು ತಿಳಿಸಿದ ಕೆಪಿಸಿಸಿ ಅಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಈ ಹಿಂದೆ ಯಾರೇ ಎಷ್ಟೇ ವಿರೋಧಿಸಿದ್ದರೂ ನಮ್ಮ ಪಕ್ಷದ ತತ್ವ ಸಿದ್ಧಾಂತ ಒಪ್ಪಿ ಸೇರಲು ಬಯಸಿದರೆ ಅವಕಾಶ ಮಾಡಿಕೊಡಿ ಎಂದು ಹೇಳಿದರು.

ಮೈಸೂರಿನ ಕಾಂಗ್ರೆಸ್ ಭವನದ ಆವರಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕೆಆರ್, ಎನ್‌ಆರ್, ಚಾಮರಾಜ ಮತ್ತು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರಗಳ ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿದ ಅವರು, ಕಳೆದ ವಿಧಾನಸಭಾ ಚುನಾವಣೆಯ ಸಂದರ್ಭದಲೇ ಹೆಚ್.ವಿ. ರಾಜೀವ್ ಅವರನ್ನು ಕಾಂಗ್ರೆಸ್‌ಗೆ ಕರೆ ತರಲು, ಆ ಮೂಲಕ ಅವರಿಗೆ ಸ್ಪರ್ಧಿಸಲು ಅವಕಾಶ ನೀಡಲು ಪ್ರಯತ್ನಪಟ್ಟೆ. ಆದರೆ ಅವರು ಆಗ ಮನಸ್ಸು ಮಾಡಲಿಲ್ಲ ಎಂದರು.

ರಾಜ್ಯದ 24 ಲೋಕಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಣೆ ಮಾಡಿದ್ದು, ಈ ಪೈಕಿ 6 ಕ್ಷೇತ್ರಗಳಲ್ಲಿ ಮಹಿಳಾ ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸಿದ್ದೇವೆ. ಇದು ಇದೇ ಮೊದಲು. ಹಳೇ ಮೈಸೂರು ಪ್ರಾಂತ್ಯದ ಮೈಸೂರು, ಮಂಡ್ಯ, ಹಾಸನ ಹಾಗೂ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆದ್ದೇ ಗೆಲ್ಲುತ್ತಾರೆ. ಜೊತೆಗೆ ರಾಜ್ಯದಲ್ಲಿ 20ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಈ ನಾಡಿನ ದೇವತೆ ತಾಯಿ ಚಾಮುಂಡೇಶ್ವರಿ ಆಶೀರ್ವಾದ ಮಾಡಿದಕ್ಕೆ 136 ಸ್ಥಾನವನ್ನು ಗೆದ್ದು ನಾಡಿನ ಜನತೆಗೆ ಸೇವೆ ನೀಡುವಂತಾಗಿದೆ. ಡಬಲ್ ಇಂಜಿನ್ ಸರ್ಕಾರ ಇತ್ತು. ಅವರ ಕೆಲಸ ಕಾರ್ಯಗಳನ್ನು ರಾಜ್ಯದ ಜನ ಮೆಚ್ಚಲಿಲ್ಲ. ಜನ ಬೆಲೆ ಏರಿಕೆಯಿಂದ ತತ್ತರಿಸಿದ್ದರು. ಕಾಂಗ್ರೆಸ್ ಶಕ್ತಿಯೇ ಈ ದೇಶದ ಶಕ್ತಿಯಾಗಿದೆ. ಕಾಂಗೆಸ್ ಒಂದು ವರ್ಗ ಒಂದು ಜಾತಿಗೆ ಸೀಮಿತವಾಗಿ ಕಾರ್ಯಕ್ರಮ ಕೊಟ್ಟಿಲ್ಲ ಎಂದರು. ರಾಜ್ಯದಲ್ಲಿ ಮೋದಿ ಅಲೆ ಇಲ್ಲ. ಬದಲಿಗೆ ಕಾಂಗ್ರೆಸ್ ಗ್ಯಾರಂಟಿ ಅಲೆ ಇದೆ. ಬಿಜೆಪಿ ಅಭ್ಯರ್ಥಿ ಬಗ್ಗೆ ಟೀಕೆ ಮಾಡುವ ಅವಶ್ಯಕತೆ ಇಲ್ಲ. ನಮಗೆ ಜನರ ಮಧ್ಯೆ ಇದ್ದು ಕೆಲಸ ಮಾಡುವ ಅಭ್ಯರ್ಥಿ ಬೇಕು. ಲಕ್ಷ್ಮಣ ಅಂತಹ ಅಭ್ಯರ್ಥಿಯಾಗಿದ್ದು, ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯನವರೇ ಅಭ್ಯರ್ಥಿ ಎಂದು ಭಾವಿಸಿ ಲಕ್ಷ್ಮಣರ ಪರ ಕೆಲಸ ಮಾಡಿ. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಹಾಲಿ ಸಂಸದರು ಗೆಲ್ಲುವುದಿಲ್ಲ ಎಂದು ಬಿಜೆಪಿಯವರು ಅಭ್ಯರ್ಥಿ ಬದಲಾವಣೆ ಮಾಡಿದ್ದಾರೆ ಎಂದು ಹೇಳಿದರು.

ಹೆಚ್‌ಡಿಡಿ ವಿರುದ್ಧ ಕಿಡಿನುಡಿ: ಮೇಕೆದಾಟು ಯೋಜನೆ ಅನುಷ್ಠಾನದಿಂದ ರಾಜ್ಯಕ್ಕೆ ಅನುಕೂಲವಾಗಲಿದೆ. ಇಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಸದರಿ ಯೋಜನೆ ಬಗ್ಗೆ ರಾಜಕೀಯ ಪಕ್ಷಗಳು ಒಟ್ಟಾಗಬೇಕು ಎನ್ನುತ್ತಿದ್ದಾರೆ. ನಾವು ಪಾದಯಾತ್ರೆ ಮಾಡಿದಾಗ ಏನಾಗಿತ್ತು ನಿಮ್ಮ ಕೂಗು ಎಂದು ಡಿ.ಕೆ.ಶಿವಕುಮಾರ್ ಪ್ರಶ್ನಿಸಿದರು.

ಮಂಡ್ಯ, ಹಾಸನ, ಬೆಂಗಳೂರು ಗ್ರಾಮಾಂತರ ಕ್ಷೇತ್ರಗಳಲ್ಲಿ ಹಿನ್ನಡೆಯಾಗುತ್ತದೆ ಎಂದು ಈಗ ಮೇಕೆದಾಟು ನೆನಪಾಗುತ್ತಿದೆಯೇ ಗೌಡರೇ ಎಂದು ಕಿಡಿಕಾರಿದರು.

ಮಿಸ್ಟರ್ ನರೇಂದ್ರ ಮೋದಿ ಜೀ, ಕರ್ನಾಟಕ ಆರ್ಥಿಕವಾಗಿ ದಿವಾಳಿ ಆಗಿದ್ಯಾ?

ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನೆ

ಮೈಸೂರು,ಮಾ.27(ಪಿಎಂ)– ಮಿಸ್ಟರ್ ನರೇಂದ್ರ ಮೋದಿ ಜೀ. ನಾವು ಅಧಿಕಾರಕ್ಕೆ ಬಂದು 10 ತಿಂಗಳು ಆಯಿತು. ಐದು ಗ್ಯಾರಂಟಿಗಳನ್ನು ಜಾರಿಗೊಳಿಸಿದ್ದೇವೆ. ಕರ್ನಾಟಕ ಆರ್ಥಿಕವಾಗಿ ದಿವಾಳಿ ಆಗಿದೆಯೇ? ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು. ಮೈಸೂರಿನ ಕಾಂಗ್ರೆಸ್ ಕಚೇರಿ ಆವರಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿದ ಅವರು, ಮೋದಿಯವರು ಗ್ಯಾರಂಟಿ ಜಾರಿ ಸಾಧ್ಯವಿಲ್ಲ ಎಂದಿದ್ದರು. ಒಂದು ವೇಳೆ ಜಾರಿ ಮಾಡಿದರೆ ಕರ್ನಾಟಕ ದಿವಾಳಿ ಆಗುತ್ತದೆ ಎಂದೂ ಹೇಳಿದ್ದರು. ಮಿಸ್ಟರ್ ನರೇಂದ್ರ ಮೋದಿ ಜೀ. ನಾವು ಅಧಿಕಾರಕ್ಕೆ ಬಂದು 10 ತಿಂಗಳು ಆಯಿತು. ಐದು ಗ್ಯಾರಂಟಿಗಳನ್ನು ಜಾರಿಗೊಳಿಸಿದ್ದೇವೆ. ಕರ್ನಾಟಕ ಆರ್ಥಿಕವಾಗಿ ದಿವಾಳಿ ಆಗಿದೆಯೇ? ಅಭಿವೃದ್ಧಿ ಕೆಲಸಗಳು ನಿಂತೇ ಹೋಗಿವೆ ಎಂದು ಸುಳ್ಳು ಆರೋಪ ಮಾಡುತ್ತಿದ್ದರು. ಮುಂದಿನ ವರ್ಷಕ್ಕೆ 1 ಲಕ್ಷದ 20 ಸಾವಿರ ಕೋಟಿ ರೂ.ಗಳನ್ನು ಅಭಿವೃದ್ಧಿ ಕೆಲಸಗಳಿಗಾಗಿ ಇಟ್ಟಿದ್ದೇವೆ ಎಂದರು.

ಮೈಸೂರಲ್ಲಿ ಒಂದು ಕೆಲಸ ಮಾಡಿದ್ರೆ ತೋರಿಸಲಿ: ಸಮಾನತೆ ಸಮಾಜ ನಿರ್ಮಾಣವಾಗಿ ಎಲ್ಲರಿಗೂ ಸಮಾನ ಹಕ್ಕು ದೊರೆಯಬೇಕಾದರೆ ಅದು ಕಾಂಗ್ರೆಸ್ ಪಕ್ಷದಿಂದ ಮಾತ್ರ ಸಾಧ್ಯವೇ ಹೊರತು ಬಿಜೆಪಿಯಿಂದ ಸಾಧ್ಯವಿಲ್ಲ. ನಮ್ಮ ಕಾರ್ಯಕರ್ತರು ಇದನ್ನು ಮನೆ ಮನೆಗೆ ತಲುಪಿಸುವ ಕೆಲಸ ಮಾಡಬೇಕು. ರಾಜ್ಯ ಬಿಜೆಪಿಯವರು ತಮ್ಮ ಆಡಳಿತಾವಧಿಯಲ್ಲಿ ಮೈಸೂರು ನಗರದಲ್ಲಿ ಯಾವುದಾದರೂ ಒಂದು ಕೆಲಸ ಮಾಡಿದ್ದೇವೆ ಎಂದು ತೋರಿಸಲಿ. ನಾನು ಮಾಡಿದ್ದು ಬಿಟ್ಟರೆ ಒಂದೇ ಒಂದು ಕೆಲಸ ಮಾಡಿಲ್ಲ. ನಮ್ಮ ಕಾರ್ಯಕರ್ತರು ಮನೆ ಮನೆಗೆ ಭೇಟಿ ನೀಡಿ ಇದನ್ನು ಹೇಳಬೇಕು ಎಂದು ಹೇಳಿದರು. ನಾವು ಬಿಜೆಪಿಯವರಂತೆ ಸುಳ್ಳು ಹೇಳಬೇಕಾಗಿಲ್ಲ. ಸತ್ಯ ಹೇಳಿ. ಅಧಿಕಾರಕ್ಕೆ ಬಂದ ಏಳೆಂಟು ತಿಂಗಳಲ್ಲಿ ಐದು ಗ್ಯಾರಂಟಿ ಜಾರಿಗೊಳಿಸಿದ್ದೇವೆ. ಆದರೆ ನರೇಂದ್ರ ಮೋದಿಯವರ ಭರವಸೆಯಂತೆ ಎಲ್ಲರ ಖಾತೆಗೆ 15 ಲಕ್ಷ ರೂ. ಬಂದಿದೆಯೇ? ಎಂದು ಪ್ರಶ್ನಿಸಿದರು.

56 ಇಂಚು ಎದೆ ಮುಖ್ಯವಲ್ಲ: ಎದೆ 56 ಇಂಚು ಇರುವುದು ಮುಖ್ಯವಲ್ಲ. ಮನುಷ್ಯಪರವಾದ ಅನುಕಂಪ ಇರುವುದು ಮುಖ್ಯ. ಬಡವರ ಪರವಾದ ಅನುಕಂಪ ಇರಬೇಕು. ಬಡವರ, ರೈತರ ಪರವಾದ ಯಾವ ಕಾರ್ಯಕ್ರಮ ಮಾಡಿದ್ದಾರೆ ಹೇಳಲಿ ಎಂದು ಸಿದ್ದರಾಮಯ್ಯ, ನರೇಂದ್ರ ಮೋದಿಯವರ ವಿರುದ್ಧ ವಾಗ್ದಾಳಿ ನಡೆಸಿದರು. ಗ್ಯಾರಂಟಿ ಅಪಹಾಸ್ಯ ಮಾಡಿ ಈಗ ಮೋದಿ ಗ್ಯಾರಂಟಿ ಎನ್ನುತ್ತಿದ್ದಾರೆ. ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಮನೆ ನಿರ್ಮಾಣಕ್ಕೆ ಕೇಂದ್ರ ಸರ್ಕಾರದಿಂದ ಒಂದೂವರೆ ಲಕ್ಷ ನೀಡಲಾಗುತ್ತದೆ. ಮನೆಯೊಂದರ ನಿರ್ಮಾಣಕ್ಕೆ ಒಟ್ಟು ಏಳೂವರೆ ಲಕ್ಷ ಎಂದು ಅಂದಾಜಿಸಿದ್ದು, ರಾಜ್ಯ ಸರ್ಕಾರವು 1 ಲಕ್ಷದ 20 ಸಾವಿರ ಅನುದಾನ ನೀಡುತ್ತದೆ. ಅಲ್ಲಿಗೆ 2 ಲಕ್ಷದ 70 ಸಾವಿರ ಆಯಿತು. ಉಳಿದ ಮೊತ್ತವನ್ನು ಫಲಾನುಭವಿ ಭರಿಸಬೇಕು. ಹೆಸರು ಮಾತ್ರ ಪ್ರಧಾನಮಂತ್ರಿ ಆವಾಸ್ ಯೋಜನೆ ಎಂದು ಟೀಕಾ ಪ್ರಹಾರ ನಡೆಸಿದರು. ಒಂದೂವರೆ ಲಕ್ಷ ಕೊಟ್ಟು ಜಿಎಸ್‌ಟಿ ಅಡಿಯಲ್ಲಿ 1 ಲಕ್ಷದ 38 ಸಾವಿರ ರೂ. ವಾಪಸ್ಸು ಪಡೆಯುತ್ತಾರೆ. ಒಂದೂವರೆ ಲಕ್ಷದಲ್ಲಿ 1 ಲಕ್ಷದ 38 ಸಾವಿರ ವಾಪಸ್ಸು ಪಡೆದರೆ ಉಳಿದದ್ದು ಎಷ್ಟು ಎಂದು ಪ್ರಶ್ನಿಸಿದ ಅವರು, ಹೆಸರು ಮಾತ್ರ ಪ್ರಧಾನ ಮಂತ್ರಿ ಆವಾಸ್ ಯೋಜನೆ ಎಂದು ಟೀಕಿಸಿದರಲ್ಲದೆ, 1 ಲಕ್ಷದ 80 ಸಾವಿರ ಮನೆಗಳಿಗೆ ರಾಜ್ಯ ಸರ್ಕಾರ ಅನುದಾನ ನೀಡುತ್ತಿದೆ ಎಂದು ತಿಳಿಸಿದರು.

ಏಕವಚನದಲ್ಲೇ ಈಶ್ವರಪ್ಪ ವಿರುದ್ಧ ಕಿಡಿ: ಶಿವಮೊಗ್ಗದಲ್ಲಿ ಈಶ್ವರಪ್ಪ ಅಂತ ಒಬ್ಬ ಇದ್ದಾನೆ. ಬಿಜೆಪಿ ಸಿದ್ಧಾಂತ ಇವನಿಂದಲೇ ಹುಟ್ಟಿತು ಎನ್ನುವಂತೆ ಮಾತನಾಡುತ್ತಿದ್ದ. ಆದರೆ ಈಗಿನ ಮಾತುಗಳೇ ಬೇರೆ ತರ ಇವೆ ಎಂದು ಕೆ.ಎಸ್.ಈಶ್ವರಪ್ಪ ವಿರುದ್ಧ ವಾಗ್ದಾಳಿ ನಡೆಸಿದರು.

ಚುನಾವಣೆ ಕಾರಣ ನೇಮಕಾತಿ ಪ್ರಕ್ರಿಯೆಗಳ ನಿಲ್ಲಿಸಲು ಸಾಧ್ಯವಿಲ್ಲ; ರಾಜ್ಯ ಸರ್ಕಾರಕ್ಕೆ ಹೈಕೋರ್ಟ್

ಬೆಂಗಳೂರು, ಮಾ.27– ಚುನಾವಣೆಯ ಕಾರಣಕ್ಕಾಗಿ ನೇಮಕಾತಿ ಪ್ರಕ್ರಿಯೆಗಳನ್ನು ನಿಲ್ಲಿಸಲು ಸಾಧ್ಯವಿಲ್ಲ. ಆರಂಭವಾಗಿದ್ದ ನೇಮಕಾತಿ ಪ್ರಕ್ರಿಯೆನ್ನು ಪೂರ್ಣಗೊಳಿಸಬೇಕು ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಸೂಚನೆ ನೀಡಿದೆ.

ಲೋಕಸಭಾ ಚುನಾವಣೆ ಘೋಷಣೆಯಾಗಿರುವ ಹಿನ್ನೆಲೆ, ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ (ರೇರಾ) ಮೇಲ್ಮನವಿ ನ್ಯಾಯಾಧಿಕರಣಕ್ಕೆ ನಡೆಯುತ್ತಿದ್ದ ಅಧ್ಯಕ್ಷರು ಮತ್ತು ಸದಸ್ಯರ ನೇಮಕಾತಿ ಪ್ರಕ್ರಿಯೆಗಳನ್ನು ಸರ್ಕಾರ ಸ್ಥಗಿತಗೊಳಿಸಿತ್ತು. ಅದನ್ನು ಪ್ರಶ್ನಿಸಿ ಕೆಲ ಪತ್ರಕರ್ತರು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು.

ಈ ಹಿಂದೆ, ಫೆಬ್ರವರಿ 26ರಂದು ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎಂ ನಾಗಪ್ರಸನ್ನ ಅವರಿದ್ದ ಪೀಠವು, ರೇರಾ ಮೇಲ್ಮನವಿ ನ್ಯಾಯಮಂಡಳಿಗೆ ಅದರ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಿಸಬೇಕು ಮತ್ತು ಕ್ರಿಯಾತ್ಮಕಗೊಳಿಸಬೇಕು ಎಂದು ಹೇಳಿತ್ತು. ಸರ್ಕಾರಕ್ಕೆ ಮೂರು ವಾರಗಳ ಕಾಲಾವಕಾಶ ನೀಡಿತ್ತು.

ಆ ಆದೇಶದ ಪಾಲನೆಗೆ ಸಂಬಂಧ ಹೈಕೋರ್ಟ್ ವಿಚಾರಣೆ ನಡೆಸಿದೆ. ಸರ್ಕಾರದ ಪರವಾಗಿ ವಾದ ಮಂಡಿಸಿದ ಅಡ್ವೋಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಅವರು, ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ ನ್ಯಾಯಾಲಯ ನೀಡಿರುವ ಆದೇಶಗಳನ್ನು ಜಾರಿಗೊಳಿಸಲು ಚುನಾವಣೆ ಘೋಷಣೆ ಅಡ್ಡಿಯಾಗಿದೆ ಎಂದು ಹೇಳಿದರು.

ವಾದ ಆಲಿಸಿದ ನ್ಯಾಯಪೀಠ ಚುನಾವಣೆ ಕಾರಣ ನೇಮಕಾತಿಗಳನ್ನು ನಿಲ್ಲಿಸಲು ಸಾಧ್ಯವಿಲ್ಲ. ನೇಮಕಾತಿಯನ್ನು ಪೂರ್ಣಗೊಳಿಸಬೇಕು ಎಂದು ಸರ್ಕಾರಕ್ಕೆ ಸೂಚಿಸಿತು.

ಹಾಸನ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಗೊಂದಲ, ಕೋಲಾಹಲ!

ಹಾಸನ, ಮಾ.27– ಹಾಸನ ಜಿಲ್ಲೆ ಕಾಂಗ್ರೆಸ್ ಕಾರ್ಯಕರ್ತರ ಸಭೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ನೇತೃತ್ವದಲ್ಲಿ ನಡೆದಿದ್ದು, ಗೊಂದಲ, ಕೋಲಾಹಲ ಉಂಟಾಗಿದೆ.



ಹಾಸನ ಜಿಲ್ಲೆಯಲ್ಲಿ ಮಾ.30 ರಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹಾಗೂ ಸಿಎಂ ಸಿದ್ದರಾಮಯ್ಯ ಅವರ ಪ್ರಚಾರ ಕಾರ್ಯಕ್ರಮದ ಬಗ್ಗೆ ಚರ್ಚೆ ನಡೆಸುವುದಕ್ಕಾಗಿ ಈ ಸಭೆ ನಡೆದಿತ್ತು. ಅರಕಲಗೂಡು ವಿಧಾನಸಭಾ ಕ್ಷೇತ್ರದಲ್ಲಿ ಶ್ರೇಯಸ್ ಪಟೇಲ್‌ಗೆ 30,000 ಮತಗಳ ಮುನ್ನಡೆ ಲಭ್ಯವಾಗುವಂತೆ ಮಾಡುವುದಕ್ಕೆ ಶಕ್ತಿ ಹೊಂದಿರುವ ಶ್ರೀಧರ್‌ಗೌಡ ಅವರು 2023ರ ವಿಧಾನಸಭಾ ಚುನಾವಣೆಯಲ್ಲಿ ಸೋತಿದ್ದು ಏಕೆ ಎಂದು ಶ್ರೀಧರ್ ಗೌಡ ಅವರನ್ನು ಕೆ.ಎನ್.ರಾಜಣ್ಣ ಪ್ರಶ್ನಿಸಿದಾಗ ರಾಜಣ್ಣ ಅವರ ಪ್ರಶ್ನೆಗೆ ಶ್ರೀಧರ್ ಗೌಡ ಅವರ ಬೆಂಬಲಿಗರು ಆಕ್ಷೇಪ ವ್ಯಕ್ತಪಡಿಸಿದರು ಈ ವೇಳೆಯಲ್ಲಿ ಗೊಂದಲ, ಕೋಲಾಹಲ ಉಂಟಾಗಿತ್ತು.

ಇದಕ್ಕೂ ಮುನ್ನ ಸಭೆಯನ್ನುದ್ದೇಶಿಸಿ ಮಾತನಾಡಿದ ಶ್ರೀಧರ್‌ಗೌಡ, ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಅರಕಲಗೂಡು ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಶ್ರೇಯಸ್ ಪಟೇಲ್ 30 ಸಾವಿರ ಮತಗಳ ಮುನ್ನಡೆ ಸಾಧಿಸಲಿದ್ದಾರೆ ಎಂದಿದ್ದರು. ಕೆ.ಎನ್.ರಾಜಣ್ಣ ಕಳೆದ ವಿಧಾನಸಭಾ ಚುನಾವಣೆ ವೇಳೆ ಸೋತಿದ್ದು ಏಕೆ ಎಂದು ಪ್ರಶ್ನಿಸಿದಾಗ ಶ್ರೀಧರ್ ಗೌಡ ಬೆಂಬಲಿಗರು ಮತ್ತು ಇತರ ಮುಖಂಡರ ಬೆಂಬಲಿಗರ ನಡುವೆ ಜಟಾಪಟಿ ನಡೆಯಿತು.

ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ವಿಚಲಿತರಾಗಿ ಭಾಷಣ ನಿಲ್ಲಿಸಿದರು. ಅರಸೀಕೆರೆ ಶಾಸಕ ಕೆ.ಎಂ.ಶಿವಲಿಂಗೇಗೌಡ ಕಾರ್ಮಿಕರನ್ನುದ್ದೇಶಿಸಿ ಮಾತನಾಡುವಾಗ ಕಾರ್ಮಿಕರು ಪರಸ್ಪರ ಗೊಣಗಿಕೊಂಡು ದೂರು ಹೇಳಿದರು. ಮುಖಂಡರ ಮಾತು ಕೇಳಲು ಆಸಕ್ತಿ ಇಲ್ಲದಿದ್ದರೆ ಸಭಾಂಗಣದಿಂದ ಹೊರಹೋಗುವಂತೆ ಕಾರ್ಯಕರ್ತರಿಗೆ ಸಚಿವರು ಸೂಚಿಸಿದರು.

ಈ ಬಾರಿ ಜೆಡಿಎಸ್ ಅಭ್ಯರ್ಥಿಗೆ ತಕ್ಕ ಪಾಠ ಕಲಿಸಲು ಜನ ಮುಂದಾಗಿದ್ದು, ಇದರ ಸದುಪಯೋಗ ಪಡೆದು ಮೈತ್ರಿ ಅಭ್ಯರ್ಥಿಯನ್ನು ಸೋಲಿಸಲು ಕಾಂಗ್ರೆಸ್ ಕಾರ್ಯಕರ್ತರು ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಕೆಎಚ್‌ಬಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ ಒತ್ತಾಯಿಸಿದರು. ಸ್ಥಳೀಯ ಮುಖಂಡರ ವಿರುದ್ಧ ಆರೋಪಿಸಿ ಕಾರ್ಯಕರ್ತರು ವೇದಿಕೆಯತ್ತ ಧಾವಿಸಿದಾಗ ಕಾಂಗ್ರೆಸ್ ಮುಖಂಡ ಹಾಗೂ ಹಾಸನ ಜಿಲ್ಲಾ ಚುನಾವಣಾ ಉಸ್ತುವಾರಿ ಜೆ.ಸಿ. ಚಂದ್ರಶೇಖರ್ ಮೌನವಾಗಿದ್ದರು.

ನಕಲಿ ವಾಟ್ಸಾಪ್ ಸಂದೇಶ; ಚು.ಆಯೋಗಕ್ಕೆ ಬಿಜೆಪಿ ದೂರು

ಬೆಂಗಳೂರು, ಮಾ.27– ಕರ್ನಾಟಕ ಬಿಜೆಪಿ ಘಟಕವು ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿದ್ದು, ಪಕ್ಷಕ್ಕೆ ಕಳಂಕ ತರಲು ಸಾಮಾಜಿಕ ಜಾಲತಾಣಗಳಲ್ಲಿ ನಕಲಿ ವಾಟ್ಸಾಪ್ ಸಂದೇಶವನ್ನು ಹರಿಬಿಡುವವರ ವಿರುದ್ಧ ಕ್ರಮಕೈಗೊಳ್ಳುವಂತೆ ಒತ್ತಾಯಿಸಿದೆ.

ಮಾರ್ಚ್ 24ರಂದು ರಾಜ್ಯ ಮುಖ್ಯ ಚುನಾವಣಾಧಿಕಾರಿಗೆ ಸಲ್ಲಿಸಿದ ದೂರಿನಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಕಿಡಿಗೇಡಿಗಳಿಂದ ನಕಲಿ ವಾಟ್ಸಾಪ್ ಸಂದೇಶವನ್ನು ಪ್ರಸಾರ ಮಾಡಲಾಗುತ್ತಿದೆ ಎಂದು ಹೇಳಿದೆ.

ಬಿಜೆಪಿ ಹೆಸರಿನಲ್ಲಿ ಈ ಲಿಂಕ್ https://bjp.org@offersnow.wiki ಮೂಲಕ ಸಂದೇಶ ಪ್ರಸಾರವಾಗಿದೆ ಎಂದಿದೆ.


ಪಕ್ಷವು ಈ ಲಿಂಕ್ ಅಥವಾ ಸೈಟ್‌ನ ಲೇಖಕರಲ್ಲ. ಈ ಲಿಂಕ್ ಅಥವಾ ಸೈಟ್ ನಕಲಿಯಾಗಿದೆ ಮತ್ತು ಅದರಲ್ಲಿರುವ ಸಂದೇಶ ಕೂಡ ಕಪೋಲಕಲ್ಪಿತವಾಗಿದೆ. ಬಿಜೆಪಿಗೆ ಕೆಟ್ಟ ಹೆಸರು ತರಲು ಸಾಮಾಜಿಕ ಮಾಧ್ಯಮದಲ್ಲಿ ಪ್ರಸಾರ ಮಾಡಲಾಗುತ್ತಿದೆ ಎಂದು ದೂರಿದೆ. ದೂರಿನ ಪ್ರಕಾರ, ಈ ಸಂದೇಶದ ಶೀರ್ಷಿಕೆಯು 'ಬಿಜೆಪಿ–ಚುನಾವಣೆ ಬೋನಸ್' ಎಂದಿದೆ ಮತ್ತು ಪ್ರಶ್ನಾವಳಿಯಲ್ಲಿ ಕೇಳಲಾದ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸುವ ಪ್ರತಿಯೊಬ್ಬರಿಗೂ ಪಕ್ಷವು ಅಧಿಕೃತವಾಗಿ 5,000 ರೂ. ಮತ್ತು ಹೆಚ್ಚಿನ ಬೋನಸ್ ನೀಡುತ್ತಿದೆ ಎಂದು ಹೇಳುತ್ತದೆ.

ಅಲ್ಲದೆ, ಅದೇ ಪ್ರಧಾನಿ ನರೇಂದ್ರ ಮೋದಿಯವರ ಫೋಟೊವನ್ನು ಒಳಗೊಂಡಿದೆ ಮತ್ತು ಪ್ರತಿ ಫೋಟೊದಲ್ಲಿ 2014, 2019 ಮತ್ತು 2024 ಎಂದು ಹೇಳುತ್ತದೆ.

ಇಲ್ಲಿ ನೀಡುವ ಸಂದೇಶವು ಬಿಜೆಪಿಯು ತಮಗೆ ಮತ ಹಾಕಲು ಹಣ ನೀಡುತ್ತಿದೆ ಎಂದು ಮತದಾರರ ಮನಸ್ಸಿನಲ್ಲಿ ಅನುಮಾನ ಮೂಡಿಸುವ ಗುರಿಯನ್ನು ಹೊಂದಿದೆ. ಈ ದಾರಿತಪ್ಪಿಸುವ ಸಂದೇಶವನ್ನು ಪ್ರಸಾರ ಮಾಡುವ ಮೂಲಕ ಪಕ್ಷಕ್ಕೆ ಕೆಟ್ಟ ಹೆಸರು ತರುತ್ತದೆ ಎಂದು ದೂರಿನಲ್ಲಿ ಹೇಳಲಾಗಿದೆ.

ಮಂಡ್ಯದಲ್ಲಿ ನಾನು ಗೆಲ್ಲಲ್ಲ ಅನ್ನೋಕೆ ಸಿದ್ದರಾಮಯ್ಯ ಜೋತಿಷಿಯೇ?

ಮೈಸೂರು, ಮಾ.27(ಎಂಕೆ)– ಮಂಡ್ಯದಲ್ಲಿ ನಾನು ಗೆಲ್ಲಲ್ಲ ಎಂದು ಭವಿಷ್ಯ ನುಡಿಯೋಕೆ ಸಿದ್ದರಾಮಯ್ಯ ಜ್ಯೋತಿಷಿಯೇ? ಅದನ್ನು ಅಲ್ಲಿನ ಮತದಾರರು ತೀರ್ಮಾನ ಮಾಡಲಿದ್ದಾರೆ ಎಂದು ಮಾಜಿ ಸಿಎಂ ಹಾಗೂ ಮಂಡ್ಯ ಲೋಕಸಭಾ ಕ್ಷೇತ್ರ ಅಭ್ಯರ್ಥಿ ಹೆಚ್.ಡಿ. ಕುಮಾರಸ್ವಾಮಿ ಹೇಳಿದರು.



ನಗರದ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಬುಧವಾರ ಬಿಜೆಪಿ–ಜೆಡಿಎಸ್ ಸಮನ್ವಯ ಸಭೆ ನಡೆಯಿತು. ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡ, ಮಾಜಿ ಸಚಿವ ಅಶ್ವಥ್ ನಾರಾಯಣ್, ಸಂಸದ ಪ್ರತಾಪ್ ಸಿಂಹ, ಮಾಜಿ ಸಚಿವ ಸಾ.ರಾ.ಮಹೇಶ್, ಎನ್.ಮಹೇಶ್, ಶಾಸಕರಾದ ಸಿ.ಎನ್.ಮಂಜೇಗೌಡ, ಜಿ.ಡಿ.ಹರೀಶ್‌ಗೌಡ, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ಬಿಜೆಪಿ ಅಭ್ಯರ್ಥಿ ಯದುವೀರ್, ಚಾ.ನಗರ ಬಿಜೆಪಿ ಅಭ್ಯರ್ಥಿ ಬಾಲರಾಜ್ ಮತ್ತಿತರರಿದ್ದರು.

ನಗರದ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ನಡೆದ ಬಿಜೆಪಿ–ಜೆಡಿಎಸ್ ಸಮನ್ವಯ ಸಭೆಗೂ ಮುನ್ನ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ನಾನು ಮಂಡ್ಯದ ಹೊರಗಿನವನೋ.. ಒಳಗಿನವನೋ... ಏನು ಬೇಕಾದರೂ ಹೇಳಲಿ. ಆದರೆ ನಾನು ಕನ್ನಡಿಗ. ನನಗೆ ರಾಜಕೀಯ ಜನ್ಮ ಕೊಟ್ಟಿದ್ದು ರಾಮನಗರ, ಶಕ್ತಿ ತುಂಬಿದ್ದು ಮಂಡ್ಯ ಮತ್ತು ಮೈಸೂರು ಎಂದರು.

ಕಳೆದ ಚುನಾವಣೆಯಲ್ಲಿ ನನ್ನ ಮಗ ಸ್ಪರ್ಧಿಸಿದ್ದಾಗ ಕಾಂಗ್ರೆಸ್‌ನವರೂ ನಮ್ಮ ಜೊತೆ ಇದ್ದರು. ಹೀಗಾಗಿ ಅವನ ಸೋಲಿನಲ್ಲಿ ಸಿದ್ದರಾಮಯ್ಯ ವೈಫಲ್ಯವೂ ಇದೆ. ರಾಜ್ಯದಲ್ಲಿ ಐದು ವರ್ಷ ಮುಖ್ಯಮಂತ್ರಿ ಆಗಿ ಆಡಳಿತ ನಡೆಸಿದ ಸಿದ್ದರಾಮಯ್ಯ ಮೈಸೂರಿನಲ್ಲೇ ಸೋತವರು. ನಿಮ್ಮ ಕುಹಕಗಳಿಗೆ ಜನರೇ ಉತ್ತರ ಕೊಡಲಿದ್ದಾರೆ ಎಂದು ಟೀಕಿಸಿದರು.

ಸೀರೆ, ಕುಕ್ಕರ್ ಹಂಚಿಕೆ: ಮಂಡ್ಯ, ಕೋಲಾರ ಸೇರಿದಂತೆ ರಾಜ್ಯದ ಯಾವ ಕ್ಷೇತ್ರದಲ್ಲೂ ಬಿಜೆಪಿ–ಜೆಡಿಎಸ್ ಮೈತ್ರಿಗೆ ವಿರೋಧ ಇಲ್ಲ. ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಮೈತ್ರಿ ಅಭ್ಯರ್ಥಿ ಡಾ.ಮಂಜುನಾಥ್ ಅವರ ಪರವಾಗಿರುವ ಒಲವು ಕಂಡು ಹತಾಶವಾಗಿರುವ ಕಾಂಗ್ರೆಸ್ ಸೀರೆ, ಕುಕ್ಕರ್ ಹಂಚಿ ಮತದಾರರನ್ನು ಸೆಳೆಯುವ ಪ್ರಯತ್ನ ಮಾಡುತ್ತಿದೆ ಎಂದು ದೂರಿದರು.

ಪರಸ್ಪರ ಸಹಕಾರ, ಹೊಂದಾಣಿಕೆ, ಒಗ್ಗಟ್ಟು: ನಂತರ ನಡೆದ ಸಮನ್ವಯ ಸಭೆಯಲ್ಲಿ ಮಾತನಾಡಿದ ಮಾಜಿ ಸಿಎಂ ಹೆಚ್‌ಡಿಕೆ, ಬಿಜೆಪಿ ಹಾಗೂ ಜೆಡಿಎಸ್ ಪಕ್ಷದ ಮುಖಂಡರು, ಕಾರ್ಯಕರ್ತರು ಪರಸ್ಪರ ಸಹಕಾರ, ಹೊಂದಾಣಿಕೆಯಿಂದ ಒಗ್ಗಟ್ಟಾಗಿ ಮೈತ್ರಿ ಅಭ್ಯರ್ಥಿಗಳನ್ನು ಗೆಲ್ಲಿಸಬೇಕಾಗಿದ್ದು, ಕಾರ್ಯಪ್ರವೃತ್ತರಾಗುವಂತೆ ಸೂಚಿಸಿದರು.

ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಇಂದಿನಿಂದ ನಾಮಪತ್ರ ಸಲ್ಲಿಕೆ ಆರಂಭ

ಮಂಡ್ಯ,ಮಾ.27-ಮಂಡ್ಯ ಲೋಕಸಭಾ ಕ್ಷೇತ್ರದ ಸಾರ್ವತ್ರಿಕ ಚುನಾವಣೆಗೆ ಮಾ. 28ರಂದು ಅಧಿಸೂಚನೆ ಹೊರಡಿಸಲಾಗುವುದು. ನಾಮಪತ್ರ ಸಲ್ಲಿಸಲು ಏಪ್ರಿಲ್ 4 ಕೊನೆಯ ದಿನಾಂಕವಾಗಿದ್ದು, ನಾಮಪತ್ರಗಳ ಪರಿಶೀಲನೆ ಏಪ್ರಿಲ್ 5 ರಂದು ನಡೆಯಲಿದ್ದು, ಉಮೇದುವಾರಿಕೆ ಹಿಂಪಡೆಯಲು ಏಪ್ರಿಲ್ 8 ಕೊನೆಯ ದಿನಾಂಕವಾಗಿರುತ್ತದೆ. ಮತದಾನ ಏಪ್ರಿಲ್ 26 ರಂದು ಬೆಳಿಗ್ಗೆ 7 ರಿಂದ ಸಂಜೆ 6 ಗಂಟೆಯವರೆಗೆ ನಡೆಯಲಿದೆ ಮತಎಣಿಕೆ ಜೂನ್ 4 ರಂದು ನಡೆಯಲಿದ್ದು, ಚುನಾವಣಾ ಪ್ರಕ್ರಿಯೆ ಜೂನ್ 6ರಂದು ಮುಕ್ತಾಯಗೊಳ್ಳಲಿದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಸಿದರು.



ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಿರುವ ಜಿಲ್ಲಾಧಿಕಾರಿ ಡಾ.ಕುಮಾರ.

ಬುಧವಾರ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ನಾಮಪತ್ರಗಳನ್ನು ಬೆಳಿಗ್ಗೆ 11ಗಂಟೆಯಿಂದ ಮಧ್ಯಾಹ್ನ 3ಗಂಟೆಯವರೆಗೆ ಕೊಠಡಿ ಸಂಖ್ಯೆ 29, 1ನೇ ಮಹಡಿ ಜಿಲ್ಲಾಧಿಕಾರಿಗಳ ಕಛೇರಿ, ಮಂಡ್ಯ ಜಿಲ್ಲೆ ಇಲ್ಲಿ ಸಲ್ಲಿಸಬಹುದು. ಚುನಾವಣಾಧಿಕಾರಿಗಳ ಕಾರ್ಯಾಲಯದ 100 ಮೀ. ಪರಿದಿಯ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿರುತ್ತದೆ. ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ 100 ಮೀ.ವರೆಗೆ ಕೇವಲ 3 ವಾಹನಗಳು ಮಾತ್ರ ಪ್ರವೇಶಿಸಲು ಅವಕಾಶವಿರುತ್ತದೆ ಎಂದರು.

ನಾಮಪತ್ರ ಸಲ್ಲಿಸಲು ಅಭ್ಯರ್ಥಿ ಸೇರಿದಂತೆ 5 ಜನರಿಗೆ ಮಾತ್ರ ಅವಕಾಶವಿರುತ್ತದೆ. ಚುನಾವಣಾಧಿಕಾರಿಗಳ ಕಛೇರಿ/ ಕೊಠಡಿಯಲ್ಲಿ ಸಿ.ಸಿ.ಟಿ.ವಿ. ಅಳವಡಿಸಲಾಗಿದ್ದು ಪ್ರತ್ಯೇಕವಾಗಿ ವಿಡಿಯೋ ರೆರ್ಕಾಡಿಂಗ್ ಮಾಡಲಾಗುವುದು. ನಾಮಪತ್ರ ಸಲ್ಲಿಸಲು ಅವಶ್ಯಕವಾಗಿರುವ ದಾಖಲೆಗಳು ಮತ್ತು ಅನುಸರಿಸಬೇಕಾದ ವಿವಿಧ ಪ್ರಕ್ರಿಯೆಗಳನ್ನು ಕುರಿತು ಮಾಹಿತಿಯನ್ನು ಚುನಾವಣಾಧಿಕಾರಿಗಳ ಕಾರ್ಯಾಲಯದಲ್ಲಿ ಪಡೆದುಕೊಳ್ಳಬಹುದಾಗಿರುತ್ತದೆ ಎಂದರು.

ಚುನಾವಣಾ ವೀಕ್ಷಕರ ನೇಮಕ: ಸಾಮಾನ್ಯ ವೆಚ್ಚ ವೀಕ್ಷಕರಾಗಿ- ನೀರಜ್ ಕುಮಾರ್, ಮಳವಳ್ಳಿ, ಮದ್ದೂರು, ಮಂಡ್ಯ ಮತ್ತು ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಚುನಾವಣಾ ವೆಚ್ಚ ವೀಕ್ಷಕರಾಗಿ ರೋಹಿತ್ ಅಸುದಾನಿ ಹಾಗೂ ಮೇಲುಕೋಟೆ, ನಾಗಮಂಗಲ, ಕೆ.ಆರ್.ಪೇಟೆ ಹಾಗೂ ಕೆ.ಆರ್.ನಗರ ವಿಧಾಸಭಾ ಕ್ಷೇತ್ರದ ವ್ಯಾಪ್ತಿಗೆ ಚುನಾವಣಾ ವೆಚ್ಚ ವೀಕ್ಷಕರಾಗಿ ಕುಮಾರ್ ಪ್ರಿಯತವ್ ಅಶೋಕ್ ಹಾಗೂ ಪೊಲೀಸ್ ವೀಕ್ಷಕರಾಗಿ ದೀಪಾ ಸತ್ಯನ್ ಅವರನ್ನು ಚುನಾವಣಾ ಆಯೋಗ ನೇಮಿಸಿದೆ ಎಂದು ಹೇಳಿದರು.

ಕಂಟ್ರೋಲ್ ರೂಂ: ಮಂಡ್ಯ ಲೋಕಸಭಾ ಕ್ಷೇತ್ರಕ್ಕೆ ಸಂಬಂಧಿಸಿದ 8 ವಿಧಾನಸಭಾ ವಲಯಗಳಲ್ಲಿ ದಿನದ 24 ಗಂಟೆಗಳಲ್ಲಿಯೂ ಕಾರ್ಯ ನಿರ್ವಹಿಸಲು ಕಂಟ್ರೋಲ್ ರೂಂ ಅನ್ನು ಸ್ಥಾಪಿಸಲಾಗಿದೆ. ಕಂಟ್ರೋಲ್ ರೂಂನಲ್ಲಿ ಸರದಿಯಲ್ಲಿ ಕರ್ತವ್ಯ ನಿರ್ವಹಿಸಲು ಅಧಿಕಾರಿ/ ಸಿಬ್ಬಂದಿಗಳನ್ನು ನೇಮಿಸಲಾಗಿರುತ್ತದೆ. ಜಿಲ್ಲಾಧಿಕಾರಿಗಳ ಕಚೇರಿ ಕಂಟ್ರೋಲ್ ರೂಂ ನಂಬರ್: 1950, 08232 – 223033, ಮಳವಳ್ಳಿ: 08231–242277, ಮದ್ದೂರು: 08232–298074, ಮೇಲುಕೋಟೆ: 08236–255128, ಮಂಡ್ಯ: 08232–231229, ಶ್ರೀರಂಗಪಟ್ಟಣ: 08236–253001, ನಾಗಮಂಗಲ: 08234–298105, ಕೃಷ್ಣರಾಜಪೇಟೆ: 08230–262227 ಹಾಗೂ ಕೆ.ಆರ್.ನಗರ: 08223–262371. ಆಗಿರುತ್ತದೆ ಎಂದರು.

ಕ್ಷೇತ್ರಕ್ಕೆ ಸಂಬಂಧಿಸಿದ ವಿಧಾನಸಭಾ ವಲಯಗಳಲ್ಲಿ ಭದ್ರತಾ ಕೊಠಡಿ ಮಸ್ಟರಿಂಗ್ ಹಾಗೂ ಡಿ-ಮಸ್ಟರಿಂಗ್ ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ. ಮಂಡ್ಯ ವಿಶ್ವವಿದ್ಯಾಲಯ ಕಾಮರ್ಸ್ ಬ್ಲಾಕ್ ಮತಎಣಿಕೆ ಕೇಂದ್ರವಾಗಿದೆ. ಮಳವಳ್ಳಿ- ಶಾಂತಿ ಪಿ.ಯು ಕಾಲೇಜು, ಮದ್ದೂರು- ಹೆಚ್.ಕೆ. ವೀರಣ್ಣಗೌಡ ಪಿ.ಯು ಕಾಲೇಜು, ಮೇಲುಕೋಟೆ- ಪಾಂಡವಪುರ ಪಿ.ಎಸ್.ಎಸ್.ಕೆ ಪ್ರೌಢಶಾಲೆ, ಮಂಡ್ಯ- ಮಂಡ್ಯ ವಿಶ್ವವಿದ್ಯಾಲಯ, ಶ್ರೀರಂಗಪಟ್ಟಣ- ಸರ್ಕಾರಿ ಪದವಿ ಪೂರ್ವ ಕಾಲೇಜು, ನಾಗಮಂಗಲ- ಸರ್ಕಾರಿ ಪದವಿ ಪೂರ್ವ ಕಾಲೇಜು, ಕೆ.ಆರ್. ಪೇಟೆ- ಕೆ.ಆರ್.ಪೇಟೆ ಕೃಷ್ಣ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕೆಆರ್.ನಗರ- ಸರ್ಕಾರಿ ಪದವಿ ಕಾಲೇಜುಗಳಲ್ಲಿ ಭದ್ರತಾ ಕೊಠಡಿ ಮಸ್ಟರಿಂಗ್ ಹಾಗೂ ಡಿ-ಮಸ್ಟರಿಂಗ್ ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ ಎಂದು ತಿಳಿಸಿದರು.

ಲೋಕಸಭಾ ಕ್ಷೇತ್ರದ 2074 ಮತಗಟ್ಟೆಗಳಿಗೆ ಸಂಬಂಧಿಸಿದಂತೆ 2565 ಬ್ಯಾಲೆಟ್ ಯುನಿಟ್, 2565 ಕಂಟ್ರೋಲ್ ಯುನಿಟ್ ಹಾಗೂ 2718 ವಿ.ವಿ ಪ್ಯಾಟ್‌ಗಳನ್ನು ಎಲ್ಲಾ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಮುಖಂಡರ ಹಾಗೂ ಸಂಬಂಧಪಟ್ಟ ಸಹಾಯಕ ಚುನಾವಣಾಧಿಕಾರಿಗಳ ಸಮಕ್ಷಮ ಮೊದಲನೇ ಹಂತದ ಇವಿಎಂ ರ‍್ಯಾಂಡಮೈಜೇಷನ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗಿದ್ದು, ದಿನಾಂಕ:23-03-2024 ರಂದು ಮತ್ತು 24-03-2024 ರಂದು ಅಯಾ ವಿಧಾನಸಭಾ ವಲಯಗಳಿಗೆ ಜಿ.ಪಿ.ಎಸ್ ಆಧಾರಿತ ವಾಹನಗಳಲ್ಲಿ ಸೂಕ್ತ ಪೊಲೀಸ್ ಅಭಿರಕ್ಷೆಯಲ್ಲಿ ಸಾಗಾಣಿಕೆಗೊಳಿಸಿ ಆಯಾ ತಾಲೂಕುಗಳಲ್ಲಿ ಸ್ಥಾಪಿಸಿರುವ ಇವಿಎಂ ಭದ್ರತಾ ಕೊಠಡಿಯಲ್ಲಿ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಪದಾಧಿಕಾರಿಗಳ ಸಮಕ್ಷಮ ಶೇಖರಿಸಿಡಲಾಗಿರುತ್ತದೆ ಎಂದರು.

ಜಿಲ್ಲೆಯ 1822 ಮೂಲ ಮತಗಟ್ಟೆಗಳಿಗೆ ಮತ್ತು ಹೆಚ್ಚುವರಿ 2 ಮತಗಟ್ಟೆಗಳಿಗೆ ಒಟ್ಟು 1824 ಮತಗಟ್ಟೆಗಳಿಗೆ 2347 ಪಿ.ಆರ್.ಓ, 2347 ಎ.ಪಿ.ಆರ್.ಓ, 4694 ಪಿ.ಓ ಒಟ್ಟು 9388 ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ. 85 ವರ್ಷ ಮೇಲ್ಪಟ್ಟ 23033 ಮತದಾರರನ್ನು ಹಾಗೂ 25020 ವಿಶೇಷ ಚೇತನರನ್ನು ಗುರುತಿಸಿ (ನಮೂನೆ-12ಡಿ) ವಿತರಿಸುವ ಪ್ರಕ್ರಿಯೆ ನಡೆಸಲಾಗುತ್ತಿದೆ. ಅಗತ್ಯ ಸೇವಾ ವಲಯದ ಇಲಾಖೆಗಳ 2518 ಸಿಬ್ಬಂದಿಗಳಿಗೆ 12 ಡಿ ನಮೂನೆ ವಿತರಿಸಲಾಗಿದೆ ಎಂದು ವಿವರಿಸಿದರು.

ಗೋಷ್ಠಿಯಲ್ಲಿ ಎಸ್ಪಿ ಎನ್.ಯತೀಶ್, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್. ನಾಗರಾಜು, ವಾರ್ತಾಧಿಕಾರಿ ನಿರ್ಮಲಾ ಉಪಸ್ಥಿತರಿದ್ದರು.

ಬೆಳೆಗಳಿಗೆ ನೀರು ಬಿಡಲು ಸಾಧ್ಯವಿಲ್ಲ

ಜಿಲ್ಲಾಧಿಕಾರಿ ಅಸಹಾಯಕತೆ



ಮಂಡ್ಯ: ಸದ್ಯದ ಪರಿಸ್ಥಿತಿಯಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಎದುರಾಗಿದ್ದು, ಬೆಳೆಗಳಿಗೆ ನೀರು ಒದಗಿಸುವ ಕ್ರಮ ಕೈಗೊಳ್ಳಲು ಕಷ್ಟವಾಗಲಿದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಅಸಹಾಯಕತೆ ವ್ಯಕ್ತಪಡಿಸಿದರು.

ಬುಧವಾರ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸುದ್ದಿ ಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಕುಡಿಯುವ ನೀರಿಗೆ ಸಮಸ್ಯೆಯಾಗಿದ್ದು, ಇದನ್ನು ನಾವು ಸಮರ್ಪಕವಾಗಿ ಎದುರಿಸುತ್ತಿದ್ದೇವೆ. ಜಿಲ್ಲೆಯ ಗ್ರಾಮವೊಂದರಲ್ಲಿ ಕುಡಿಯುವ ನೀರಿಗೆ ಭಾರಿ ಹಾಹಾಕಾರ ಉಂಟಾಗಿತ್ತು. ಅಲ್ಲಿಗೆ ಟ್ಯಾಂಕರ್ ಮೂಲಕ ನೀರಿನ ವ್ಯವಸ್ಥೆ ಮಾಡಿದ್ದು, ಜಿಲ್ಲೆಯ 37 ಗ್ರಾಮಗಳಿಗೆ ಖಾಸಗಿ ಕೊಳವೆ ಬಾವಿಗಳ ಮೂಲಕ ಕುಡಿಯುವ ನೀರೊದಗಿಸಲಾಗುತ್ತಿದೆ ಎಂದರು. ಈಗಾಗಲೇ ಜಿಲ್ಲೆಯ ಏಳು ತಾಲೂಕನ್ನು ಬರಪೀಡಿತ ತಾಲೂಕೆಂದು ಘೋಷಿಸಲಾಗಿದ್ದು, ಪ್ರತಿ 18 ದಿನಕ್ಕೊಮ್ಮೆ ಟಾಸ್ಕ್‌ಫೋರ್ಸ್ ಅಧಿಕಾರಿಗಳ ಸಭೆ ನಡೆಸಿ ಜಿಲ್ಲೆಯ ಯಾವ ಭಾಗದಲ್ಲೂ ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಕ್ರಮ ವಹಿಸಲಾಗುವುದು ಎಂದರು.

ಆದಾಯಕ್ಕಿಂತ ಹೆಚ್ಚು ಆಸ್ತಿ: ಪಿಡಬ್ಲ್ಯೂಡಿ ಇಂಜಿನಿಯರ್ ಅಮಾನತು

ಮಂಡ್ಯ: ಆದಾಯಕ್ಕಿಂತ ಹೆಚ್ಚಿನ ಆಸ್ತಿ ಹೊಂದಿರುವ ಆರೋಪ ಹೊತ್ತಿರುವ ಮಂಡ್ಯ ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಇಂಜಿನಿಯರ್ ಹೆಚ್.ಆರ್.ಹರ್ಷ ಅವರನ್ನು ಅಮಾನತುಗೊಳಿಸಿ ಸರ್ಕಾರ ಆದೇಶಿಸಿದೆ.

ಈ ಕುರಿತು ಮಾ.26ರಂದು ಲೋಕೋಪಯೋಗಿ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಮುರುಳೀಧರ ಎಸ್. ತಳ್ಳಿಕೇರಿ ನೀಡಿರುವ ಆದೇಶದಲ್ಲಿ ಲೋಕಾಯುಕ್ತ ಪೊಲೀಸರು ಕಳೆದ ಜ.30ರಂದು ದಾಖಲಿಸಿರುವ ಕ್ರಿಮಿನಲ್ ಮೊಕದ್ದಮೆಯ ಪ್ರಾಥಮಿಕ ವರದಿಯಲ್ಲಿ ಆದಾಯಕ್ಕಿಂತ ಹೆಚ್ಚಿನ ಆಸ್ತಿ ಹೊಂದಿರುವುದು ಸಾಬೀತಾಗಿದೆ ಎಂದಿದ್ದಾರೆ. ಅಧಿಕಾರಿ ಹರ್ಷ ಅವರು ಪರಿಶೀಲನಾ ಅವಧಿಯಲ್ಲಿ 1.40 ಕೋಟಿ ಆದಾಯ ಹೊಂದಿ 1,25,50,336 ಖರ್ಚು ಹೊಂದಿ 14,49,664 ಉಳಿತಾಯ ಹೊಂದಿರುತ್ತಾರೆ. ಆದರೆ ತನಿಖೆ ವೇಳೆ 3,32,87,997 ಆಸ್ತಿಯಲ್ಲಿ 3,18,38,333 ಅಂದರೆ ಆದಾಯಕ್ಕಿಂತ ಶೇ.227.416 ರಷ್ಟು ಹೆಚ್ಚುವರಿ ಅಕ್ರಮ ಆಸ್ತಿ ಹೊಂದಿದ್ದಾರೆ ಎಂದು ಲೋಕಾಯುಕ್ತ ಆರೋಪಿಸಿದೆ.

ಲೋಕಾಯುಕ್ತ ತನಿಖೆ ಹಿನ್ನಲೆಯಲ್ಲಿ ಅಧಿಕಾರಿ ಹೆಚ್.ಆರ್.ಹರ್ಷ ಅವರನ್ನು ವಿಚಾರಣೆ ಬಾಕಿ ಇರಿಸಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988ರ ಕಲಂ 13(1)(ಬಿ) ರಡಿ ಕ್ರಿಮಿನಲ್ ಮೊಕದ್ದಮೆ/ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು 1957ರ ನಿಯಮ 10(1) (ಎಎ)ರನ್ವಯ ತಕ್ಷಣವೇ ಜಾರಿಗೆ ಬರುವಂತೆ ಸೇವೆಯಿಂದ ಅಮಾನತುಗೊಳಿಸಿ ಪ್ರಭಾರ ಹುದ್ದೆಗೆ ಕಲಬುರಗಿ ಸಂಪಕಂ ಮತ್ತು ಕಟ್ಟಡಗಳು(ಈಶಾನ್ಯ) ಅವರಿಗೆ ವಹಿಸಲಾಗಿದೆ.



ಭಾರತೀನಗರ ಸಮೀಪದ ಕಾರ್ಕಹಳ್ಳಿ ಗ್ರಾಮದಲ್ಲಿ ಇತಿಹಾಸ ಪ್ರಸಿದ್ಧ ಶ್ರೀ ಬಸವೇಶ್ವರಸ್ವಾಮಿ ರಥೋತ್ಸವವು ವಿಜೃಂಭಣೆಯಿಂದ ನೆರವೇರಿತು.

ಕೆ.ಆರ್.ಪೇಟೆಯಲ್ಲಿ ಸ್ಟಾರ್ ಚಂದ್ರು ಪರ ಸಾಧುಕೋಕಿಲ ಮತಬೇಟೆ



ಕೆ.ಆರ್. ಪೇಟೆ: ಮಂಡ್ಯ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಪರ ಹಾಸ್ಯ ನಟ ಸಾಧುಕೋಕಿಲ ಅವರು ಪ್ರಚಾರ ನಡೆಸಿದರು.

ಕೆ.ಆರ್.ಪೇಟೆಯಲ್ಲಿ ಹಮ್ಮಿಕೊಂಡಿದ್ದ ಕಾಂಗ್ರೆಸ್ ಕಾರ್ಯಕರ್ತರ ಸಭೆಗೆ ಆಗಮಿಸಿದ ಸಾಧುಕೋಕಿಲ ಅವರು, ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು ಅವರನ್ನು ಗೆಲ್ಲಿಸುವಂತೆ ಮನವಿ ಮಾಡಿದರು. ಸ್ವಿಚ್ ಹಾಕಿದರೆ ಲೈಟ್ ಉರಿಯುತ್ತೆ, ತಿಂಗಳಾದ್ರೆ ಎರಡು ಸಾವಿರ ಅಕೌಂಟ್‌ಗೆ ಬೀಳುತ್ತೆ. ಬಸ್ ಫ್ರೀ ಬೇರೆ ಹೀಗಾಗಿ ಮಹಿಳೆಯರು ಕಾಂಗ್ರೆಸ್ ಕಡೆನೇ ಇದ್ದು ಅವರ ವೋಟ್ ಗ್ಯಾರಂಟಿ. ಎದುರಾಳಿ ಯಾರಾ ದರೇನು? ಎಲ್ಲಾ ಕಡೆ ಕಾಂಗ್ರೆಸ್ ಶಾಸಕರಿರುವಾಗ ಸಂಸದರು ಕೂಡ ಕಾಂಗ್ರೆಸ್‌ನವರೇ ಆಗಬೇಕಲ್ವ? ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರು ಜನಸೇವೆ ಮಾಡಲೆಂದು ಬಂದಿದ್ದಾರೆ. ಅವರನ್ನು ಗೆಲ್ಲಿಸಿ ಲೋಕಸಭೆಗೆ ಕಳುಹಿಸಿ, ಚಲುವರಾಯಸ್ವಾಮಿ ಕೈ ಬಲಪಡಿಸಿ ಎಂದರು.

ಕೃಷಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಚಲುವರಾಯಸ್ವಾಮಿ ಮಾತನಾಡಿ, ಇದು ಸ್ವಾಭಿಮಾನದ ಚುನಾವಣೆ ಆಗಬೇಕು. ಅಭಿವೃದ್ಧಿಗೆ ಮತ ಹಾಕಬೇಕು. ಕಾಂಗ್ರೆಸ್ ಕೊಟ್ಟ ಕಾರ್ಯಕ್ರಮಗಳಿಗೆ ಕೆಆರ್ ಪೇಟೆಯಲ್ಲಿ ನಮಗೆ ಅನ್ಯಾಯ ಆಗಬಾರದು. ಮನಸ್ತಾಪ, ಭಿನ್ನಾಭಿಪ್ರಾಯ ಬಿಟ್ಟು ಪಕ್ಷದ ಅಭ್ಯರ್ಥಿ ಗೆಲುವಿಗೆ ಶ್ರಮಿಸಿ ಎಂದು ಕರೆಕೊಟ್ಟರು.

ಕೆ.ಆರ್.ಪೇಟೆಯಿಂದ ಲೋಕಸಭೆಯಲ್ಲಿ 10 ಸಾವಿರ ಲೀಡ್ ಕೊಡಿ. 2028ಕ್ಕೆ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಶಾಸಕರನ್ನಾಗಿ ಮಾಡುವ ಹೊಣೆ ನನ್ನದು. ಒಕ್ಕಲಿಗರಿಗೆ ಅನುಕೂಲ ಆಗಿದ್ದರೆ ಅದು ಕಾಂಗ್ರೆಸ್‌ನಿಂದ ಮಾತ್ರ, ಹತ್ತು ತಿಂಗಳಲ್ಲಿ ಜಿಲ್ಲೆಯ ಅಭಿವೃದ್ಧಿಗೆ 2 ಸಾವಿರ ಕೋಟಿ ಅನುದಾನ ವಿವಿಧ ಇಲಾಖೆಗಳಿಂದ ಬಂದಿದೆ ಎಂದರು.

ಕುಮಾರಸ್ವಾಮಿಯವರು ಚನ್ನಪಟ್ಟಣ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿಲ್ಲ. ಗೆಲ್ಲಿಸಿದರೆ ನೋಡೋಣ ಎಂದು ಇಲ್ಲಿಗೆ ಬರ್ತಿದ್ದಾರೆ. ಪಕ್ಷ ಉಳಿಸೋಕೆ ಇಲ್ಲಿಗೆ ಬರ್ತಿದ್ದಾರೆ ಹೊರತು ಜಿಲ್ಲೆಯ ಅಭಿವೃದ್ಧಿಗಾಗಿ ಅಲ್ಲ. ಜಿಲ್ಲೆಯಲ್ಲಿ ಉತ್ತಮ ಕಾರ್ಯಕ್ರಮ ನಡೆಯುತ್ತಿದೆ. ಈ ಸಮಯದಲ್ಲಿ ಅಡ್ಡಿ ಮಾಡೋದು ಸರಿಯಲ್ಲ. ಇನ್ನೂ ನಾಲ್ಕು ವರ್ಷ ಕೆಲಸ ಮಾಡ್ತಿವಿ, ಮಾಡ್ಲಿಲ್ಲ ಅಂದರೆ ಮನೆಗೆ ಕಳುಹಿಸಿ ಎಂದರು.

ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಮಾತನಾಡಿ, ಜೆಡಿಎಸ್‌ನ ಅಪ್ಪ ಮಕ್ಕಳನ್ನು ನಂಬಿದವರು ಯಾರೂ ಉದ್ದಾರ ಆಗಿಲ್ಲ. ಅವರಾಯ್ತು ಅವರ ಮನೆ ಆಯ್ತು. ಒಕ್ಕಲಿಗ ನಾಯಕರನ್ನು ಮುಗಿಸಿದರು. ಈ ಚುನಾವಣೆ ಮೂಲಕ ಅಪ್ಪ ಮಕ್ಕಳ ಅಂತ್ಯ ಆಗಬೇಕು. ಅಪ್ಪ ಮಕ್ಕಳ ಬಿಟ್ಟು ಬೇರೆ ಒಕ್ಕಲಿಗರು ನಾಯಕರಾಗಬಾರದ? ಚುನಾವಣೆ ಮುಗಿದ ಮೇಲೆ ಜೆಡಿಎಸ್ ಇರಲ್ಲ ಎಂದರು.

ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು ಮಾತನಾಡಿ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಚಲುವರಾಯಸ್ವಾಮಿ ಸೇರಿದಂತೆ ಎಲ್ಲಾ ನಾಯಕರು ಒಮ್ಮತದಿಂದ ನನ್ನನ್ನು ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿದ್ದಾರೆ. ಕ್ಷೇತ್ರದ ಜನತೆ ಕೂಡ ಒಮ್ಮತದಿಂದ ನನಗೆ ಆಶೀರ್ವಾದ ಮಾಡಬೇಕು ಎಂದು ಮತಯಾಚಿಸಿದರು.

ಮಾಜಿ ವಿಧಾನಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ ಮಾತನಾಡಿ, ದೇವೇಗೌಡರನ್ನು ಪ್ರಧಾನಮಂತ್ರಿ, ಮುಖ್ಯಮಂತ್ರಿಯನ್ನಾಗಿ ಮಾಡಿದ, ಕುಮಾರಸ್ವಾಮಿ ಅವರನ್ನು ಎರಡು ಬಾರಿ ಮುಖ್ಯಮಂತ್ರಿಯನ್ನಾಗಿ ಮಾಡಿದ್ದ ಜಿಲ್ಲೆ ತೊರೆದು ಬರುತ್ತಿರುವವರಿಂದ ಮಂಡ್ಯ ಜಿಲ್ಲೆಗೆ ಕೊಡುಗೆ ಏನು ಅಂತ ಕೆ.ಆರ್. ಪೇಟೆ ಜನತೆ ಕೇಳಬೇಕು ಎಂದರು.

ಗ್ರಾಪಂ ಲೆಕ್ಕ ಸಹಾಯಕನ ಮನೆ, ಕಚೇರಿ ಮೇಲೆ ಲೋಕ ದಾಳಿ

ಮಂಡ್ಯ: ಅಕ್ರಮ ಆಸ್ತಿಗಳಿಕೆ ಆರೋಪದ ಹಿನ್ನೆಲೆಯಲ್ಲಿ ಮಳವಳ್ಳಿ ತಾಲೂಕಿನ ಅಗಸನಪುರ ಗ್ರಾಮ ಪಂಚಾಯಿತಿಯ ಲೆಕ್ಕಸಹಾಯಕ ಕೃಷ್ಣೇಗೌಡ ಮನೆ, ಕಚೇರಿ ಮೇಲೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದಾರೆ.

ಏಕಕಾಲಕ್ಕೆ ನಾಲ್ಕು ಕಡೆ ದಾಳಿ ನಡೆಸಿರುವ ಅಧಿಕಾರಿಗಳು, ಮನೆ ಹಾಗೂ ಕಚೇರಿಯಲ್ಲಿ ಕಡತಗಳ ಪರಿಶೀಲನೆ ನಡೆಸಿದ್ದಾರೆ. ಮಂಡ್ಯದ ಚೀರನಹಳ್ಳಿಯಲ್ಲಿ ಕೃಷ್ಣೇಗೌಡ ನಿವಾಸವಿದ್ದು, ಅಲ್ಲೂ ಸಹ ಪರಿಶೀಲನೆ ನಡೆದಿದೆ. ಇದಲ್ಲದೇ ಅಗಸನಪುರ ಗ್ರಾಮ ಪಂಚಾಯತಿ ಕಚೇರಿ, ಮಳವಳ್ಳಿ ತಾಲೂಕಿನ ತುರುಗನಹಳ್ಳಿಯ ಅತ್ತೆ ಮನೆ ಹಾಗೂ ಶ್ರೀರಂಗಪಟ್ಟಣ ತಾಲೂಕಿನ ಕೊಡಿಯಾಲ ಗ್ರಾಮದ ಮತ್ತೊಂದು ನಿವಾಸಗಳ ಮೇಲೆ ದಾಳಿ ನಡೆಸಲಾಗಿದೆ.

ದಾಳಿ ವೇಳೆ ಚಿನ್ನ, ಬೆಳ್ಳಿ ಹಾಗೂ ನಗದು ಪತ್ತೆಯಾಗಿದ್ದು, 2 ಲಕ್ಷಕ್ಕೂ ಹೆಚ್ಚು ನಗದು, ಸುಮಾರು 500 ಗ್ರಾಂ ನಷ್ಟು ಚಿನ್ನ, 2 ಕೆಜಿಯಷ್ಟು ಬೆಳ್ಳಿ ಪತ್ತೆಯಾಗಿದೆ. ಲೋಕಾಯುಕ್ತ ಎಸ್‌ಪಿ ಸುರೇಶ್ ಬಾಬು ನೇತೃತ್ವದಲ್ಲಿ ದಾಳಿ ನಡೆದಿದೆ.

ಒಂದನೇ ಪುಟದಿಂದ

ನಾಮಪತ್ರ ಸಲ್ಲಿಕೆ ಆರಂಭ

ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹೋದರ ಡಿ.ಕೆ.ಸುರೇಶ್ ಕಾಂಗ್ರೆಸ್‌ನಿಂದಲೂ, ಎನ್‌ಡಿಎ ಅಭ್ಯರ್ಥಿಯಾಗಿ ಹೃದಯ ತಜ್ಞ ಡಾ.ಮಂಜು ನಾಥ್ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವುದರಿಂದ ಇವು ಪ್ರತಿಷ್ಠೆಯ ಕ್ಷೇತ್ರಗಳಾಗಿವೆ.

ಈ 14 ಕ್ಷೇತ್ರಗಳ ಪೈಕಿ ಕಳೆದ ಚುನಾವಣೆಯಲ್ಲಿ ಬಿಜೆಪಿ 11 ಕ್ಷೇತ್ರಗಳಲ್ಲಿ ಜಯ ಸಾಧಿಸಿದ್ದರೆ, ಎರಡು ಕ್ಷೇತ್ರಗಳಲ್ಲಿ ಜೆಡಿಎಸ್ ಮತ್ತು ಕಾಂಗ್ರೆಸ್ ತಲಾ ಒಂದು, ಪಕ್ಷೇತರರು ಒಂದು ಕ್ಷೇತ್ರದಲ್ಲಿ ಜಯಗಳಿಸಿದ್ದರು. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್-ಜೆಡಿಎಸ್ ಮೈತ್ರಿ ಮಾಡಿಕೊಂಡು ಕಣಕ್ಕಿಳಿದಿದ್ದವು. ಆದರೆ ಪ್ರಸಕ್ತ ಚುನಾವಣೆಯಲ್ಲಿ ಜೆಡಿಎಸ್, ಎನ್‌ಡಿಎ ಮೈತ್ರಿಕೂಟದ ಪಾಲುದಾರರಾಗಿದ್ದು, ಈ ಬಾರಿ ಬಿಜೆಪಿ ಜೊತೆ ಚುನಾವಣಾ ಹೊಂದಾಣಿಕೆ ಮಾಡಿಕೊಂಡು ರಾಜ್ಯದಲ್ಲಿನ ಆಡಳಿತಾರೂಢ ಕಾಂಗ್ರೆಸ್ ಪಕ್ಷವನ್ನು ಎದುರಿಸುತ್ತಿವೆ. ಮೊದಲ ಹಂತದ ಎಲ್ಲಾ 14 ಕ್ಷೇತ್ರಗಳಲ್ಲೂ ಕಾಂಗ್ರೆಸ್ ಸ್ಪರ್ಧಿಸಲಿದ್ದು, ಬಿಜೆಪಿ 11ರಲ್ಲೂ, ಜೆಡಿಎಸ್ ಮೂರು ಕ್ಷೇತ್ರದಲ್ಲಿ ಕಣಕ್ಕಿಳಿದು ಹೋರಾಟ ನಡೆಸುತ್ತಿವೆ. ಕಾಂಗ್ರೆಸ್ ಇನ್ನು ನಾಲ್ಕು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಹೆಸರಿಸಿಲ್ಲ. ಆದರೆ ಬಿಜೆಪಿ, ಕೊನೆಯದಾಗಿ ಚಿತ್ರದುರ್ಗಕ್ಕೆ ಗೋವಿಂದ ಕಾರಜೋಳ ಅವರನ್ನು ಅಭ್ಯರ್ಥಿಯನ್ನಾಗಿ ಘೋಷಿಸುವ ಮೂಲಕ ಎಲ್ಲಾ ಕ್ಷೇತ್ರಗಳಿಗೂ ಉಮೇದುವಾರರನ್ನು ಪ್ರಕಟಿಸಿದೆ. ಜೆಡಿಎಸ್ ತನ್ನ ಪಾಲಿನ ಮಂಡ್ಯ, ಹಾಸನ ಹಾಗು ಕೋಲಾರ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ನಿನ್ನೆಯಷ್ಟೆ ಅಂತಿಮ ಗೊಳಿಸಿದೆ. ಈ ಚುನಾವಣೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಎನ್‌ಡಿಎ ಮಿತ್ರ ಪಕ್ಷಗಳು ಬಹಳ ಪ್ರತಿಷ್ಠೆಯಾಗಿ ತೆಗೆದುಕೊಂಡಿವೆ. ಕರ್ನಾಟಕದಲ್ಲಿ ಹೆಚ್ಚು ಸ್ಥಾನ ಗಳಿಸುವ ಮೂಲಕ ದೆಹಲಿಯಲ್ಲಿ ಕಾಂಗ್ರೆಸ್‌ಗೆ ಬಲ ತರಬೇಕೆಂದು ಸಿದ್ದರಾಮಯ್ಯ ಚುನಾವಣೆಯನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದಾರೆ.

ಅಭ್ಯರ್ಥಿ ಸುನೀಲ್ ಬೋಸ್

ಅವರಿಗೆ ಟಿಕೆಟ್ ದೊರೆತಿರುವುದನ್ನು ಖಚಿತಪಡಿಸಿದ್ದಾರೆ. ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅವರು, ಚಾಮರಾಜನಗರ ಟಿಕೆಟ್ ಸುನೀಲ್ ಬೋಸ್ ಅವರಿಗೆ ನೀಡುವುದಾಗಿ ತಮಗೆ ತಮ್ಮ ರಾಜಕೀಯ ಗುರುಗಳೂ ಆದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಿಳಿಸಿರುವುದಾಗಿ ಹೇಳಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಲಿರುವುದಾಗಿ ತಿಳಿಸಿದ ಅವರು, ಸಿದ್ದರಾಮಯ್ಯನವರ ಸಮ್ಮುಖದಲ್ಲೇ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿರುವ ತಮಗೆ ಸಿದ್ದರಾಮಯ್ಯ ಕೈಗೊಂಡಿರುವ ಈ ನಿರ್ಧಾರದ ಬಗ್ಗೆ ಯಾವುದೇ ಅಸಮಾಧಾನವಿಲ್ಲ. ಕಾಂಗ್ರೆಸ್ ಅಭ್ಯರ್ಥಿ ಸುನೀಲ್‌ಬೋಸ್ ಅವರನ್ನು ಗೆಲ್ಲಿಸುವುದು ತಮ್ಮ ಗುರಿಯಾಗಿದೆ ಎಂದು ತಿಳಿಸಿದರು. ಅದೇ ವೇಳೆ ಲೋಕಸಭಾ ಚುನಾವಣೆಯಲ್ಲಿ ನಂಜನಗೂಡು ಕ್ಷೇತ್ರದಲ್ಲಿ ಸುನೀಲ್ ಬೋಸ್ ಅವರಿಗೆ ಹೆಚ್ಚಿನ ಲೀಡ್‌ಕೊಡಿಸಲು ಶ್ರಮಿಸುವುದಾಗಿ ಶಾಸಕ ದರ್ಶನ್ ಧ್ರುವನಾರಾಯಣ್ ಹೇಳಿದರೆ, ಸುನೀಲ್ ಬೋಸ್ ಸಂಸದರಾಗುವುದು ನಿಶ್ಚಿತ ಎಂದು ಮತ್ತೋರ್ವ ಶಾಸಕ ಗಣೇಶ್ ಪ್ರಸಾದ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಎನ್‌ಡಿಎ ಅಭ್ಯರ್ಥಿಗಳ ಗೆಲುವಿನ ಶಪಥ

ರಾಜ್ಯ ಮತ್ತು ದೇಶದ ಅಭಿವೃದ್ಧಿಯ ಕಾಯಕಲ್ಪಕ್ಕೆ ಕಂಕಣತೊಟ್ಟಿರುವ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಗಳನ್ನು ಗೆಲ್ಲಿಸಿ ಲೋಕ ಸಭೆಗೆ ಕಳುಹಿಸಿಕೊಡಿ ಎಂದು ಕರೆ ನೀಡಿದರು. ಜೆಡಿಎಸ್ ಪಕ್ಷ ಮುಗಿಸಲು ಸಂಚು ರೂಪಿಸಿದ್ದ ಕಾಂಗ್ರೆಸ್‌ಗೆ ಪ್ರತ್ಯುತ್ತರ ನೀಡಲು ಪ್ರಧಾನಿ ನರೇಂದ್ರ ಮೋದಿಯವರು ಹಾಗೂ ಮಣ್ಣಿನ ಮಗ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಒಡಂಬಡಿಕೆ ಹಾಗೂ ಅವರು ನೀಡಿದ ಸಲಹೆಯಂತೆ ರಾಜ್ಯದ ಸಮಸ್ಯೆಗಳ ನಿವಾರಣೆಗೆ, ನದಿ ನೀರು ಹಂಚಿಕೆಯ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಪಾರ್ಲಿಮೆಂಟ್ ಪ್ರವೇಶ ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ಬಿಜೆಪಿ-ಜೆಡಿಎಸ್‌ನ 28 ಲೋಕಸಭಾ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಎಂದು ಮನವಿ ಮಾಡಿದರು. ನೀರಿನ ವಿಚಾರ ಬಂದರೆ ಮೈಸೂರು ರಾಜಮನೆತನವನ್ನು ಸ್ಮರಿಸುತ್ತೇವೆ. ಇವತ್ತು ರಾಜ್ಯದಲ್ಲಿ ಬರಗಾಲ ಆವರಿಸಿದೆ. ನದಿ ನೀರಿನ ಹಂಚಿಕೆ ಸಮಸ್ಯೆ ಶಾಶ್ವತವಾಗಿ ಬಗೆಹರಿಸಬೇಕಾಗಿದೆ. 1972ರವರೆಗೆ ರಾಜ್ಯದ 28ಕ್ಕೆ 28 ಲೋಕಸಭಾ ಸದಸ್ಯರನ್ನು ಆಯ್ಕೆ ಮಾಡುತ್ತಿದ್ದ ರಾಜ್ಯಕ್ಕೆ ಕಾಂಗ್ರೆಸ್ ಸರ್ಕಾರ ಯಾವ ಕೊಡುಗೆಯನ್ನೂ ನೀಡಿಲ್ಲ. ಹೇಮಾವತಿ, ಹಾರಂಗಿ ಜಲಾಶಯ ಅಭಿವೃದ್ಧಿಯಾಗಿದ್ದು, ಮಣ್ಣಿನ ಮಗ ದೇವೇಗೌಡರಿಂದ. ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿ, ಅನುದಾನ ತರುವ ಯೋಗ್ಯತೆ ಇಲ್ಲದ ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ತಿರಸ್ಕರಿಸಿ ಎಂದು ಕರೆ ನೀಡಿದರು.

ಒಗ್ಗಟ್ಟಿನ ಮಂತ್ರ: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, ದೇಶದ ಭವಿಷ್ಯವನ್ನು ರೂಪಿಸುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ-ಜೆಡಿಎಸ್ ಒಗ್ಗಟ್ಟಿನ ಮಂತ್ರ ಪಾಲಿಸಬೇಕಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು 9 ತಿಂಗಳಾದರೂ ಯಾವ ಕ್ಷೇತ್ರದ ಅಭಿವೃದ್ಧಿಗೂ ಬಿಡುಗಾಸು ಕೊಟ್ಟಿಲ್ಲ. ಬರಗಾಲದಿಂದ 800ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು, ಅವರ ಕುಟುಂಬಕ್ಕೆ ಪರಿಹಾರ ನೀಡದ ದೇಶ ವಿರೋಧಿ ಕಾಂಗ್ರೆಸ್ ಪಕ್ಷಕ್ಕೆ ಲೋಕಸಭಾ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕಿದೆ ಎಂದರು.

ಕಳೆದ 10 ವರ್ಷ ಸಂಸದ ಪ್ರತಾಪ್ ಸಿಂಹ ಕ್ರಿಯಾಶೀಲರಾಗಿ ಕೆಲಸ ಮಾಡಿದ್ದಾರೆ. ಅವರಿಗೆ ರಾಜಕೀಯ ಕ್ಷೇತ್ರದಲ್ಲಿ ಭವಿಷ್ಯವಿದೆ ಎಂಬುದನ್ನು ಮನಗಂಡಿರುವ ಪ್ರಧಾನಿ ಮೋದಿಯವರು, ರಾಜವಂಶಸ್ಥರಾದ ಯದುವೀರ್ ಅವರಿಗೆ ಈ ಬಾರಿ ಅವಕಾಶ ಮಾಡಿಕೊಟ್ಟಿದ್ದಾರೆ. ಸರ್ವಸ್ವವನ್ನೂ ತ್ಯಾಗಮಾಡಿ ಮೀಸಲಾತಿ ಸೇರಿದಂತೆ ಅನೇಕ ಜನಪರ ಕಾರ್ಯಗಳನ್ನು ಮಾಡಿದ ಮೈಸೂರು ಒಡೆಯರ ಕುಟುಂಬಸ್ಥರಾದ ಯದುವೀರ್ ಅವರು, ಸಾಮಾನ್ಯರ ಜೊತೆಯಲ್ಲಿ ಸಾಮಾನ್ಯನಾಗಿ ಜನರ ಸೇವೆ ಮಾಡುತ್ತೇನೆ ಎಂದು ಬಂದಿದ್ದಾರೆ. ಅವರಿಗೆ ಆಶೀರ್ವಾದ ಮಾಡಿ. ಹಾಗೆಯೇ ಚಾ.ನಗರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಬಾಲರಾಜ್ ಅವರನ್ನು ಗೆಲ್ಲಿಸುವ ಮೂಲಕ ಪ್ರಧಾನಿಗಳ ಕೈ ಬಲ ಪಡಿಸುವಂತೆ ಕೋರಿದರು.

ನನ್ನ ಕ್ಷೇತ್ರದಲ್ಲಿ ನೀರಿಲ್ಲ: ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಅಭಿವೃದ್ಧಿ ಮಾಡಿದ್ದಾರೋ ಇಲ್ಲವೋ. ಆದರೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಹತ್ತು ತಿಂಗಳಾಯಿತು. ಅಭಿವೃದ್ಧಿ ಸಂಬಂಧ ಒಂದು ಸಭೆ ನಡೆದಿಲ್ಲ. ನಾವು ಮನೆ ಸೇರಿಕೊಂಡೆವು ಎಂದು ಕಾಂಗ್ರೆಸ್ ನವರು ಅಧಿಕಾರ ನಡೆಸಿದ್ದೇ ನಡೆಸಿದ್ದು. ನನ್ನ ಕ್ಷೇತ್ರದಲ್ಲಿ ನೀರಿಲ್ಲ ಎಂದು ಕಿಡಿಕಾರಿದರು.

ಒಗ್ಗಟ್ಟಿನ ತೀರ್ಮಾನ ಮಾಡಿದ್ದೇವೆ: ಹುಣಸೂರು ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡ ಮಾತನಾಡಿ, ಎರಡೂ ಲೋಕಸಭಾ ಕ್ಷೇತ್ರದ ಜೆಡಿಎಸ್‌ನ ಎಲ್ಲಾ ಮುಖಂಡರು, ಕಾರ್ಯಕರ್ತರು ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸಲೇಬೇಕೆಂಬ ಒಗ್ಗಟ್ಟಿನ ತೀರ್ಮಾನ ಮಾಡಿದ್ದೇವೆ. ಮೈತ್ರಿ ಅಭ್ಯರ್ಥಿಗಳನ್ನು ಪ್ರಚಂಡ ಬಹುಮತದಿಂದ ಗೆಲ್ಲಿಸಬೇಕು ಎಂದು ಸಂಕಲ್ಪ ಮಾಡಿದ್ದೇವೆ. ತಾಯಿ ಚಾಮುಂಡೇಶ್ವರಿ ಆಶೀರ್ವಾದದೊಂದಿಗೆ ಮೈಸೂರು-ಕೊಡಗು ಹಾಗೂ ಚಾ.ನಗರ ಕ್ಷೇತ್ರದ ಗೆಲುವಿನೊಂದಿಗೆ ರಾಜ್ಯದ 28 ಲೋಕಸಭಾ ಕ್ಷೇತ್ರಗಳನ್ನು ಗೆಲ್ಲುವ ಗುರಿ ಹೊಂದಿದ್ದೇವೆ. ಮೈಸೂರಿನಿಂದಲೇ ವಿಜಯ ಯಾತ್ರೆ ಪ್ರಾರಂಭವಾಗಲಿದೆ. ಎರಡು ಪಕ್ಷದ ಮುಖಂಡರು, ಕಾರ್ಯಕರ್ತರು ಉತ್ಸುಕರಾಗಿದ್ದು, ನಾವು ಸಂಪೂರ್ಣ ಬೆಂಬಲ ನೀಡಬೇಕು. ಗೆಲುವಿಗಾಗಿ ಒಗ್ಗಟ್ಟಾಗಿ ಕೆಲಸ ಮಾಡಬೇಕು. ಮಾಜಿ ಉಪಮುಖ್ಯಮಂತ್ರಿ ಅಶ್ವಥ್ ನಾರಾಯಣ್, ಸಂಸದ ಪ್ರತಾಪ್‌ಸಿಂಹ, ಮಾಜಿ ಸಚಿವರಾದ ಎಸ್.ಎ.ರಾಮದಾಸ್, ಸಾ.ರಾ. ಮಹೇಶ್, ಎನ್.ಮಹೇಶ್, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕರಾದ ಕೆ.ಮಹದೇವ್, ಅಶ್ವಿನ್ ಕುಮಾರ್, ಎಂಎಲ್‌ಸಿ ಸಿ.ರಮೇಶ್, ಬಿಜೆಪಿ ರಾಜ್ಯಾಧ್ಯಕ್ಷ ಎಂ.ರಾಜೇಂದ್ರ, ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಜೆಡಿಎಸ್ ಜಿಲ್ಲಾಧ್ಯಕ್ಷ ನರಸಿಂಹಮೂರ್ತಿ, ನಗರಾಧ್ಯಕ್ಷ ಚೆಲುವೇಗೌಡ ಮತ್ತಿತರರಿದ್ದರು.

ಗ್ಯಾರಂಟಿ ಹೆಸರಲ್ಲಿ ರಾಜ್ಯದ ಜನರನ್ನು ಸಿದ್ದರಾಮಯ್ಯ ಸಾಲಗಾರರನ್ನಾಗಿ ಮಾಡಿರೋದು ಗ್ಯಾರಂಟಿ!

- ಮಾಜಿ ಸಿಎಂ ಕುಮಾರಸ್ವಾಮಿ ವಾಗ್ದಾಳಿ
- ನೀವು ಎರಡು ಬಾರಿ ಮುಖ್ಯಮಂತ್ರಿ ಆಗುವಲ್ಲಿ ಜೆಡಿಎಸ್ ಕಾರ್ಯಕರ್ತರ ಶ್ರಮವಿದೆ



ಮೈಸೂರು, ಮಾ.27(ಎಂಕೆ)- 'ನುಡಿದಂತೆ ನಡೆದಿದ್ದೇವೆ' ಎಂಬ ರಾಜ್ಯ ಸರ್ಕಾರದ ಭಜನೆ ಜಾಹಿರಾತುಗಳಿಗಷ್ಟೇ ಸೀಮಿತವಾಗಿದ್ದು, ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ರಾಜ್ಯದ ಪ್ರತಿಯೊಬ್ಬರ ಮೇಲೂ ಸಾಲದ ಹೊರೆಯನ್ನು ಹೊರಿಸಲಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಮೈಸೂರು ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಮೈದಾನದಲ್ಲಿರುವ ಕಾಳಿಂಗರಾವ್ ಸಭಾ ಮಂಟಪದಲ್ಲಿ ನಡೆದ ಬಿಜೆಪಿ-ಜೆಡಿಎಸ್ ಸಮನ್ವಯ ಸಭೆಯಲ್ಲಿ ಮಾತನಾಡಿದ ಅವರು, ತಾಯಂದಿರಿಗೆ 2000 ರೂ, ಕೊಡುವ ನೆಪದಲ್ಲಿ ಅವರ ಜೇಬಿಗೆ ಕೈಹಾಕಿ ತೆರಿಗೆ ರೂಪದಲ್ಲಿ ತಿಂಗಳಿಗೆ ಐದಾರು ಸಾವಿರ ರೂ. ದೋಚುತ್ತಿದ್ದಾರೆ. ದಿನ ಬೆಳಗಾದರೆ ನುಡಿದಂತೆ ನಡೆದಿದ್ದೇವೆ ಎಂಬ ಅವರ ಭಜನೆ ಮಾಧ್ಯಮಗಳು, ಪತ್ರಿಕೆಗಳಲ್ಲಿ ಜಾಹಿರಾತಿಗಷ್ಟೇ ಸೀಮಿತವಾಗಿದೆ ಎಂದು ಕಿಡಿಕಾರಿದರು.

ಅಧಿಕಾರ ಯಾರಿಗೂ ಶಾಶ್ವತವಲ್ಲ. ನೀವು ಈಗಾಗಲೇ(ಸಿದ್ದರಾಮಯ್ಯ) 2ನೇ ಬಾರಿಗೆ ಮುಖ್ಯಮಂತ್ರಿಯಾಗಿದ್ದೀರಿ. ಅಧಿಕಾರ ಕೊಟ್ಟಿರುವುದು ನಾಡಿನ ಜನತೆ. ಹಾಗಾಗಿ ನಿಮ್ಮ ದುರಹಂಕಾರದ ಮಾತುಗಳನ್ನು ಬದಿಗಿಟ್ಟು, ನಾಡಿನ ಜನತೆಗೆ ಏನಾದರೂ ಕೊಡುಗೆ ಕೊಟ್ಟಿದ್ದೇನೆ ಎಂಬುದನ್ನು ಉಳಿಸಿ ಹೋಗುವುದಕ್ಕಾದರೂ ಪ್ರಾಮಾಣಿಕವಾಗಿ ಕೆಲಸ ಮಾಡಿ ಎಂದು ಸಲಹೆ ನೀಡಿದರು.

ಕೇಂದ್ರ ಸರ್ಕಾರ ರಾಜ್ಯಕ್ಕೆ ಅನ್ಯಾಯ ಮಾಡಿದೆ, ಅನುದಾನ ನೀಡಿಲ್ಲ ಎನ್ನುತ್ತೀರಿ. ರಾಜ್ಯಗಳಿಗೆ ಅನುದಾನ ಹಂಚಿಕೆ ನಿರ್ಧಾರವಾಗಿದ್ದು ಈಗಲ್ಲ. 15 ಬಾರೀ ರಾಜ್ಯದ ಬಜೆಟ್ ಮಂಡಿಸಿರುವ ತಮಗೆ 1952ರಲ್ಲಿ ರಚನೆಯಾದ ಹಣಕಾಸು ಆಯೋಗದ ಬಗ್ಗೆ ತಿಳಿದಿಲ್ಲವೇ... ರಾಜ್ಯಗಳಿಗೆ ವಿವಿಧ ಹಂತದಲ್ಲಿ, ಸನ್ನಿವೇಶದಲ್ಲಿ ಅನುದಾನ ನೀಡುವ ಕೆಲಸವನ್ನು ಕೇಂದ್ರದ ಹಣಕಾಸು ಆಯೋಗ ಮಾಡಲಿದೆ ಎಂಬ ಅರಿವಿಲ್ಲವೇ ಎಂದು ಕುಟುಕಿದರು. 2013ರಲ್ಲಿ ಕೃಷ್ಣ ನದಿಯೆಡೆ ಕಾಂಗ್ರೆಸ್ ನಡೆ ಎಂದು ಪಾದಯಾತ್ರೆ ಮಾಡಿದ್ದೀರಿ, ಆದರೆ ಉತ್ತರ ಕರ್ನಾಟಕ ಭಾಗದ ಎಷ್ಟು ಹಳ್ಳಿಗಳಿಗೆ ನೀರು ಕೊಡಿಸಲು ನಿಮ್ಮಿಂದ ಸಾಧ್ಯವಾಗಿದೆ. 'ನಮ್ಮ ನೀರು ನಮ್ಮ ಹಕ್ಕು' ಎಂದು ಮೇಕೆದಾಟು ಯೋಜನೆ ಸಂಬಂಧವೂ ಪಾದಯಾತ್ರೆ ಮಾಡಿದ್ದೀರಿ. ಆದರೀಗ ಮೇಕೆದಾಟು ಯೋಜನೆಯ ಪರಿಸ್ಥಿತಿ ಏನಾಗಿದೆ. ತಮಿಳುನಾಡಿನ ಸರ್ಕಾರ ತನ್ನ ಪ್ರಣಾಳಿಕೆಯಲ್ಲಿ ಮೇಕೆದಾಟು ಯೋಜನೆ ಕೈಗೊಳ್ಳಲು ಯಾವುದೇ ಕಾರಣಕ್ಕೂ ಬಿಡುವುದಿಲ್ಲ ಎಂದಿದ್ದಾರೆ. ಈಗೇನು ಮಾಡುತ್ತೀರಿ ಎಂದು ಪ್ರಶ್ನಿಸಿದರಲ್ಲದೆ ಮೋದಿ ಬಗ್ಗೆ ಪ್ರತಾಪಿಸುವ ನಿಮ್ಮಿಂದ 'ಜನ್‌ಧನ್' ಎಂಬ ಯೋಜನೆಯೊಂದನ್ನು ತರಲು ಸಾಧ್ಯವಾಗಿಲ್ಲ. ಕೇಂದ್ರ ಸರ್ಕಾರದ 'ಜನ್‌ಧನ್' ಯೋಜನೆಯಿಂದ 48 ಕೋಟಿ ಕುಟುಂಬಗಳಿಗೆ ಬ್ಯಾಂಕ್ ಖಾತೆ ತೆರೆದು, ವಹಿವಾಟು ನಡೆಸುತ್ತಿರುವ ಅಂಕಿ-ಅಂಶಗಳಿವೆ. 'ಗರಿಬೀ ಹಟಾವೋ' ಎಂದೇಳಿ ಅದರಂತೆ ನಡೆದುಕೊಂಡಿದ್ದಿರಾ.. ದೇಶದಲ್ಲಿ ಬಡತನ ಮುಕ್ತವಾಗಿದೆಯೇ ಎಂದು ವಾಗ್ದಾಳಿ ನಡೆಸಿದರು.

ತೆರಿಗೆ ಹಣ ದುರ್ಬಳಕೆ: ಗ್ಯಾರಂಟಿ ಯೋಜನೆಗಳ ಮೂಲಕ ರಾಜ್ಯದ ಜನತೆಯ ತೆರಿಗೆ ಹಣವನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ರಾಜ್ಯದ ಖಜಾನೆ ಹಣ ಬಳಸಿಯೇ ಪ್ರಚಾರ ನೀಡುತ್ತಿದ್ದಾರೆ. ದುಡಿದ ಹಣ ಮಧ್ಯದಂಗಡಿಗಳ ಪಾಲಾಗುತ್ತಿದೆ. ಕನಿಷ್ಠ 2 ಗಂಟೆ ಕರೆಂಟ್ ಕೊಡಲು ಸಾಧ್ಯವಾಗಿಲ್ಲ. ಬರಗಾಲದಿಂದ ಮೇವಿನ ಸಮಸ್ಯೆ ಹೆಚ್ಚಾಗಿದೆ. ಜಾತಿ ವ್ಯವಸ್ಥೆ ಹೋಗಬೇಕು ಎಂದೇಳಿ ಜಾತಿ ಕಾರ್ಯಕ್ರಮಗಳನ್ನು ಮುಂದುವರೆಸಿದ್ದೀರಿ ಎಂದು ಹರಿಹಾಯ್ದ ರಲ್ಲದೆ ಜಾತ್ಯಾತೀಯ ಜನತಾದಳದ ಕಾರ್ಯಕರ್ತರ ಶ್ರಮದಿಂದಲೇ ತಾವು ಎರಡು ಬಾರಿ ಮುಖ್ಯಮಂತ್ರಿಯಾಗಿರುವುದು ಎಂಬುದನ್ನು ಮರೆಯಬೇಡಿ ಎಂದು ವ್ಯಂಗ್ಯವಾಡಿದರು.

ಮೈತ್ರಿ ಸುನಾಮಿಗೆ ಕಾಂಗ್ರೆಸ್ ಧೂಳೀಪಟ...

"ಬಿಜೆಪಿ-ಜೆಡಿಎಸ್ ಮೈತ್ರಿಯ ಈ ಕಾರ್ಯಕ್ರಮದ ದೃಶ್ಯ ಕಂಡರೆ ಕಾಂಗ್ರೆಸ್‌ನವರು ನಿದ್ದೆ ಮಾಡಲ್ಲ. ಬಿಜೆಪಿ-ಜೆಡಿಎಸ್ ಮೈತ್ರಿ ಸುನಾಮಿ ಅಲೆಯನ್ನೇ ಸೃಷ್ಟಿಸಿದ್ದು, ಈ ಅಲೆಯಲ್ಲಿ ಕಾಂಗ್ರೆಸ್ ಧೂಳೀಪಟವಾಗಲಿದೆ. ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ 400ಕ್ಕೂ ಹೆಚ್ಚು ಸ್ಥಾನಗಳನ್ನು ಪಡೆಯುವ ಮೂಲಕ ಮೂರನೇ ಬಾರಿಗೆ ನರೇಂದ್ರ ಮೋದಿಯವರು ದೇಶದ ಪ್ರಧಾನಿಯಾಗುವುದನ್ನು ಯಾವ ಶಕ್ತಿಯೂ ತಡೆಯಲು ಸಾಧ್ಯವಿಲ್ಲ.

– ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಋಣ ತೀರಿಸಬೇಕೆಂದಿಲ್ಲ, ಸೇವೆ ಮಾಡುವ ಅವಕಾಶ ಮಾಡಿಕೊಡಿ...

"ಮೈಸೂರು ಒಡೆಯರು ನೀಡಿರುವ ಕೊಡುಗೆಗಳ ಋಣ ತೀರಿಸಬೇಕೆಂದಿಲ್ಲ. ರಾಜರಾದವರು ಜನತೆಯ ಸೇವೆಯನ್ನು ಮಾಡಲೇಬೇಕು. ಅವರ ಕಷ್ಟಗಳಿಗೆ ಸ್ಪಂದಿಸಲೇಬೇಕು. ಅದರಂತೆ ನನಗೂ ಸಹ ನಿಮ್ಮ ಸೇವೆ ಮಾಡುವ ಅವಕಾಶ ಮಾಡಿಕೊಡಿ. ಪ್ರಧಾನಿ ಮೋದಿಯವರ ಪ್ರೇರಣೆಯಿಂದ ನಿಮ್ಮೆದುರು ಬಂದಿದ್ದೇನೆ. ಈ ಪುಣ್ಯ ಸಂಗಮದಿಂದ ಆರಂಭಗೊಂಡು ಯಶಸ್ಸು ಲಭಿಸಲು ಸಹಕಾರ ನೀಡಿ. ನಿಮ್ಮೆಲ್ಲರ ಸಲಹೆಯಂತೆ ರಾಜ್ಯದ ಪರವಾಗಿ ಕೆಲಸ ಮಾಡಲಿದ್ದೇನೆ. ಹಾಗೆಂಯೇ ಪಾರ್ಲಿ ಮೆಂಟ್‌ನಲ್ಲಿ ಮೀಸಲಾತಿ ವಿಚಾರವಾಗಿ ಚರ್ಚೆ ನಡೆಯುವಾಗ ರಾಜ್ಯದ ಪರ ಧ್ವನಿ ಎತ್ತಿದವರು ಮಾಜಿ ಪ್ರಧಾನಿ ಹೆಚ್.ಡಿ.ದೇವೇ ಗೌಡರು ಎಂಬುದನ್ನು ಮರೆಯುವಂತಿಲ್ಲ.

– ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಬಿಜೆಪಿ ಅಭ್ಯರ್ಥಿ, ಮೈಸೂರು-ಕೊಡಗು ಲೋಕಸಭಾ ಕ್ಷೇತ್ರ

ನಾ ಜಾಸ್ತಿ.. ನೀ ಜಾಸ್ತಿ ಎನ್ನದೇ ಒಗ್ಗಟ್ಟಾಗಿರಿ...

"ಲೋಕಸಭಾ ಚುನಾವಣೆ ದೇಶದ ಹಿತಕ್ಕಾಗಿ. ಪ್ರಧಾನಿ ನರೇಂದ್ರ ಮೋದಿ ಅವರು ಮಾಡಿದ ಒಳ್ಳೆಯ ಕೆಲಸಗಳು ಶಾಶ್ವತವಾಗಿ ಉಳಿಸುವುದಕ್ಕಾಗಿ. ಈ ನಿಟ್ಟಿನಲ್ಲಿ ಮೈಸೂರಿನಿಂದಲೇ ವಿಜಯ ಯಾತ್ರೆ ಪ್ರಾರಂಭವಾಗಿದ್ದು, ನಾ ಜಾಸ್ತಿ ನೀ ಜಾಸ್ತಿ ಎನ್ನದೆ ಕೇಂದ್ರ ಸರ್ಕಾರದ ಸಾಧನೆಗಳನ್ನು ಮನೆ ಮನೆಗೆ ತಿಳಿಸಿ, ಒಗ್ಗಟ್ಟಾಗಿರಿ.

– ಸಿ.ಎನ್.ಅಶ್ವಥ್ ನಾರಾಯಣ್, ಮಾಜಿ ಉಪ ಮುಖ್ಯಮಂತ್ರಿ

ಆತ್ಮಸಾಕ್ಷಿ ಇಲ್ವಾ...

"ರಾಜ್ಯದಲ್ಲಿ ಜೆಡಿಎಸ್ ಎಲ್ಲಿದೆ ಎನ್ನುವ ಸಿದ್ದರಾಮಯ್ಯರಿಗೆ ಆತ್ಮಸಾಕ್ಷಿ ಇಲ್ವಾ... 50 ಸಾವಿರ ಮತಗಳ ಅಂತರದಿಂದ ಸೋತು ಕ್ಷೇತ್ರ ಬಿಟ್ಟು ಹೋಗಿದ್ದು ಯಾರು? ಕಳೆದ ಲೋಕಸಭಾ ಚುನಾವಣೆಯಲ್ಲಿ ನಿಖಿಲ್ ಸೋಲಿಸಲು ರೂಪಿಸಿದ ಸಂಚು, ಪ್ರತಾಪ್ ಸಿಂಹನ ಗೆಲುವಾಯಿತು. ಅದಕ್ಕಾಗಿ ಈ ಬಾರಿ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರಕ್ಕೆ ಡಮ್ಮಿ ಕ್ಯಾಂಡೆಟ್ ಹಾಕಿದ್ದೀರಿ. ದೇಶ ಉಳಿಯಬೇಕಾದರೆ ಮೋದಿಯವರು ಮತ್ತೆ ಪ್ರಧಾನಿಯಾಗಬೇಕು.

– ಸಾ.ರಾ.ಮಹೇಶ್, ಮಾಜಿ ಸಚಿವ

ಮೈತ್ರಿ ಬಗ್ಗೆ ಅನುಮಾನ ಬೇಡ...


"ಬಿಜೆಪಿ-ಜೆಡಿಎಸ್ ಮೈತ್ರಿ ಬಗ್ಗೆ ಯಾವುದೇ ಅನುಮಾನ ಬೇಡ. ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಲ್ಲಿ ನಾನು ಎರಡು ಬಾರಿ ಸಂಸದನಾಗಲೂ ಜೆಡಿಎಸ್ ನೀಡಿದ ಬೆಂಬಲವೂ ಕಾರಣವಾಗಿದೆ. ಮಾಜಿ ಸಿಎಂ ಕುಮಾರಣ್ಣ, ಜಿ.ಟಿ.ದೇವೇಗೌಡರು ನನ್ನ ಪರವಾಗಿ ನಿಂತಿದ್ದರು. ರಾಜ್ಯದಲ್ಲಿ ಆದಷ್ಟು ಬೇಗ ಈ ಸರ್ಕಾರ ಪತನವಾಗಿ ಹೊಸ ಸರ್ಕಾರ ಅಧಿಕಾರಕ್ಕೆ ಬರುವುದಕ್ಕಾಗಿ ಎನ್‌ಡಿಎ ಬೆಂಬಲಿಸಿ.

– ಪ್ರತಾಪ್ ಸಿಂಹ, ಸಂಸದ

ರೌಡಿಶೀಟರ್ ವಿರುದ್ಧ ಗೂಂಡಾ ಕಾಯ್ದೆಯಡಿ ಪ್ರಕರಣ: ಮಂಗಳೂರು ಜೈಲಿಗೆ ಶಿಫ್ಟ್

ಮೈಸೂರು,ಮಾ.27(ಆರ್‌ಕೆ)–ಲೋಕಸಭಾ ಚುನಾವಣೆ ಹಿನ್ನಲೆಯಲ್ಲಿ ರೌಡಿ ಶೀಟರ್ ವಿರುದ್ಧ ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸಿರುವ ಮೈಸೂರಿನ ವಿಜಯನಗರ ಠಾಣೆ ಪೊಲೀಸರು, ಆರೋಪಿಯನ್ನು ಮಂಗಳೂರು ಜೈಲಿಗೆ ಕಳುಹಿಸಿದ್ದಾರೆ. ಮೈಸೂರಿನ ಬೆಳವಾಡಿ ನಿವಾಸಿ ಶಿವ ಅಲಿಯಾಸ್ ಶಿವಕುಮಾರ್ (30) ಆರೋಪಿಯಾಗಿದ್ದು, ಈಗಾಗಲೇ ಆತನ ವಿರುದ್ಧ ಕೊಲೆಯತ್ನ, ಹಲ್ಲೆ, ದರೋಡೆ ಸೇರಿದಂತೆ ಒಟ್ಟು 13 ಪ್ರಕರಣಗಳು ದಾಖಲಾಗಿದ್ದರಿಂದ ಮುಂಜಾಗ್ರತಾ ಕ್ರಮವಾಗಿ ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದ್ದು, ಆತನನ್ನು ಬಂಧಿಸಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ ಮಂಗಳೂರು ಕಾರಾಗೃಹದಲ್ಲಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸುವಂತೆ ಆದೇಶಿಸಲಾಗಿತ್ತು. ಅದರಂತೆ ವಿಜಯನಗರ ಠಾಣೆ ಇನ್ಸ್‌ಪೆಕ್ಟರ್ ಬಿ.ಆರ್.ಪ್ರದೀಪ್ ಹಾಗೂ ಸಿಬ್ಬಂದಿ ಆರೋಪಿ ಯನ್ನು ಭದ್ರತೆಯೊಂದಿಗೆ ಮಂಗಳೂರು ಜೈಲಿಗೆ ಒಪ್ಪಿಸಿದ್ದಾರೆ.

ಅಕ್ರಮ ಮದ್ಯ ವಶ



ಮೈಸೂರು,ಮಾ.27– ಲೋಕಸಭಾ ಸಾರ್ವತ್ರಿಕ ಚುನಾವಣೆ–2024ರ ಅಂಗವಾಗಿ ಅಬಕಾರಿ ಅಧಿಕಾರಿಗಳು ಮಾ.26 ರಂದು ತಿ.ನರಸೀಪುರ ಟೌನ್, ಗುಂಜಾ ನರಸಿಂಹದೇವಸ್ಥಾನದ ಬಳಿ ರಸ್ತೆ ಗಾವಲು ನಡೆಸುತ್ತಿದ್ದ ಸಮಯದಲ್ಲಿ ಹ್ಯುಂಡಾಯ್ ಇಯಾನ್ ಕಾರಿನಲ್ಲಿ ಅಕ್ರಮವಾಗಿ 6.480 ಲೀಟರ್ ಮದ್ಯ ಮತ್ತು 3.900 ಲೀಟರ್ ಬಿಯರ್‌ನ್ನು ಸಾಗಣೆ ಮಾಡುತ್ತಿದ್ದ ಹಿನ್ನೆಲೆ ಟಿ.ನರಸೀಪುರ ವಲಯದ ಅಬಕಾರಿ ಉಪ ನಿರೀಕ್ಷಕ ಶಿವಪ್ರಕಾಶ್ ವಶಪಡಿಸಿಕೊಂಡು, ಪ್ರಕರಣ ದಾಖಲಿಸಿದ್ದು, ಇದರ ಒಟ್ಟು ಮೌಲ್ಯ 5,03,480 ರೂ.

ಚುನಾವಣೆ ನೀತಿ ಸಂಹಿತೆ ಜಾರಿಯಾದ ದಿನಾಂಕದಿಂದ ಇದುವರೆಗೆ ಮೈಸೂರು ಗ್ರಾಮಾಂತರ ಜಿಲ್ಲೆಯಲ್ಲಿ ಅಬಕಾರಿ ಇಲಾಖೆ ವತಿಯಿಂದ ಅಕ್ರಮ ಮದ್ಯ ಚಟುವಟಿಕೆಗಳನ್ನು ಪತ್ತೆಹಚ್ಚಿ, ಒಟ್ಟು 113 ಮೊಕದ್ದಮೆಗಳನ್ನು ದಾಖಲಿಸಿ, 296.590 ಲೀ. ಮದ್ಯ, 3396 54.060 ಲೀ. ಬಿಯರ್ ಮತ್ತು ಒಟ್ಟು 16 (15 ದ್ವಿಚಕ್ರ, 01 ನಾಲ್ಕು ಚಕ್ರ) ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ. ಇವುಗಳ ಒಟ್ಟಾರೆ ಮೌಲ್ಯ 8,04,33,082 ರೂ.ಗಳಾಗಿರುತ್ತದೆ ಎಂದು ಮೈಸೂರು ಗ್ರಾಮಾಂತರ ಜಿಲ್ಲೆಯ ಡೆಪ್ಯೂಟಿ ಕಮಿಷನರ್ ಆಫ್ ಎಕ್ಸೈಸ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರಲ್ಲಿ ಬುಧವಾರ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶಕ್ಕೆ ಇಂದಿರಾ ಗಾಂಧಿ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರು, ಮಹಿಳಾ ಕಾರ್ಯಕರ್ತರು ಭಾಗವಹಿಸಿದ್ದರು.

ನಂಜನಗೂಡಲ್ಲಿ ಅಪರಿಚಿತ ಶವ ಪತ್ತೆ

ಮೈಸೂರು,ಮಾ.27–ಮಾ.21ರಂದು ಸುಮಾರು 65ರಿಂದ 70 ವರ್ಷದ ವ್ಯಕ್ತಿಯು ನಂಜನಗೂಡು ಪಟ್ಟಣದ ನಗರಸಭೆಯ ರೈಲ್ವೆ ಗೇಟ್‌ನ ಬ್ರಿಡ್ಜ್ ಗೋಡೆ ಪಕ್ಕದಲ್ಲಿ ಮೃತಪಟ್ಟಿದ್ದು, ನಂಜನಗೂಡು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸುಮಾರು 65ರಿಂದ 70 ವರ್ಷ ವಯಸ್ಸಾಗಿದ್ದು, 5.3 ಅಡಿ ಎತ್ತರ, ಕೋಲು ಮುಖ, ಸಾಧಾರಣ ಶರೀರ, ಎಣ್ಣೆಗೆಂಪು ಮೈ ಬಣ್ಣ, ಬಿಳಿ ತಲೆ ಕೂದಲನ್ನು ಹೊಂದಿರುತ್ತಾನೆ.

ಮೃತ ವ್ಯಕ್ತಿಯು ಕೆಂಪು ಬಣ್ಣದ ಅರ್ಧ ತೋಳಿನ ಬನಿಯನ್ ಹಾಗೂ ಬೂದು ಬಣ್ಣದ ನಿಕ್ಕರ್ ಅನ್ನು ಧರಿಸಿರುತ್ತಾನೆ. ಮೃತ ವ್ಯಕ್ತಿಯ ಬಗ್ಗೆ ಮಾಹಿತಿ ಕಂಡುಬಂದಲ್ಲಿ ಮೈಸೂರು ಜಿಲ್ಲೆಯ ಎಸ್.ಪಿ.ಸಾಹೇಬರ ದೂ.ಸಂ: 0821–2520040, ಮೈಸೂರು ಜಿಲ್ಲಾ ನಿಸ್ತಂತು ಕೊಠಡಿಯ ದೂ.ಸಂ: 0821–2444800, ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯ ದೂ.ಸಂ: 08221–228383 ಹಾಗೂ nanjangudtownmys@ksp.gov.in ಅನ್ನು ಸಂಪರ್ಕಿಸಲು ಪೊಲೀಸ್ ಪ್ರಕಟಣೆ ತಿಳಿಸಿದೆ.

ಬೇಸಿಗೆ ಬೇಡಿಕೆ ಹೆಚ್ಚಿದ್ದರೂ ನಿರಂತರ ವಿದ್ಯುತ್ ಪೂರೈಕೆ

● ಇಂಧನ ಸಚಿವ ಕೆ.ಜೆ.ಜಾರ್ಜ್ ಅಭಯ ● ಪ್ರತಿನಿತ್ಯ 329 ಮಿಲಿಯನ್ ಯೂನಿಟ್ ಬೇಡಿಕೆ; ಈ ಬಾರಿ ಗರಿಷ್ಟ ಲೋಡ್ 15300 ಮೆಗಾ ವ್ಯಾಟ್‌ಗೆ ಏರಿಕೆ ● ಹೆಚ್ಚಿನ ಬೇಡಿಕೆ ಪರಿಸ್ಥಿತಿಯಲ್ಲಿ ಎಲ್ಲಾ ಮುನ್ನೆಚ್ಚರಿಕಾ ಕ್ರಮ ಪರಿಣಾಮ ಯಾವ ಸಮಸ್ಯೆಯೂ ಇಲ್ಲ

ಬೆಂಗಳೂರು, ಮಾ.27(ಕೆಎಂಶಿ)– ಪ್ರಸಕ್ತ ಬೇಸಿಗೆಯಲ್ಲಿ ವಿದ್ಯುತ್ ಬೇಡಿಕೆ ಹೆಚ್ಚಿದ್ದರೂ ರಾಜ್ಯದ ಯಾವುದೇ ವರ್ಗದ ಗ್ರಾಹಕರಿಗೆ ಲೋಡ್ ಶೆಡ್ಡಿಂಗ್ ಮಾಡುವುದಿಲ್ಲ ಎಂದು ಇಂಧನ ಖಾತೆ ಸಚಿವ ಕೆ.ಜೆ.ಜಾರ್ಜ್ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.

ಪ್ರತಿದಿನದ ವಿದ್ಯುತ್ ಬಳಕೆ 329 ಮಿಲಿಯನ್ ಯೂನಿಟ್‌ನಷ್ಟಿದ್ದು, ಹಿಂದಿನ ವರ್ಷ ಇದೇ ಅವಧಿಯ ವಿದ್ಯುತ್ ಬಳಕೆ ಪ್ರಮಾಣ 300 ಮಿಲಿಯನ್ ಯೂನಿಟ್ ನಷ್ಟಿತ್ತು. ಕಳೆದ ವರ್ಷದ ಗರಿಷ್ಠ ಲೋಡ್ 15,300 ಮೆಗಾ ವ್ಯಾಟ್ ಆಗಿದ್ದರೆ, ಈ ವರ್ಷದ ಗರಿಷ್ಠ ಲೋಡ್ 17,000 ಮೆಗಾ ವ್ಯಾಟ್‌ಗೆ ಏರಿದೆ. ಬೇಸಿಗೆಯಲ್ಲಿ ವಿದ್ಯುತ್ ಅಭಾವ ಎದುರಾಗಬಹುದೆಂಬ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮ ಕೈಗೊಂಡಿದ್ದರಿಂದ ವಿದ್ಯುತ್ ಕಡಿತವಾಗಲೀ, ಲೋಡ್ ಶೆಡ್ಡಿಂಗ್ ಆಗಲೀ ಮಾಡುವ ಪರಿಸ್ಥಿತಿ ಎದುರಾಗಿಲ್ಲ ಎಂದು ಪತ್ರಿಕಾ ಹೇಳಿಕೆಯಲ್ಲಿ ಸಚಿವರು ತಿಳಿಸಿದ್ದಾರೆ.

ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಓದಲು ತೊಂದರೆಯಾಗದಂತೆ ವಿದ್ಯುತ್ ಪೂರೈಕೆ ಮಾಡಲಾಗುತ್ತದೆ. ಕೃಷಿ ಪಂಪ್‌ಸೆಟ್‌ಗಳಿಗೆ ಏಳು ತಾಸು ವಿದ್ಯುತ್ ಪೂರೈಕೆಗೆ ಆದೇಶ ನೀಡಲಾಗಿದೆ. ಬೇಸಿಗೆ ಕಾರಣದಿಂದ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಆಗದಂತೆ ನೋಡಿಕೊಳ್ಳಲಾಗುವುದು ಎಂದು ಸ್ಪಷ್ಟಪಡಿಸಿದ್ದಾರೆ.

ಬೇಡಿಕೆ ಹೆಚ್ಚಿರುದನ್ನು ಮನಗಂಡು ಬಹಳ ಮುಂಚಿತವಾಗಿ ಸರಿಯಾದ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದಿದ್ದಾರೆ. ಬೇಸಿಗೆಯಲ್ಲಿ



ಸಮರ್ಪಕ ವಿದ್ಯುತ್ ಪೂರೈಕೆ ಸರ್ಕಾರದ ಆದ್ಯತೆಯಾಗಿದ್ದು, ಎಲ್ಲ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ವಿದ್ಯುತ್ ಪೂರೈಕೆಯಲ್ಲಿ ಸದ್ಯಕ್ಕೆ ಯಾವುದೇ ಬಿಕ್ಕಟ್ಟಿಲ್ಲ, ಜನರಿಗೆ ತೊಂದರೆ ಆಗದಂತೆ ನೋಡಿಕೊಳ್ಳಲಾಗುವುದು. ವಿದ್ಯುತ್ ಬೇಡಿಕೆ ಪೂರೈಕೆಯಲ್ಲಿ ತೊಂದರೆಯಾಗದಂತೆ ಹಲವು ಕ್ರಮ ಕೈಗೊಳ್ಳಲಾಗಿದ್ದು, ಪ್ರಸಕ್ತ ಮಾರ್ಚ್, ಏಪ್ರಿಲ್ ಬೇಡಿಕೆಗೆ ಅನುಗುಣವಾಗಿ ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳಲ್ಲಿ ಗರಿಷ್ಠ ಉತ್ಪಾದನೆಗೆ ಒತ್ತು ನೀಡಲಾಗಿದೆ.

ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳು ರಾಜ್ಯಕ್ಕೆ ವಿದ್ಯುತ್ ಉತ್ಪಾದನೆಯ ಮುಖ್ಯ ಆಧಾರವಾಗಿದೆ. ಶಾಖೋತ್ಪನ್ನ ಸ್ಥಾವರಗಳಲ್ಲಿ ಕಳೆದ ವರ್ಷ ಗರಿಷ್ಠ 22,000 ಮಿಲಿಯನ್ ಯೂನಿಟ್ ಉತ್ಪಾದನೆಯಾಗಿದೆ, ಪ್ರಸ್ತುತ 3,250 ಮೆಗಾ ವ್ಯಾಟ್ ಅಂದರೆ, ದಿನಕ್ಕೆ 75 ಮಿಲಿಯನ್ ಯೂನಿಟ್‌ನಂತೆ ವಿದ್ಯುತ್ ಉತ್ಪಾದನೆ ಆಗುತ್ತಿದೆ. ಮಳೆ ಅಭಾವದಿಂದ ಈ ವರ್ಷ ಬಹುತೇಕ ಜಲಾಶಯಗಳು ಕೇವಲ ಅರ್ಧದಷ್ಟು



ತುಂಬಿದ ಕಾರಣ ನೀರನ್ನು ಸಂರಕ್ಷಿಸಿ, ಬಹಳ ಎಚ್ಚರಿಕೆಯಿಂದ ಬಳಸಲಾಗುತ್ತಿದೆ. ಇದರಿಂದಾಗಿ ಜಲ ವಿದ್ಯುತ್ ಉತ್ಪಾದನೆ ಸ್ವಲ್ಪ ಕುಂಠಿತಗೊಂಡಿದೆ, ಮಾರ್ಚ್ ಮತ್ತು ಏಪ್ರಿಲ್ ಹೆಚ್ಚಿನ ಬೇಡಿಕೆ ಅವಧಿಯಾಗಿದ್ದು, ದಿನಕ್ಕೆ 20 ಮಿಲಿಯನ್ ಯೂನಿಟ್ ಅಂದರೆ 1000 ಮೆಗಾ ವ್ಯಾಟ್ ವಿದ್ಯುತ್ ಅಗತ್ಯವಿದೆ. ಉತ್ತರ ಪ್ರದೇಶ, ಪಂಜಾಬ್ ರಾಜ್ಯಗಳೊಂದಿಗೆ ದ್ವಿಪಕ್ಷೀಯ ವಿನಿಮಯ ಒಪ್ಪಂದ ಮಾಡಿಕೊಳ್ಳುವ ಮೂಲಕ ತೀವ್ರ ವಿದ್ಯುತ್ ಅಭಾವ ಉಂಟಾಗದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ. ಮುಂದಿನ ವರ್ಷ ಈ ರಾಜ್ಯಗಳಿಗೆ ವಿದ್ಯುತ್ ಹಿಂದಿರುಗಿಸುವ ಷರತ್ತಿನ ಮೇಲೆ ವಿನಿಮಯ ಆಧಾರದಲ್ಲಿ ಪ್ರತಿದಿನ ಸರಾಸರಿ 900 ಮೆಗಾ ವ್ಯಾಟ್ ವಿದ್ಯುತ್ ಪಡೆಯಲಾಗುತ್ತಿದೆ.

ವಿದ್ಯುತ್ ಕಾಯ್ದೆಯ ಸೆಕ್ಷನ್ 11 ಜಾರಿಗೊಳಿಸಿ, ಖಾಸಗಿ ವಿದ್ಯುತ್ ಉತ್ಪಾದಕರಿಂದ ವಿದ್ಯುತ್ ಖರೀದಿ ಮಾಡಲಾಗುತ್ತಿದೆ. ಪ್ರಸ್ತುತ 500 ಮೆಗಾ ವ್ಯಾಟ್ ವಿದ್ಯುಚ್ಛಕ್ತಿಯನ್ನು ಖಾಸಗಿ ಉತ್ಪಾದಕರಿಂದ ಪಡೆಯಲಾಗುತ್ತಿದೆ. ಅನಿರೀಕ್ಷಿತ ಅಥವಾ ಹಠಾತ್ ವಿದ್ಯುತ್ ಬೇಡಿಕೆ ಪೂರೈಸಲು, ಕೇಂದ್ರ ಸರ್ಕಾರವು ನಿಗದಿಪಡಿಸಿರುವಂಥ ವಿದ್ಯುತ್ ವಿನಿಮಯ ಕೇಂದ್ರದಿಂದ ಪಾರದರ್ಶಕವಾಗಿ ವಿದ್ಯುತ್ ಖರೀದಿಸಲಾಗುತ್ತಿದೆ. ರಾಜ್ಯಾದ್ಯಂತ ಸಮರ್ಪಕ ವಿದ್ಯುತ್ ಸರಬರಾಜಿನ ಮೇಲ್ವಿಚಾರಣೆಗೆ ಪ್ರತಿ ಜಿಲ್ಲೆಗೆ ಮುಖ್ಯ ಇಂಜಿನಿಯರ್ ಶ್ರೇಣಿಯ ಅಧಿಕಾರಿಗಳನ್ನು ನೇಮಿಸಲಾಗಿದೆ. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ನಿರ್ದೇಶನದಂತೆ ಎಸ್ಕಾಂಗಳು, ಕೆಪಿಟಿಸಿಎಲ್ ಹಾಗೂ ರಾಜ್ಯದ ಲೋಡ್ ಡಿಸ್ಪ್ಯಾಚ್ ಸೆಂಟರ್‌ಗಳ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಅಧಿಕಾರಿಗಳು ವಿದ್ಯುತ್ ಸರಬರಾಜಿನ ಬಗ್ಗೆ ನಿಗಾ ವಹಿಸಿದ್ದಾರೆ. ಕಲ್ಲಿದ್ದಲು ಸಚಿವಾಲಯದಿಂದ ಹೆಚ್ಚುವರಿ ಕಲ್ಲಿದ್ದಲನ್ನು ಸಕಾಲದಲ್ಲಿ ಪಡೆಯಲಾಗಿದೆ ಮತ್ತು ಆಮದು ಮಾಡಿದ ಹೆಚ್ಚಿನ ವಿದೇಶಿ ಕಲ್ಲಿದ್ದಲನ್ನು ದೇಶೀಯ ಕಲ್ಲಿದ್ದಲಿ ನೊಂದಿಗೆ ಮಿಶ್ರಣ ಮಾಡಲಾಗುತ್ತಿದೆ. 370 ಮೆ.ವ್ಯಾ. ಸಾಮರ್ಥ್ಯದ ಯಲಹಂಕ ಅನಿಲ ಆಧಾರಿತ ವಿದ್ಯುತ್ ಸ್ಥಾವರದಲ್ಲಿ ಶೀಘ್ರದಲ್ಲೇ ಉತ್ಪಾದನೆ ಆರಂಭವಾಗಲಿದೆ ಎಂದರು.


> ಬಹುತೇಕ ಖಾಸಗಿ ವಲಯದ ಸೌರ ಮತ್ತು ಪವನ ವಿದ್ಯುತ್ ಸ್ಥಾವರಗಳು ಸಾಮಾನ್ಯವಾಗಿ 'ಮಸ್ಟ್ ರನ್' ಆಧಾರದ ಮೇಲೆ ನಡೆಯುತ್ತವೆ. ಹವಾಮಾನ ಬದಲಾವಣೆಗೆ ಅನುಗುಣವಾಗಿ ಈ ಸ್ಥಾವರಗಳಿಂದ ವಿದ್ಯುತ್ ಉತ್ಪಾದನೆ ಆಗುತ್ತದೆ. ರಾಜ್ಯಕ್ಕೆ ಹೆಚ್ಚುವರಿ ವಿದ್ಯುತ್ತಿನ ಅಗತ್ಯ ಇದೆ ಎಂದು ಮನವರಿಕೆ ಮಾಡಿಕೊಟ್ಟು, ಕೇಂದ್ರ ಗ್ರಿಡ್‌ನಿಂದ ಈ ವರ್ಷವೂ 302 ಮೆ.ವ್ಯಾ. ವಿದ್ಯುತ್ ಪಡೆಯಲಾಗಿದೆ. ಕಳೆದ ವರ್ಷ ಕೇಂದ್ರ ಗ್ರಿಡ್‌ಗೆ ಒಪ್ಪಿಸಲಾಗಿದ್ದ 150 ಮೆಗಾವ್ಯಾಟ್ ವಿದ್ಯುಚ್ಛಕ್ತಿಯನ್ನೂ ವಾಪಸ್ ಪಡೆದಿದ್ದೇವೆ. ಈ ಹೆಚ್ಚುವರಿ ವಿದ್ಯುತ್ ಡಿಸೆಂಬರ್ ತಿಂಗಳಿನಿಂದ ರಾಜ್ಯಕ್ಕೆ ಲಭ್ಯವಾಗಿದೆ.
>
> –ಕೆ.ಜೆ.ಜಾರ್ಜ್, ಇಂಧನ ಸಚಿವ.

ಮೈಸೂರು, ಕೊಡಗಿನ ಮೂವರು ಅಧಿಕಾರಿಗಳ ಮನೆ, ಕಚೇರಿ ಮೇಲೆ ಲೋಕಾಯುಕ್ತ ದಾಳಿ

ಬೆಂಗಳೂರಿನ ಈಗಲ್‌ಟನ್ ಗಾಲ್ಫ್ ರೆಸಾರ್ಟ್‌ನಲ್ಲಿ ವಿಲ್ಲಾ, ಮೈಸೂರಿನ ಆಲನಹಳ್ಳಿಯಲ್ಲಿ ಮನೆ, ನಜರ್‌ಬಾದ್‌ನಲ್ಲಿ ಬಂಗಲೆ ಸೇರಿ 2,23,12,940 ರೂ. ಮೌಲ್ಯದ ಆಸ್ತಿ ಹೊಂದಿರುವ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ



ಮೈಸೂರಲ್ಲಿ ಪಿಡಿಒ ಯತೀಶರ ಬಂಗಲೆ



ಕುಶಾಲನಗರದ ಬಿ.ವಿ.ಜಯಣ್ಣ ನಿವಾಸ



ಕುಶಾಲನಗರದ ಎಂ.ಎಂ. ಫಯಾಜ್ ಅಹಮದ್ ಮನೆ

ಮೈಸೂರು, ಮಾ.27(ಆರ್‌ಕೆ)–ಇಂದು ಬೆಳ್ಳಂ ಬೆಳಗ್ಗೆ ಮೈಸೂರು ಮತ್ತು ಕೊಡಗು ಜಿಲ್ಲೆಯ ಮೂವರು ಸರ್ಕಾರಿ ಅಧಿಕಾರಿಗಳ ಮನೆ, ಕಚೇರಿ ಸೇರಿದಂತೆ 12 ಸ್ಥಳಗಳಲ್ಲಿ ದಾಳಿ ನಡೆಸಿದ ಲೋಕಾಯುಕ್ತ ಅಧಿಕಾರಿಗಳು, ಕೋಟ್ಯಾಂತರ ರೂ. ಮೌಲ್ಯದ ಆಸ್ತಿ, ನಗದು ಹಾಗೂ ಚಿನ್ನಾಭರಣಗಳನ್ನು ವಶಪಡಿಸಿ ಕೊಂಡಿದ್ದಾರೆ.

ಆದಾಯಕ್ಕಿಂತ ಅಧಿಕ ಆಸ್ತಿ ಹೊಂದಿದ್ದಾರೆಂಬ ದೂರಿನನ್ವಯ ಮೂವರು ಅಧಿಕಾರಿಗಳ ವಿರುದ್ಧ ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದ ಮೈಸೂರು ವಿಭಾಗದ ಲೋಕಾ ಯುಕ್ತ ಎಸ್ಪಿ ವಿ.ಜೆ.ಸಜೀತ್ ಅವರ ನಿರ್ದೇ ಶನದಂತೆ ಇಂದು ಬೆಳಗ್ಗೆ 12 ಕಡೆಗಳಲ್ಲಿ ಏಕಾಏಕಿ ದಾಳಿ ನಡೆಸಿ ಶೋಧ ಕಾರ್ಯಾ ಚರಣೆ ನಡೆಸಿದ ಅಧಿಕಾರಿಗಳು ಸ್ಥಿರ–ಚರಾಸ್ತಿ, ವಾಹನ, ನಗದು, ಆಭರಣಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾದರು.

ರಾಮನಗರ ಜಿಲ್ಲೆ, ಬಿಡದಿ ಹೋಬಳಿ, ಮಂಚನಾಯಕನಹಳ್ಳಿ ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ (ಪಿಡಿಓ)ಯಾದ ಮೈಸೂರಿನ ಯತೀಶ್, ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿಯಾದ ಕುಶಾಲನಗರ ನಿವಾಸಿ ಬಿ.ವಿ.ಜಯಣ್ಣ ಹಾಗೂ ಸೋಮವಾರಪೇಟೆ ತಾಲೂಕು ಪಂಚಾಯ್ತಿ ಆರ್‌ಡಿಪಿಆರ್ ಅಸಿಸ್ಟೆಂಟ್ ಇಂಜಿನಿಯರ್ ಎಂ.ಎಂ.ಫಯಾಜ್ ಅಹಮದ್ ಅವರು ಆದಾಯಕ್ಕಿಂತ ಅಧಿಕ ಆಸ್ತಿ ಸಂಪಾದಿಸಿ ದಾಳಿಗೊಳಗಾದವರು.

ಭಾರೀ ಕುಳ ಯತೀಶ್: ಲೋಕಾಯುಕ್ತ ಅಧಿಕಾರಿಗಳು ದಾಳಿ ಮಾಡಿದಾಗ ಪಿಡಿಓ ಯತೀಶ್ ಅವರ ಮೈಸೂರಿನ ಆಲನಹಳ್ಳಿ ಮನೆ, ನಜರ್‌ಬಾದ್‌ನಲ್ಲಿ ನಿರ್ಮಿಸುತ್ತಿರುವ ಭವ್ಯ ಬಂಗಲೆ, ಬಿಡದಿ ಬಳಿಯ ಈಗಲ್ ಟನ್ ಗಾಲ್ಫ್ ವಿಲ್ಲಾ, 1.16 ಕೋಟಿ ರೂ. ಮೌಲ್ಯದ 4 ನಿವೇಶನಗಳು, 92 ಲಕ್ಷ ರೂ. ಬೆಲೆಯ ಮನೆ, 5,31,895ರೂ. ನಗದು, 24,83,550 ರೂ. ಬೆಲೆಯ 500 ಗ್ರಾಂ ಚಿನ್ನಾಭರಣ, 72,000 ರೂ. ಬೆಲೆಯ 415 ಗ್ರಾಂ ಬೆಳ್ಳಿ, 23 ಲಕ್ಷ ರೂ. ಮೌಲ್ಯದ ಕಾರುಗಳು ಸೇರಿ ಯತೀಶ್ ಅವರು ಒಟ್ಟು 2,23,12,940 ರೂ. ಮೌಲ್ಯದ ಆಸ್ತಿ ಹೊಂದಿರುವುದು ಪರಿಶೀಲನೆಯಿಂದ ತಿಳಿದು ಬಂದಿದೆ.

ಗ್ರಾಮ ಪಂಚಾಯ್ತಿ ಪಿಡಿಓ ಆಗಿರುವ ಯತೀಶ್ ಬೆಂಗಳೂರಿನ ಈಗಲ್‌ಟನ್ ಗಾಲ್ಫ್ ರೆಸಾರ್ಟ್ ವಿಲ್ಲಾದಲ್ಲಿ ವಾಸ್ತವ್ಯ ಹೂಡಿದ್ದು, ಮೈಸೂರಿನ ಆಲನಹಳ್ಳಿಯ ಮನೆಯಲ್ಲಿ ಪತ್ನಿ, ಇಬ್ಬರು ಮಕ್ಕಳ ವಾಸ್ತವ್ಯ ಹಾಗೂ ನಜರ್‌ಬಾದ್‌ನಲ್ಲಿ ಭವ್ಯವಾದ ಬಂಗಲೆ ನಿರ್ಮಿಸುತ್ತಿರುವುದು ಪತ್ತೆಯಾಗಿದೆ.

ಬಿ.ವಿ.ಜಯಣ್ಣ: ಸೋಮವಾರಪೇಟೆ ತಾಲೂಕು ಪಂಚಾಯ್ತಿ ಎಕ್ಸಿಕ್ಯೂಟಿವ್ ಆಫೀಸರ್ ಆಗಿರುವ ಬಿ.ವಿ.ಜಯಣ್ಣ, 5.5 ಲಕ್ಷ ರೂ. ನಿವೇಶನ, 1.09 ಕೋಟಿ ಬೆಲೆಯ 3 ಮನೆಗಳು, 3 ಲಕ್ಷ ರೂ. ಮೌಲ್ಯದ 5.33 ಎಕರೆ ಭೂಮಿ, 8,63,424 ರೂ. ಮೌಲ್ಯದ ಆಭರಣ, 25,70,000 ರೂ. ಬೆಲೆಯ ವಾಹನಗಳು ಸೇರಿ 1,3073,788 ರೂ. ಮೌಲ್ಯದ ಆಸ್ತಿ ಹೊಂದಿದ್ದಾರೆ.

ಎಂ.ಎಂ. ಫಯಾಜ್ ಅಹಮದ್: ಸೋಮವಾರಪೇಟೆಯಲ್ಲಿ ಆರ್‌ಡಿಪಿಆರ್ ಇಲಾಖೆ ಅಸಿಸ್ಟೆಂಟ್ ಇಂಜಿನಿಯರ್ ಎಂಎಂ.ಫಯಾಜ್ ಅಹಮದ್ 75 ಲಕ್ಷ ರೂ.ನ 2 ಮನೆಗಳು, 40 ಲಕ್ಷ ರೂ. ಬೆಲೆಯ 4 ಎಕರೆ ಭೂಮಿ, 48,070 ರೂ. ನಗದು, 2,95,800 ರೂ. ಮೌಲ್ಯದ ಚಿನ್ನಾಭರಣ, 24,75,000 ರೂ. ಬೆಲೆಯ ವಾಹನಗಳು ಸೇರಿ ಒಟ್ಟು 1,69,00,775 ರೂ. ಆಸ್ತಿ ಗಳಿಸಿರುವುದು ತಿಳಿದು ಬಂದಿದೆ. ಲೋಕಾಯುಕ್ತ ಡಿವೈಎಸ್‌ಪಿಗಳಾದ ಕೃಷ್ಣಯ್ಯ, ಪವನ್ ಕುಮಾರ್, ಇನ್ಸ್‌ಪೆಕ್ಟರ್‌ಗಳಾದ ರೂಪಶ್ರೀ, ಉಮೇಶ್, ಜಯರತ್ನ, ಲೋಕೇಶ್ ಮತ್ತು ಸಿಬ್ಬಂದಿ 12 ಸ್ಥಳಗಳಲ್ಲಿ ನಡೆದ ದಾಳಿಯಲ್ಲಿ ಪಾಲ್ಗೊಂಡಿದ್ದರು.

ಜಿ.ಶ್ರುತಿಗೆ ಪಿಎಚ್.ಡಿ



ಮೈಸೂರು: ಡಾ. ಎಸ್. ಇಂದುಮತಿ ಅವರ ಮಾರ್ಗದರ್ಶನದಲ್ಲಿ ಜಿ. ಶ್ರುತಿ ಅವರು ಅರ್ಥಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

'ನಾವು ಕಂಡ ಸಿದ್ದರಾಮಯ್ಯ' ಪುಸ್ತಕ ಬಿಡುಗಡೆ

ಬಡವರಿಗೆ ಅನ್ನಮೂಲ ಆರ್ಥಿಕತೆ ಪ್ರತಿಪಾದಿಸುವ ಶಾಶ್ವತ ಯೋಜನೆ ಘೋಷಿಸಬೇಕು

● ಹಿರಿಯ ಸಾಹಿತಿ, ನಾಡೋಜ ಪ್ರೊ.ಬರಗೂರು ರಾಮಚಂದ್ರಪ್ಪ ಸಲಹೆ ● ಅರಸು, ಬಂಗಾರಪ್ಪ ಬಿಟ್ಟರೆ ಸಿದ್ದರಾಮಯ್ಯರು ಸಮಾಜಮುಖಿ ಸಿಎಂ





ಕಡೂರಿನ ಆತ್ಮತೃಪ್ತಿ ಟ್ರಸ್ಟ್ ಪ್ರಕಟಣೆಯ, ಬಿ.ಕೆ.ಪ್ರಿಯದರ್ಶಿನಿ ಸಂಪಾದಕತ್ವದ ಕನ್ನಡ, ತಮಿಳು, ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗಿರುವ ತತ್ವ–ಸತ್ವದ ಸಂಗಮದ 'ನಾವು ಕಂಡ ಸಿದ್ದರಾಮಯ್ಯ' ಪುಸ್ತಕವನ್ನು ಹಿರಿಯ ಸಾಹಿತಿ ಹಾಗೂ ನಾಡೋಜ ಪ್ರೊ.ಬರಗೂರು ರಾಮಚಂದ್ರಪ್ಪ ಬಿಡುಗಡೆಗೊಳಿಸಿದರು. ಮತ್ತೊಂದು ಚಿತ್ರದಲ್ಲಿ 'ನಾವು ಕಂಡ ಸಿದ್ದರಾಮಯ್ಯ' ಪುಸ್ತಕವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಭಿಕರ ಸಾಲಿನಲ್ಲಿ ಕುಳಿತು ವೀಕ್ಷಣೆ ಮಾಡುತ್ತಿರುವ ದೃಶ್ಯ

> ಮುಖ್ಯಮಂತ್ರಿ ಸಿದ್ದರಾಮಯ್ಯ ಜಾರಿಗೊಳಿಸಿರುವ ಐದು ಗ್ಯಾರಂಟಿ ಯೋಜನೆಗಳಾದ ಗೃಹ ಲಕ್ಷ್ಮೀ, ಗೃಹಜ್ಯೋತಿ, ಶಕ್ತಿ, ಯುವನಿಧಿ ಹಾಗೂ ಅನ್ನ ಭಾಗ್ಯ ಯೋಜನೆಗಳು ಜನರಿಗೆ ಉಪಯುಕ್ತವಾಗಿವೆ. ಅದರಲ್ಲೂ ಗ್ರಾಮೀಣ ಭಾಗದ ಹೆಣ್ಣು ಮಕ್ಕಳಿಗೆ ಸಬಲೀಕರಣಕ್ಕೆ ಪೂರಕವಾದ ಯೋಜನೆಗಳು.
>
> –ಬಿ.ಟಿ.ಲಲಿತಾನಾಯಕ್, ಮಾಜಿ ಸಚಿವೆ

ಮೈಸೂರು, ಮಾ.27(ಎಸ್‌ಪಿಎನ್)– ಮುಖ್ಯಮಂತ್ರಿ ಸಿದ್ದರಾಮಯ್ಯ ಅತೀ ಹೆಚ್ಚು ಬಜೆಟ್ ಮಂಡನೆ ಮಾಡಿದ ಹಣಕಾಸು ಸಚಿವರು. ಇವರು ತಮ್ಮ ಮುಂದಿನ ಬಜೆಟ್‌ನಲ್ಲಿ ಬಡವರಿಗಾಗಿ ಅನ್ನಮೂಲ ಆರ್ಥಿಕತೆ ಪ್ರತಿಪಾದಿಸುವ ಶಾಶ್ವತ ಯೋಜನೆಯನ್ನು ಘೋಷಿಸಬೇಕು ಎಂದು ಹಿರಿಯ ಸಾಹಿತಿ ಹಾಗೂ ನಾಡೋಜ ಪ್ರೊ.ಬರಗೂರು ರಾಮಚಂದ್ರಪ್ಪ ಸಲಹೆ ನೀಡಿದರು.

ಮೈಸೂರು ಕಲಾಮಂದಿರದಲ್ಲಿ ಕಡೂರಿನ ಆತ್ಮತೃಪ್ತಿ ಟ್ರಸ್ಟ್ ಪ್ರಕಟಣೆಯ, ಬಿ.ಕೆ. ಪ್ರಿಯದರ್ಶಿನಿ ಸಂಪಾದಕತ್ವದ ಕನ್ನಡ, ತಮಿಳು, ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗಿರುವ ತತ್ವ–ಸತ್ವದ ಸಂಗಮದ 'ನಾವು ಕಂಡ ಸಿದ್ದರಾಮಯ್ಯ' ಪುಸ್ತಕವನ್ನು ಬುಧವಾರ ಬಿಡುಗಡೆಗೊಳಿಸಿ ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಘೋಷಿಸಿರುವ ಐದು ಗ್ಯಾರಂಟಿಗಳಲ್ಲಿ ಗೃಹಲಕ್ಷ್ಮಿ, ಶಕ್ತಿ ಯೋಜನೆ ಇವೆರಡು ನನಗಿಷ್ಟವಾಗಿವೆ. ಏಕೆಂದರೆ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳ ಸಬಲೀಕರಣಕ್ಕೆ ಒತ್ತು ನೀಡುವ ಶಕ್ತಿ ಮತ್ತು ಗೃಹಲಕ್ಷ್ಮಿ ಯೋಜನೆಗಳು ಪ್ರಸ್ತುತ ಕಾಲಘಟ್ಟಕ್ಕೆ ಅತ್ಯವಶ್ಯಕವಾಗಿ ಬೇಕಾಗಿತ್ತು. ಇಂತಹ ಯೋಜನೆಗಳನ್ನು ಯಾರೂ ವಿರೋಧಿಸಬಾರದು ಎಂದು ವಿಮರ್ಶಾಕಾರರಿಗೆ ಕಿವಿಮಾತು ಹೇಳಿದರು.

ಈಗ ಜಾರಿಗೆ ತಂದಿರುವ ಐದು ಗ್ಯಾರಂಟಿ ಯೋಜನೆಗಳಿಗೆ ಒದಗಿಸಿರುವ ಆರ್ಥಿಕ ಸಂಪನ್ಮೂಲ ತಾತ್ಕಾಲಿಕವಾದುದು. ಈ ಯೋಜನೆ ಮುಂದೆಯೂ ಬಡವರಿಗೆ ಶಾಶ್ವತವಾಗಿ ದೊರಕಬೇಕಾದರೆ, ಈ ಯೋಜನೆಗಳಿಗೆ ಶಾಶ್ವತ ಆರ್ಥಿಕ ಸಂಪನ್ಮೂಲವನ್ನು ಒದಗಿಸಬೇಕು ಹಾಗೂ ಇಂತಹ ಯೋಜನೆಗಳನ್ನು ಜಾರಿಗೆ ತರಲು ಸಮಾದಿವಾದಿ ಪ್ರಜ್ಞೆ ಇರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಮಾತ್ರ ಸಾಧ್ಯ ಎಂದು ಬಣ್ಣಿಸಿದರು.

ಈ ಬಾರಿಯ ಲೋಕಸಭಾ ಚುನಾವಣೆ ಕುರಿತು ಮಾಧ್ಯಮವೊಂದರಲ್ಲಿ ಹಳ್ಳಿಯ ರೈತನನ್ನು ತನ್ನ ಅಭಿಪ್ರಾಯ ತಿಳಿಸಲು ಹೇಳಿದಾಗ ಆ ರೈತ ಮಾಧ್ಯಮಕ್ಕೆ ನೀಡಿದ ಉತ್ತರ ಹೀಗಿತ್ತು. ಕೇಂದ್ರ ಮತ್ತು ರಾಜ್ಯ ಸರ್ಕಾರ ಕುರಿತು 'ಕುರುಡುಗಣ್ಣಿಗಿಂತ ಮೆಳ್ಳಗಣ್ಣು ವಾಸಿ' ಎಂಬ ಗಾಧೆ ಮಾತು ಉಲ್ಲೇಖಿಸಿ ಆ ರೈತ ಅಭಿಪ್ರಾಯ ವ್ಯಕ್ತಪಡಿಸಿದರು. ಸರ್ಕಾರಗಳ ಬಗ್ಗೆ ಸಾಮಾನ್ಯ ರೈತನಿಗಿರುವ ಜ್ಞಾನ ಕಂಡು ನನಗೆ ಆಶ್ಚರ್ಯವಾಯಿತು. ಅಂದರೆ, 'ದುಷ್ಟ ಸರ್ಕಾರಗಳಿಗಿಂತ, ಕೆಟ್ಟ(ದಿಟ್ಟ) ಸರ್ಕಾರ' ಮೇಲೂ ಎಂಬ ಭಾವನೆ ನನ್ನಲ್ಲಿ ಮೂಡಿತು ಎಂದರು.

ಈ ಹಿಂದೆ ನೆಹರು ಪ್ರದಾನ ಮಂತ್ರಿ ಆಗಿದ್ದಾಗ ಲೋಹಿಯಾ ವಿಪಕ್ಷದಲ್ಲಿದ್ದರು. ಆ ಸಂದರ್ಭದಲ್ಲಿ ನೆಹರು ಅವರನ್ನು ಲೋಹಿಯಾ ಟೀಕಿಸಿದಷ್ಟು ಬೇರೆ ಯಾರು ಟೀಕಿಸಿರಲಿಲ್ಲ. ಒಮ್ಮೆ ಲೋಹಿಯಾ ಲೋಕಸಭಾ ಚುನಾವಣೆಯಲ್ಲಿ ಸೋತಿದ್ದರು. ಆಗ ನೆಹರು ಸಂಸತ್ತಿನಲ್ಲಿ ಎದ್ದು ನಿಂತು ಈ ಬಾರಿ ಚುನಾವಣೆಯಲ್ಲಿ ಲೋಹಿಯಾ ಸೋತಿದ್ದಾರೆ ಇಂದಿನ ಲೋಕಸಭೆ ಅಪೂರ್ಣಗೊಂಡಿದೆ ಎಂದು ಬೇಸರ ವ್ಯಕ್ತಪಡಿಸಿದ ಸಂದರ್ಭವನ್ನು ವಿವರಿಸಿದರು.

ಸರ್ವಾಧಿಕಾರಿ ಲಕ್ಷಣ: ಹಲವು ಕಾರ್ಯಕ್ರಮಗಳಲ್ಲಿ ಆಯೋಜಕರು ವೇದಿಕೆ ಕೇಂದ್ರೀಕರಿಸಿ, ಹೈ ಪವರ್ ಲೈಟ್‌ಗಳನ್ನು ಅಳವಡಿಸುತ್ತಾರೆ. ಈ ರೀತಿ ಅಳವಡಿಕೆ ಮಾಡುವುದರಿಂದ ವೇದಿಕೆ ಕೆಳಗೆ ಇರುವವರು ಭಾಷಣಕಾರರಿಗೆ ಕಾಣುವುದಿಲ್ಲ. ಓರ್ವ ಭಾಷಣಕಾರರಿಗೆ ವೇದಿಕೆ ಮೇಲೆ, ವೇದಿಕೆ ಕೆಳಗೆ ಇರುವ ಸಭಿಕರು ಕಾಣಬೇಕು. ಜನರನ್ನು ನೋಡಿ ಭಾಷಣ ಮಾಡಿದರೆ, ಪ್ರಜಾಪ್ರಭುತ್ವ, ಜನರರನ್ನು ನೋಡದೇ ಭಾಷಣ ಮಾಡುವುದು ಸರ್ವಾಧಿಕಾರ ಲಕ್ಷಣ. ಹಾಗಾಗಿ ಆಯೋಜಕರು ಮುಂದಿನ ಕಾರ್ಯಕ್ರಮಗಳಲ್ಲಿ ಇಂತಹ ತಪ್ಪುಗಳು ಆಗದಂತೆ ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಆಡಳಿತಗಾರರನಿಗೆ ಸಮಚಿತ್ತ ಮುಖ್ಯ: ಈ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಭಿಕರ ಮೊದಲನೇ ಸಾಲಿನಲ್ಲಿ ಉಪಸ್ಥಿತರಿದ್ದು, ನಾವು ಮಾತನಾಡುವ ಪ್ರತಿಯೊಂದು ಮಾತನ್ನು ಆಲಿಸುತ್ತಿದ್ದಾರೆ. ಏಕೆಂದರೆ, ತಮ್ಮ ಬಗ್ಗೆ ಬಂದಿರುವ ಅಭಿನಂದನಾ ಗ್ರಂಥ ಕುರಿತು ಸಾಹಿತಿಗಳು ಏನು ಮಾತನಾಡುತ್ತಾರೆ ಎಂದು ತದೇಕಚಿತ್ತದಿಂದ ಆಲಿಸುತ್ತಿದ್ದಾರೆ. ಇಂತಹ ಗುಣಗಳನ್ನು ಮಾಜಿ ಮುಖ್ಯಮಂತ್ರಿಗಳಾದ ದೇವರಾಜ ಅರಸು, ಬಂಗಾರಪ್ಪ ಅವರಲ್ಲಿ ಕಾಣಬಹುದಾಗಿತ್ತು ಎಂದು ಕೆಲ ಘಟನೆಗಳನ್ನು ಉಲ್ಲೇಖಿಸಿದ ಅವರು, ಇಂತಹ ಕಾರ್ಯಕ್ರಮದಲ್ಲಿ ವ್ಯಕ್ತಿ ಕುರಿತು 'ಪ್ರಶಂಸೆ' ಮತ್ತು 'ವಿಮರ್ಶೆ' ಮಾತುಗಳು ಬರುತ್ತವೆ. ಆಗ ನಮ್ಮ ಮಾತುಗಳನ್ನು ಸಮಚಿತ್ತದಿಂದ ಆಲಿಸುವುದು ಒಳ್ಳೆಯ ಆಡಳಿತಗಾರನ ಲಕ್ಷಣ ಎಂದು ಅಭಿಪ್ರಾಯಪಟ್ಟರಲ್ಲದೆ, ಮೊದಲ ಬಾರಿಗೆ ಸಿದ್ದರಾಮಯ್ಯ ಮುಖ್ಯಮಂತ್ರಿಗಳಾಗಿದ್ದಾಗ ಅವರ ಕಚೇರಿಗೆ ನನ್ನನ್ನು ಕರೆಸಿಕೊಂಡು ಸಿದ್ದರಾಮಯ್ಯ ಕುಶಲೋಪರಿ ಮಾತನಾಡಿಸಿದರು. ಆ ವೇಳೆ ಉಚಿತ ಅಕ್ಕಿ ಕೊಡುವ ಯೋಜನೆಗೆ ಹೆಸರು ಸೂಚಿಸುವಂತೆ ಮನವಿ ಮಾಡಿದರು. ಆ ತಕ್ಷಣ ನಾನು 'ಅನ್ನಭಾಗ್ಯ' ಹೆಸರು ಸೂಚಿಸಿದ್ದೆ. ಆ ಹೆಸರು ಅನ್ನಭಾಗ್ಯ ಹೆಸರಿನಲ್ಲಿ ಜನಪ್ರಿಯವಾದ ಪ್ರಸಂಗವನ್ನು ವಿವರಿಸಿದರು.

ವೇದಿಕೆಯಲ್ಲಿ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಚಾಮರಾಜ ನಗರ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್, ಹಿರಿಯ ಸಾಹಿತಿ ಪ್ರೊ.ಸಿ.ನಾಗಣ್ಣ, ತಮಿಳುನಾಡು ರಾಷ್ಟ್ರೀಯ ವಿದ್ಯುತ್ ಒಕ್ಕೂಟದ ಅಧ್ಯಕ್ಷ ಹಾಗೂ ಮಾಜಿ ಶಾಸಕ ಕೆ.ಎ.ಮನೋಹರನ್, ಶಾಸಕರಾದ ಕೆ.ಹರೀಶ್ ಗೌಡ, ಎಂ.ಆರ್.ಮಂಜುನಾಥ್, ಅನಿಲ್ ಚಿಕ್ಕಮಾದು, ಡಾ.ತಿಮ್ಮಯ್ಯಮ, ಡಿ.ರವಿ ಶಂಕರ್, ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷ ಡಾ.ಪುಷ್ಪಾ ಅಮರ್‌ನಾಥ್ ಸೇರಿದಂತೆ ಅನೇಕರಿದ್ದರು.

ಮೈಸೂರು ಮಿತ್ರ ಗುರುವಾರ 28 ಮಾರ್ಚ್ 2024

ಪ್ರತಾಪ್ ಸಿಂಹಗೆ ರಾಜ್ಯ ರಾಜಕಾರಣದಲ್ಲಿ ಉಜ್ವಲ ಭವಿಷ್ಯವಿದೆ

• ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿಕೆ • ಮಡಿಕೇರಿಯಲ್ಲಿ ಕಾರ್ಯಕರ್ತರ ಸಮಾವೇಶ



ಮಡಿಕೇರಿಯಲ್ಲಿ ನಡೆದ ಬಿಜೆಪಿ ಕಾರ್ಯಕರ್ತರ ಸಮಾವೇಶದಲ್ಲಿ ಬಿ.ವೈ.ವಿಜಯೇಂದ್ರ ಅವರನ್ನು ಸನ್ಮಾನಿಸಿ ಕೊಡಗಿನ ಸಾಂಪ್ರದಾಯಿಕ ಒಡಿಕತ್ತಿ ನೀಡಲಾಯಿತು.

ಮಡಿಕೇರಿ, ಮಾ.27–ಸಂಸದ ಪ್ರತಾಪ ಸಿಂಹ ಅವರಿಗೆ ಈ ಬಾರಿ ಟಿಕೆಟ್ ಕೈ ತಪ್ಪಿತು ಎನ್ನುವ ಭಾವನೆ ಬೇಡ. ರಾಜ್ಯ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷರಾಗಿ ಪಕ್ಷ ಸಂಘಟನೆ ಮಾಡಿರುವ ಪ್ರತಾಪ ಸಿಂಹ ಅವರಿಗೆ ರಾಜ್ಯ ರಾಜಕಾರಣದಲ್ಲಿ ಉಜ್ವಲ ಭವಿಷ್ಯವಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ನಗರದ ಕ್ರಿಸ್ಟಲ್ ಹಾಲ್ ಸಭಾಂಗಣದಲ್ಲಿ ಬುಧವಾರ ಏರ್ಪಡಿಸಿದ್ದ ಕೊಡಗು ಜಿಲ್ಲಾ ಬಿಜೆಪಿ ಕಾರ್ಯಕರ್ತರ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ತೀರ್ಮಾನದಂತೆ ಮೈಸೂರು–ಕೊಡಗು ಕ್ಷೇತ್ರಕ್ಕೆ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಭ್ಯರ್ಥಿಯಾಗಿ ಘೋಷಿಸಲಾಗಿದೆ. ಮೈಸೂರು ರಾಜ ಮನೆತನ ಹತ್ತು ಹಲವು ಅಭಿವೃದ್ಧಿಗೆ ಕಾರಣವಾಗಿದ್ದು, ಅವರ ವಂಶದ ಕುಡಿಯಾಗಿರುವ ಯದುವೀರ್ ಅವರು ಈ ಬಾರಿ ಮೈಸೂರು–ಕೊಡಗು ಕ್ಷೇತ್ರದಿಂದ ದಾಖಲೆಯ 2 ಲಕ್ಷ ಮತಗಳ ಅಂತರದ ಅಭೂತಪೂರ್ವ ಗೆಲುವು ದಾಖಲಿಸಲಿದ್ದಾರೆ ಎಂದರು.

ಭಾರತ ಐದನೇ ಆರ್ಥಿಕ ಶಕ್ತಿ: ಕಳೆದ ಒಂದು ದಶಕಗಳ ಅವಧಿಯಲ್ಲಿನ ಪ್ರಧಾನಿ ಮೋದಿ ಅವರ ಆಡಳಿತದಿಂದ ದೇಶಕ್ಕೆ ಉಜ್ವಲ ಭವಿಷ್ಯದ ಭರವಸೆಗಳಿದ್ದು, ಭಾರತ ವಿಶ್ವದ 5ನೇ ಸದೃಢ ಆರ್ಥಿಕ ಶಕ್ತಿಯಾಗಿ ಹೊರ ಹೊಮ್ಮುತ್ತಿದೆ. ಭಾರತಕ್ಕೆ ಭವಿಷ್ಯವೇ ಇಲ್ಲವೇನೋ ಎನ್ನುವಂತಹ ಸಂದರ್ಭದಲ್ಲಿ 2014ರ ಲೋಕಸಭಾ ಚುನಾವಣೆಯಲ್ಲಿ ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವಂತಾಯಿತು. ಕೇಂದ್ರದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರಲಿದ್ದು, ನರೇಂದ್ರ ಮೋದಿ ಮೂರನೇ ಬಾರಿ ಪ್ರಧಾನಿಯಾಗುವುದು ಸೂರ್ಯ–ಚಂದ್ರರಷ್ಟೇ ಸತ್ಯ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಇತರೆ ರಾಜಕೀಯ ಪಕ್ಷಗಳು ಮತ್ತು ರಾಜಕಾರಣಿಗಳು 'ಚುನಾವಣೆ'ಯ ಬಗ್ಗೆಯಷ್ಟೇ ಲಕ್ಷ್ಯ ವಹಿಸುತ್ತಾರೆ. ಆದರೆ, ದೂರದೃಷ್ಟಿಯನ್ನಿರಿಸಿಕೊಂಡು ಕಾರ್ಯನಿರ್ವಹಿಸುತ್ತಿರುವ ಮೋದಿ ಅವರು ಚುನಾವಣೆಯ ಬದಲಾಗಿ 2047ಕ್ಕೆ ರಾಷ್ಟ್ರವನ್ನು 'ವಿಕಸಿತ ಭಾರತ'ವನ್ನಾಗಿ ರೂಪಿಸುವ ಅಭಿವೃದ್ಧಿಯ ವಿಶಾಲ ಚಿಂತನೆಯನ್ನು ಹೊಂದಿದ್ದಾರೆ. ಅವರ ಜನಪ್ರಿಯತೆ ದೇಶದಾದ್ಯಂತ ಇಂದಿಗೂ ಒಂದಿಂಚಿನಷ್ಟು ಕಡಿಮೆಯಾಗಿಲ್ಲ ಎಂದು ತಿಳಿಸಿದರು.

ಮೈ ಮರೆಯದಿರಿ

ಕಳೆದ ಎರಡು ಬಾರಿ ಮೈಸೂರು–ಕೊಡಗು ಕ್ಷೇತ್ರವನ್ನು ಪ್ರತಿನಿಧಿಸಿರುವ ನಾನು, ತನ್ನ ಸಾಮರ್ಥ್ಯಕ್ಕೂ ಮಿಗಿಲಾಗಿ ಅಭಿವೃದ್ಧಿ ಕಾರ್ಯ ಮಾಡಿದ್ದೇನೆ. ಈ ಬಾರಿ ಸ್ಪರ್ಧೆಗೆ ಅವಕಾಶ ದೊರಕಿಲ್ಲವಾದರೂ, ನಾನು ಕಾರ್ಯಕರ್ತರೊಂದಿಗೆ ಬೆರೆತು ಪಕ್ಷ ಕಟ್ಟುವ ಕಾರ್ಯದಲ್ಲಿ ನಿರಂತರವಾಗಿ ತೊಡಗಿಸಿಕೊಳ್ಳುತ್ತೇನೆ ಎಂದು ಸಂಸದ ಪ್ರತಾಪ ಸಿಂಹ ತಿಳಿಸಿದರು.

ಕೇಂದ್ರ ಸರ್ಕಾರದ ಯೋಜನೆಗಳನ್ನು ಪ್ರತಿ ಮನೆ ಬಾಗಿಲಿಗೆ ತಲುಪಿಸುವ ಮೂಲಕ ಜನರ ಮನ ಗೆಲ್ಲುವ ಕೆಲಸವನ್ನು ಕಾರ್ಯಕರ್ತರು ಮಾಡಬೇಕಾಗಿದ್ದು, ಈ ಕಾರ್ಯ ನಡೆಸುವಲ್ಲಿ ಎಂದಿಗೂ ಮೈ ಮರೆಯದಿರಿ ಎಂದರು.

ಮಾಜಿ ಸಚಿವ ರಾಮದಾಸ್ ಮಾತನಾಡಿ, ಪ್ರಧಾನಿ ಮೋದಿ ಅವರ ಸಾಧನೆಗಳನ್ನು ಜನರಿಗೆ ಮುಟ್ಟಿಸುವ ಮೂಲಕ, ಜನರ ಒಲವನ್ನು ಮತಗಳನ್ನಾಗಿ ಪರಿವರ್ತಿಸಲು ಪಕ್ಷದ ಕಾರ್ಯಕರ್ತರು ಶ್ರಮಿಸುವಂತೆ ಮನವಿ ಮಾಡಿದರು.

ಏ.3ಕ್ಕೆ ನಾಮಪತ್ರ ಸಲ್ಲಿಕೆ

ನಾನು ಏ.3ರಂದು ನಾಮಪತ್ರ ಸಲ್ಲಿಸುತ್ತೇನೆ. ಈ ವೇಳೆ ಕೊಡಗಿನ ಬಿಜೆಪಿ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಮೈಸೂರಿಗೆ ಆಗಮಿಸಿ ಬೆಂಬಲ ಸೂಚಿಸಬೇಕು ಎಂದು ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮನವಿ ಮಾಡಿದರು.

ಕಾವೇರಿಯ ನಾಡಿನಲ್ಲಿ ಸ್ಪರ್ಧಿಸುವ ಅಪೂರ್ವ ಅವಕಾಶ ನನಗೆ ದೊರೆತಿದೆ. ನಾನು ಇಲ್ಲಿನ ಕಾರ್ಯಕರ್ತರ ಜೊತೆಗಿರುತ್ತೇನೆ. ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದಂತೆ ಮಡಿಕೇರಿ ಮತ್ತು ಮೈಸೂರಿನ ನನ್ನ ಕಚೇರಿಗಳಲ್ಲಿ ಕಾರ್ಯಕರ್ತರು ಭೇಟಿಯಾಗಬಹುದು ಎಂದು ತಿಳಿಸಿದರು.

ರಾಷ್ಟ್ರದ ಅಖಂಡತೆ ಹಾಳಿರುಳು ಕಾಯುವ ಯೋಧರಂತೆ ಪಕ್ಷದ ಪ್ರತಿಯೊಬ್ಬ ಕಾರ್ಯಕರ್ತರು, ಕೇಂದ್ರದಲ್ಲಿ ಮತ್ತೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು. ದೇಶದ ಭವಿಷ್ಯವನ್ನು ರೂಪಿಸುವ ಈ ಚುನಾವಣೆಯನ್ನು ಪ್ರತಿಯೊಬ್ಬರು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕು ಎಂದು ಮನವಿ ಮಾಡಿದರು.

ಇದೇ ಸಂದರ್ಭ ಬಿಜೆಪಿ ರಾಜ್ಯಾಧ್ಯಕ್ಷರಾದ ಬಳಿಕ ಮೊದಲ ಬಾರಿಗೆ ಜಿಲ್ಲೆಗೆ ಆಗಮಿಸಿದ ಬಿ.ವೈ.ವಿಜಯೇಂದ್ರ ಅವರನ್ನು, ಜಿಲ್ಲಾ ಬಿಜೆಪಿ ವತಿಯಿಂದ ಸನ್ಮಾನಿಸಿ ಕೊಡಗಿನ ಸಾಂಪ್ರದಾಯಿಕ ಒಡಿಕತ್ತಿ ನೀಡಲಾಯಿತು. ಮಾಜಿ ಶಾಸಕರಾದ ಕೆ.ಜಿ.ಬೋಪಯ್ಯ, ಅಪ್ಪಚ್ಚು ರಂಜನ್, ಎಂಎಲ್‌ಸಿ ಸುಜಾ ಕುಶಾಲಪ್ಪ, ಕ್ಷೇತ್ರದ ಪ್ರಭಾರಿಗಳಾದ ಉದಯ ಕುಮಾರ್ ಶೆಟ್ಟಿ, ಮಾಜಿ ಎಂಎಲ್‌ಸಿಗಳಾದ ಸುನಿಲ್ ಸುಬ್ರಮಣಿ, ಎಸ್.ಜಿ.ಮೇದಪ್ಪ, ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ, ಮಾಜಿ ಅಧ್ಯಕ್ಷ ರಾಬಿನ್ ದೇವಯ್ಯ, ರಾಜ್ಯ ಶಿಸ್ತು ಸಮಿತಿ ಸದಸ್ಯೆ ರೀನಾ ಪ್ರಕಾಶ್, ರಾಜ್ಯ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಡಾ.ಬಿ.ಸಿ.ನವೀನ್, ಎಸ್‌ಟಿ ಮೋರ್ಚಾದ ಮಂಜುಳಾ, ಶರಣ್ ಪಾಟೀಲ್ ಹಲ ಪ್ರಮುಖರು ಉಪಸ್ಥಿತರಿದ್ದರು.

ಮಾಜಿ ಶಾಸಕರಿಬ್ಬರ ಜೇಬಿಗೆ ಕನ್ನ



ಮಡಿಕೇರಿ: ಬಿಜೆಪಿ ಕಾರ್ಯಕರ್ತರ ಸಮಾವೇಶದಲ್ಲಿ ಕಳ್ಳರು ಕೈಚಳಕ ತೋರಿದ್ದು, ಮಾಜಿ ಶಾಸಕರಾದ ಅಪ್ಪಚ್ಚು ರಂಜನ್ ಅವರ ಜೇಬಿನಲ್ಲಿದ್ದ 20 ಸಾವಿರ ಹಾಗೂ ಕೆ.ಜಿ.ಬೋಪಯ್ಯ ಅವರ 17 ಸಾವಿರ ರೂ. ಅನ್ನು ಅಪಹರಿಸಿದ ಘಟನೆ ನಡೆಯಿತು.

ಇದೇ ವೇಳೆ ಹಲವರ ಪಿಕ್‌ಪಾಕೆಟ್ ಮಾಡಲಾಗಿದ್ದು, ಕಳ್ಳರು ಲಕ್ಷಕ್ಕೂ ಅಧಿಕ ಹಣ ಲಪಟಾಯಿಸಿದ್ದಾರೆ ಎನ್ನಲಾಗಿದೆ. ಈ ಸಂಬಂಧ ಅಪ್ಪಚ್ಚು ರಂಜನ್ ಮಡಿಕೇರಿ ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಕಾರ್ಯಕ್ರಮದ ಸಭಾಂಗಣವನ್ನು ಪ್ರವೇಶಿಸುವಾಗ ಬಿಜೆಪಿ ಕಾರ್ಯಕರ್ತರು ಸೆಲ್ಫಿ ತೆಗೆದುಕೊಳ್ಳಲು ಮುಗಿ ಬಿದ್ದಿದ್ದಾರೆ. ಈ ವೇಳೆ ಕಳ್ಳರು, ನೂಕುನುಗ್ಗಲು ಸೃಷ್ಟಿಸಿ, ಜೇಬಿನಿಂದ ಹಣ ಕಳ್ಳತನ ಮಾಡಿದ್ದಾರೆ. ಕಾರ್ಯಕ್ರಮ ಮುಗಿದ ಬಳಿಕ ಹೊರ ಬಂದು ಜೇಬು ನೋಡಿದ ಮಾಜಿ ಶಾಸಕರು ಸೇರಿದಂತೆ ಇತರರ ಜೇಬಿನಿಂದ ಹಣ ಕಳ್ಳತನವಾಗಿರುವುದು ಪತ್ತೆಯಾಗಿದೆ.

ಇದೇ ವೇಳೆ ಮಾತನಾಡಿದ ಮಾಜಿ ಶಾಸಕ ಅಪ್ಪಚ್ಚು ರಂಜನ್, ಕಾರ್ಯಕ್ರಮದಲ್ಲಿ ನಾಲ್ಕೈದು ಹೊಸ ಮುಖ ಗಮನಿಸಿದೆ. ಇದು ಹೊರ ಜಿಲ್ಲೆಯಿಂದ ಬಂದ ಕಳ್ಳರ ತಂಡದ ಕೃತ್ಯವಿರಬಹುದು ಎಂದು ಶಂಕೆ ವ್ಯಕ್ತವಾಗಿದೆ ಎಂದು ಹೇಳಿದರು.

ಒಂಟಿ ಸಲಗ ದಾಂಧಲೆ: ವ್ಯಕ್ತಿಗೆ ಗಾಯ



ಬ್ಯಾಡಗೊಟ್ಟದ ಮನೆಯ ಬಾಗಿಲು ಮುರಿದಿರುವ ಒಂಟಿ ಸಲಗ.

ಮಡಿಕೇರಿ, ಮಾ.27–ಕೊಡ್ಲಿಪೇಟೆ ಬಳಿಯ ಬ್ಯಾಡಗೊಟ್ಟದಲ್ಲಿ ಮಂಗಳವಾರ ಸಂಜೆ ಒಂಟಿ ಸಲಗ ದಾಂಧಲೆ ನಡೆಸಿ, ವ್ಯಕ್ತಿಯನ್ನು ಗಾಯಗೊಳಿಸಿದೆ.

ಆನೆ ದಾಳಿಯಿಂದ ಬ್ಯಾಡಗೊಟ್ಟದ ನಿವಾಸಿ ಹಸನಬ್ಬನ ಕಾಲಿಗೆ ಗಂಭೀರ ಗಾಯವಾಗಿದೆ. ಜನವಸತಿ ಪ್ರದೇಶಕ್ಕೆ ಲಗ್ಗೆಇಟ್ಟ ಒಂಟಿ ಸಲಗ ಬ್ಯಾಡಗೊಟ್ಟ ಶಾಲೆಯ ಹಿಂಭಾಗದ ಹಸನಬ್ಬ ಅವರ ಮನೆಯ ಬಾಗಿಲು ಮುರಿದು ಹಾನಿ ಮಾಡಿದೆ. ಈ ವೇಳೆ ಹಸನಬ್ಬ ಅವರ ಕಾಲಿಗೆ ಗಾಯವಾಗಿದೆ. ಸ್ಥಳೀಯರು ಹಸನಬ್ಬನನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ.

ಸ್ಥಳಕ್ಕೆ ಆಗಮಿಸಿದ ಬ್ಯಾಡಗೊಟ್ಟ ಗ್ರಾಮ ಪಂಚಾಯಿತಿ ಅಧ್ಯಕ್ಷ ಮಹಮ್ಮದ್ ಹನೀಫ್, ಅರಣ್ಯ ಅಧಿಕಾರಿಗಳಿಗೆ ಮಾಹಿತಿ ನೀಡಿದರು. ನಂತರ ಸ್ಥಳಕ್ಕಾಗಮಿಸಿದ ಅರಣ್ಯಾಧಿಕಾರಿ ಗೋವಿಂದ್‌ರಾಜ್ ಮತ್ತು ಸಿಬ್ಬಂದಿ ಆನೆಯನ್ನು ಓಡಿಸಿದರು.

ಬಳಿಕ ಶನಿವಾರಸಂತೆ ವಲಯ ಅರಣ್ಯಾಧಿಕಾರಿ ಗಾನವಿ ಮತ್ತು ಸಿಬ್ಬಂದಿ ಸ್ಥಳ ಪರಿಶೀಲನೆ ನಡೆಸಿದ್ದು, ಕಾಡಾನೆ ದಾಳಿಯಿಂದ ಹಾನಿಗೊಳಗಾದ ಮನೆ ಮತ್ತು ಗಾಯಾಳುವಿಗೆ ಸೂಕ್ತ ಪರಿಹಾರ ಕಲ್ಪಿಸುವುದಾಗಿ ಭರವಸೆ ನೀಡಿದರು.

ಪೇರೂರುಬೆಟ್ಟ ಶ್ರೇಣಿಗಳಲ್ಲಿ ಬೆಂಕಿ

ನಾಪೋಕ್ಲು: ಸಮೀಪದ ಬಲ್ಲಮಾವಟ್ಟಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪೇರೂರು ಬೆಟ್ಟ ಶ್ರೇಣಿಗಳಲ್ಲಿ ಮಂಗಳವಾರ ಬೆಂಕಿ ಕಾಣಿಸಿಕೊಂಡು ಮರ–ಗಿಡಗಳು ಸೇರಿದಂತೆ ಸುಮಾರು ನೂರು ಎಕರೆಗೂ ಅಧಿಕ ಅರಣ್ಯ ಪ್ರದೇಶ ಭಸ್ಮವಾಗಿದೆ.

ಬಿಸಿಲಿನ ಝಳ ಹೆಚ್ಚುತ್ತಿರುವುದರಿಂದ ಅಲ್ಲಲ್ಲಿ ಆಕಸ್ಮಿಕ ಬೆಂಕಿ ಸಂಭವಿಸುತ್ತಿದ್ದು, ಬೆಟಗಳ ಶ್ರೇಣಿಯಲ್ಲಿ ರಸ್ತೆ ಸೌಲಭ್ಯ ಇಲ್ಲದಿರುವುದರಿಂದ ಅಗ್ನಿಶಾಮಕ ದಳದ ಸಿಬ್ಬಂದಿ ತೆರಳಲು ಸಾಧ್ಯವಾಗದೆ ಅರಣ್ಯ ಪ್ರದೇಶ ಸುಟ್ಟುಹೋಗಿದೆ.ಅರಣ್ಯ ಸಿಬ್ಬಂದಿ ಬುಧವಾರ ತೆರಳಿದ್ದು ಬೆಂಕಿ ನಂದಿಸುವ ಪ್ರಯತ್ನದಲ್ಲಿ ತೊಡಗಿದ್ದಾರೆ.



ಆಟೋ ಚರಂಡಿಗೆ ಬಿದ್ದು ಇಬ್ಬರಿಗೆ ಗಂಭೀರ ಗಾಯ



ಆಟೋ ರಸ್ತೆಬದಿಯ ಮನೆಯ ತಡೆಗೋಡೆಗೆ ಡಿಕ್ಕಿಯಾಗಿ ಚರಂಡಿಗೆ ಉರುಳಿರುವುದು.

ಮಡಿಕೇರಿ, ಮಾ.27–ಚಾಲಕನ ನಿಯಂತ್ರಣ ತಪ್ಪಿ ಆಟೋ ರಸ್ತೆಬದಿಯ ಚರಂಡಿಗೆ ಬಿದ್ದ ಪರಿಣಾಮ ಇಬ್ಬರು ಗಂಭೀರವಾಗಿ ಗಾಯಗೊಂಡ ಘಟನೆ ಪೊನ್ನಂಪೇಟೆಯ ಕಲ್ಲುಕೋರೆಯಲ್ಲಿ ಮಂಗಳವಾರ ರಾತ್ರಿ ಸಂಭವಿಸಿದೆ.

ಗೋಣಿಕೊಪ್ಪಲಿನ ಆಟೋ ಚಾಲಕ ರಿಜು ಮತ್ತು ಆತನ ಸ್ನೇಹಿತ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ.

ಆಟೋ ಚಾಲಕ ರಿಜು ಬಾಡಿಗೆಗೆಂದು ಕುಟ್ಟ ಗ್ರಾಮಕ್ಕೆ ತೆರಳಿ ಹಿಂತಿರುಗಿ ವಾಪಸ್ ಬರುವಾಗ ಮಧ್ಯರಾತ್ರಿ ಒಂದೂವರೆ ಗಂಟೆಯಲ್ಲಿ ಪೊನ್ನಂಪೇಟೆಯ ಕಲ್ಲು ಕೋರೆ ಬಳಿ ನಿಯಂತ್ರಣ ತಪ್ಪಿ ಆಟೋ ರಸ್ತೆಬದಿಯ ಮನೆಯೊಂದರ ತಡೆಗೋಡೆಗೆ ಡಿಕ್ಕಿಯಾಗಿ, ಚರಂಡಿಗೆ ಉರುಳಿದೆ. ಪರಿಣಾಮ ಚಾಲಕ ರಿಜು ಮತ್ತು ಆತನ ಸ್ನೇಹಿತ ಗಂಭೀರವಾಗಿ ಗಾಯಗೊಂಡಿದ್ದಾರೆ. ಗೋಣಿಕೊಪ್ಪಲಿನ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿದ ಬಳಿಕ ಮೈಸೂರಿನ ಆಸ್ಪತ್ರೆಗೆ ಕರೆದೊಯ್ಯಲಾಗಿದೆ.

ಕುಮಟೂರಿನಲ್ಲಿ ಹುಲಿ ದಾಳಿಗೆ ಕರು ಬಲಿ



ಮಡಿಕೇರಿ: ಗದ್ದೆಯಲ್ಲಿ ಮೇಯಲು ಬಿಟ್ಟಿದ್ದ ಕರುವಿನ ಮೇಲೆ ಹುಲಿ ದಾಳಿ ನಡೆಸಿ ಕೊಂದು ಹಾಕಿರುವ ಘಟನೆ ಪೊನ್ನಂಪೇಟೆ ತಾಲೂಕಿನ ಶ್ರೀಮಂಗಲ ಹೋಬಳಿಯ ಕುಮಟೂರು ಗ್ರಾಮದಲ್ಲಿ ಮಂಗಳವಾರ ಸಂಜೆ ನಡೆದಿದೆ.

ಕುಮಟೂರು ಗ್ರಾಮದ ಕಳ್ಳೇಂಗಡ ಎಂ. ಪೂವಯ್ಯ ಎಂಬುವರಿಗೆ ಸೇರಿದ ಸುಮಾರು 30 ಸಾವಿರ ರೂ. ಬೆಲೆಬಾಳುವ 2 ವರ್ಷದ ಗಂಡು ಕರು ಹುಲಿಗೆ ಬಲಿಯಾಗಿದೆ.

ಪಕ್ಕದ ಮನೆಯ ಕಾಳಮಾಡ ವಾಸು, ಕರು ಜೋರಾಗಿ ಕೂಗಿದ ಶಬ್ದ ಕೇಳಿ ಮನೆಯಿಂದ ಹೊರ ಬಂದು ನೋಡಿದಾಗ ಕರುವಿನ ಮೇಲೆ ಹುಲಿ ದಾಳಿ ಮಾಡುತ್ತಿರುವುದು ಕಂಡಿದ್ದಾರೆ. ನಂತರ ಪಟಾಕಿ ಸಿಡಿಸಿದ್ದರಿಂದ ಪಕ್ಕದ ಕಳ್ಳೇಂಗಡ ಸುರೇಶ್ ಅವರ ಕಾಫಿ ತೋಟಕ್ಕೆ ಕರುವನ್ನು ಎಳೆದೊಯ್ದಿದೆ. ಕರುವಿನ ಅರ್ಧ ಭಾಗದಷ್ಟು ದೇಹವನ್ನು ತಿಂದು ಹಾಕಿದೆ. ಬುಧವಾರ ಅರಣ್ಯ ಅಧಿಕಾರಿಗಳು ಮತ್ತು ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಕರುವನ್ನು ಬಲಿಪಡೆದ ಜಾಗದಲ್ಲಿ ಹುಲಿಯ ಚಲನವಲನ ಕಂಡು ಹಿಡಿಯಲು ಟ್ರ್ಯಾಪಿಂಗ್ ಕ್ಯಾಮರಾ ಅಳವಡಿಸಲಾಗಿದೆ. ಹುಲಿ ಸೆರೆಗೆ ಕಾರ್ಯಾಚರಣೆಗೆ ಅರಣ್ಯ ಇಲಾಖೆ ಮುಂದಾಗಿದೆ. ಶ್ರೀಮಂಗಲದ ಪಶು ವೈದ್ಯಾಧಿಕಾರಿ ಗಿರೀಶ್ ಕರುವಿನ ಕಳೇಬರದ ಮರಣೋತ್ತರ ಪರೀಕ್ಷೆ ನಡೆಸಿದರು.

ಕುಟ್ಟ ಉಪವಲಯ ಅರಣ್ಯಾಧಿಕಾರಿಗಳಾದ ಮಂಜುನಾಥ್, ಕೆ.ಜೆ.ದಿವಾಕರ್, ಗುರುನಾಥ್, ಆರ್‌ಆರ್‌ಟಿ ತಂಡದ ಹರೀಶ್, ಸುಬ್ರಮಣಿ, ರಂಜಿತ್, ಸಂಜಯ್, ವಿನು, ಭವನ ಮತ್ತಿತರರು ಉಪಸ್ಥಿತರಿದ್ದರು.

ಘೋಷಣೆಗೂ ಮುನ್ನ ಪುತ್ರನ ಪರ ಹೆಚ್‌ಸಿಎಂ ಪ್ರಚಾರ

ಮಾಜಿ ಶಾಸಕರ ಭೇಟಿ, ಜಿಲ್ಲಾ ಕಾಂಗ್ರೆಸ್ ಮುಖಂಡರ ಸಭೆ



ಕೊಳ್ಳೇಗಾಲ ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ ಅವರ ನಿವಾಸಕ್ಕೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ತಮ್ಮ ಪುತ್ರ ಸುನೀಲ್ ಬೋಸ್‌ನೊಂದಿಗೆ ಭೇಟಿ ನೀಡಿದರು. ಶಾಸಕ ಎ.ಆರ್.ಕೃಷ್ಣಮೂರ್ತಿ, ಮಾಜಿ ಶಾಸಕ ಜಯಣ್ಣ ಇದ್ದರು.

ಚಾಮರಾಜನಗರ, ಮಾ.27– ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಯಾರೆಂಬುದನ್ನು ಪಕ್ಷದ ವರಿಷ್ಠರು ಇನ್ನೂ ಅಧಿಕೃತವಾಗಿ ಘೋಷಣೆ ಮಾಡಿಲ್ಲ. ಆದರೂ ಕ್ಷೇತ್ರದಲ್ಲಿ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಅವರ ಪುತ್ರ ಸುನೀಲ್‌ಬೋಸ್ ಪರವಾಗಿ ಪ್ರಚಾರ ಪ್ರಾರಂಭಿಸಿದ್ದಾರೆ.

ಕ್ಷೇತ್ರ ವ್ಯಾಪ್ತಿಯ ಯಳಂದೂರು ಮತ್ತು ಕೊಳ್ಳೇಗಾಲ ತಾಲೂಕು ಕೇಂದ್ರಕ್ಕೆ ಬುಧವಾರ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಪುತ್ರ ಸುನೀಲ್ ಬೋಸ್ ಭೇಟಿ ನೀಡಿ, ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರ ಸಭೆ ನಡೆಸಿದರು. ಚುನಾವಣೆಯಲ್ಲಿ ಬೆಂಬಲ ನೀಡುವಂತೆ ಮನವಿ ಮಾಡಿರುವುದು ರಾಜಕೀಯ ವಲಯದಲ್ಲಿ ವ್ಯಾಪಕ ಚರ್ಚೆಗೆ ಕಾರಣವಾಗಿದೆ.

ಬೋಸ್‌ಗೆ ಟಿಕೆಟ್: ಚಾಮರಾಜನಗರ ಕ್ಷೇತ್ರದಿಂದ ಮಹದೇವಪ್ಪ ಅವರನ್ನು ಕಣಕ್ಕಿಳಿಸಲು ಹೈಕಮಾಂಡ್ ಸೂಚಿಸಿತ್ತು. ಆದರೆ, ಅವರು ನಾನಂತೂ ಸ್ಪರ್ಧಿಸುವುದಿಲ್ಲ. ಕೊಟ್ಟರೆ ನನ್ನ ಮಗನಿಗೆ ಟಿಕೆಟ್ ಕೊಡಿ ಎಂದು ಪಟ್ಟು ಹಿಡಿದಿದ್ದರು. ಇದಕ್ಕೆ ಹೈಕಮಾಂಡ್ ಮಣಿದಿದೆ ಎನ್ನಲಾಗಿದೆ. ಸುನೀಲ್ ಬೋಸ್‌ಗೆ ಟಿಕೆಟ್ ದೊರೆತಿರುವುದು ಹೈಕಮಾಂಡ್‌ನಿಂದ ಅಧಿಕೃತವಾಗಿ ಪ್ರಕಟವಾಗಬೇಕಾಗಿದೆ. ಆದರೆ, ಅದಕ್ಕೂ ಮುನ್ನವೇ ಪ್ರಚಾರ ಕಾರ್ಯ ಆರಂಭಿಸಿರುವುದು ಕುತೂಹಲ ಮೂಡಿಸಿದೆ.

ಏ.3ರಂದು ನಾಮಪತ್ರ ಸಲ್ಲಿಕೆ: ಸುನೀಲ್ ಬೋಸ್ ಕಾಂಗ್ರೆಸ್ ಅಭ್ಯರ್ಥಿಯಾಗಿ ಏ.3ರಂದು ನಗರದಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರ ನೇತೃತ್ವದಲ್ಲಿ ನಾಮಪತ್ರ ಸಲ್ಲಿಸಲಿದ್ದಾರೆ ಎಂದು ಮೈಸೂರು ಕಾಂಗ್ರೆಸ್‌ನ ಗ್ರಾಮಾಂತರ ಜಿಲ್ಲಾ ಘಟಕದಿಂದ ವೇಳಾಪಟ್ಟಿಯನ್ನೂ ಬಿಡುಗಡೆ ಮಾಡಲಾಗಿದೆ. ಸುನೀಲ್ ಬೋಸ್ ಚಾಮರಾಜನಗರದಿಂದ ಸ್ಪರ್ಧಿಸುವುದು ಖಚಿತವಾಗಿದೆ. ಅವರು ಏ.3ರಂದು ನಾಮಪತ್ರ ಸಲ್ಲಿಸಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್‌ಸೇಠ್, ಸಚಿವರಾದ ಡಾ.ಎಚ್.ಸಿ. ಮಹದೇವಪ್ಪ, ಕೆ.ವೆಂಕಟೇಶ್ ಹಾಗೂ ಸಂಬಂಧಿತ ಕ್ಷೇತ್ರದ ಶಾಸಕರ ಪೂರ್ವಾನುಮತಿ ಪಡೆದು ವೇಳಾಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ ಎಂದು ಮೈಸೂರು ಗ್ರಾಮಾಂತರ ಜಿಲ್ಲಾಧ್ಯಕ್ಷ ಬಿ.ಜೆ.ವಿಜಯ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏ.3ರಂದು ಬಿಜೆಪಿ ಅಭ್ಯರ್ಥಿಯೂ ನಾಮಪತ್ರ ಸಲ್ಲಿಕೆ: ಚಾಮರಾಜನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಅಭ್ಯರ್ಥಿ ಎಸ್.ಬಾಲರಾಜು ಅವರು ಏ.3ರಂದು ನಾಮಪತ್ರ ಸಲ್ಲಿಸಲಿದ್ದಾರೆ. ಅಂದು ಬಿಜೆಪಿ ರಾಜ್ಯ ವರಿಷ್ಠರು, ಜಿಲ್ಲಾ ಮುಖಂಡರು ಹಾಗೂ ಕಾರ್ಯಕರ್ತರ ನೇತೃತ್ವದಲ್ಲಿ ಬಾಲರಾಜು ನಾಮಪತ್ರ ಸಲ್ಲಿಕೆಗೆ ಸಿದ್ಧತೆ ಕೈಗೊಂಡಿದ್ದಾರೆ.

ಸಚಿವ ಮಹದೇವಪ್ಪ ಕೊಳ್ಳೇಗಾಲದಲ್ಲಿ ಸರಣಿ ಸಭೆ

ಕೊಳ್ಳೇಗಾಲ: ಕೊಳ್ಳೇಗಾಲದಲ್ಲಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ತಮ್ಮ ಪುತ್ರ ಸುನೀಲ್ ಬೋಸ್‌ನೊಂದಿಗೆ ಮಾಜಿ ಶಾಸಕರ ನಿವಾಸದಲ್ಲಿ ಕಾಂಗ್ರೆಸ್ ಮುಖಂಡರನ್ನು ಭೇಟಿ ಮಾಡಿ, ಸರಣಿ ಸಭೆ ನಡೆಸಿದರು.

ಮೊದಲು ಪಟ್ಟಣದ ಅಂಬೇಡ್ಕರ್ ಪುತ್ಥಳಿಗೆ ನಮಸ್ಕರಿಸಿ, ಬಳಿಕ ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ ಅವರ ನಿವಾಸಕ್ಕೆ ಭೇಟಿ ನೀಡಿ, ಪ್ರತ್ಯೇಕ ಸಭೆ ನಡೆಸುವ ಮೂಲಕ ಸಂಧಾನ ನಡೆಸಿದರು. ಬಳಿಕ ಮಾಜಿ ಶಾಸಕ ನರೇಂದ್ರ ನಿವಾಸಕ್ಕೆ ತೆರಳಿ ಸಭೆ ನಡೆಸಿದರು. ಇದೇ ವೇಳೆ ಶಾಸಕ ಎ.ಆರ್.ಕೃಷ್ಣಮೂರ್ತಿ, ಮಾಜಿ ಶಾಸಕ ಜಯಣ್ಣ, ಮುಖಂಡರದ ಮರಿಸ್ವಾಮಿ, ಮುಡಿಗುಂಡ ಶಾಂತು, ಬೀಮನಗರ ರಮೇಶ್, ಓಲೆಮಹದೇವು, ಚಿನ್ನಸ್ವಾಮಿ ಮಾಳಿಗೆ, ಸ್ವಾಮಿ ನಂಜಪ್ಪ ಇನ್ನಿತರಿದ್ದರು.

ಇಂದಿನಿಂದ ನಾಮಪತ್ರ; ನಿಷೇಧಾಜ್ಞೆ



ಚಾಮರಾಜನಗರ, ಮಾ.27–ಲೋಕಸಭಾ ಸಾರ್ವತ್ರಿಕ ಚುನಾವಣೆಗೆ ಮಾ.28 ರಿಂದ ನಾಮಪತ್ರ ಸಲ್ಲಿಕೆಯಾಗಲಿದ್ದು, ಈ ಹಿನ್ನೆಲೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿ ಕಚೇರಿ ಆವರಣದ 100 ಮೀ. ವ್ಯಾಪ್ತಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾ ಚುನಾವಣಾಧಿಕಾರಿ ಶಿಲ್ಪನಾಗ್ ಆದೇಶಿಸಿದ್ದಾರೆ.

ಮಾ.28ರ ಬೆಳಗ್ಗೆ 6 ಗಂಟೆಯಿಂದ ಏ.9ರ ಬೆಳಗ್ಗೆ 6 ಗಂಟೆ ವರೆಗೆ ನಿಷೇಧಾಜ್ಞೆ ಜಾರಿಯಲ್ಲಿದ್ದು, ಮೆರವಣಿಗೆ ಅಥವಾ 5ಕ್ಕಿಂತ ಹೆಚ್ಚು ಜನರು ಗುಂಪು ಸೇರುವಾಗಿಲ್ಲ. ಶಸ್ತ್ರ, ಬಡಿಗೆ, ಬರ್ಜಿ, ಖಡ್ಗ, ಗದೆ, ಬಂದೂಕು, ಚೂರಿ, ಲಾಠಿ, ದೊಣ್ಣೆ ಚಾಕು ಅಥವಾ ದೇಹಕ್ಕೆ ಅಪಾಯವನ್ನು ಉಂಟು ಮಾಡುವ ಯಾವುದೇ ಮಾರಕಾಸ್ತ್ರಗಳೊಂದಿಗೆ ತಿರುಗಾಡುವುದನ್ನು ನಿರ್ಬಂಧಿಸಲಾಗಿದೆ.

ಕಲ್ಲುಗಳು, ಸ್ಫೋಟಕ ವಸ್ತುಗಳು ಸೇರಿದಂತೆ ಯಾವುದೇ ವಸ್ತುಗಳನ್ನು ತೆಗೆದುಕೊಂಡು ಹೋಗುವುದು ಹಾಗೂ ಶೇಖರಿಸುವುದನ್ನು ನಿಷೇಧಿಸಲಾಗಿದೆ. ಜಿಲ್ಲಾಧಿಕಾರಿ ಕಚೇರಿ ಆವರಣದ 100 ಮೀ. ವ್ಯಾಪ್ತಿಯಲ್ಲಿ ಬಹಿರಂಗವಾಗಿ ಘೋಷಣೆ ಮಾಡುವುದು, ಪದ ಹಾಡುವುದು, ವಾದ್ಯ ಬಾರಿಸುವುದು, ವ್ಯಾಖ್ಯಾನ ಕೊಡುವುದು, ಸನ್ನೆ ಅಥವಾ ನಕಲಿ ಪ್ರದರ್ಶಿಸಬಾರದು.

ಈ ನಿಯಮಗಳನ್ನು ಉಲ್ಲಂಘಿದರೆ ಅಂತಹ ವ್ಯಕ್ತಿಗಳ ಮೇಲೆ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ಎಚ್ಚರಿಸಿದ್ದಾರೆ.

ವಿವಿಧ ಕ್ಷೇತ್ರಗಳಿಗೆ ವೀಕ್ಷಕರ ನೇಮಕ: ಚಾಮರಾಜನಗರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಒಳಪಡುವ 8 ವಿಧಾನಸಭಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಕೇಂದ್ರ ಚುನಾವಣಾ ಆಯೋಗದಿಂದ ಸಾಮಾನ್ಯ, ವೆಚ್ಚ ಹಾಗೂ ಪೊಲೀಸ್ ವೀಕ್ಷಕರನ್ನು ನೇಮಿಸಲಾಗಿದೆ. ಹೆಚ್.ಡಿ.ಕೋಟೆ, ನಂಜನಗೂಡು, ವರುಣ, ತಿ.ನರಸೀಪುರ, ಹನೂರು, ಕೊಳ್ಳೇಗಾಲ, ಚಾಮರಾಜನಗರ ಹಾಗೂ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರಗಳಿಗೆ ಸಾಮಾನ್ಯ ವೀಕ್ಷಕರಾಗಿ ಪಿ.ಸಿ.ಮೀನಾ, ವೆಚ್ಚ ವೀಕ್ಷಕರಾಗಿ ಮೋಹನ್ ಬಾಬು ಹಾಗೂ ಪೊಲೀಸ್ ವೀಕ್ಷಕರಾಗಿ ಮನೋಜ್ ತಿವಾರಿ ಅವರನ್ನು ನೇಮಕ ಮಾಡಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಶಿಲ್ಪನಾಗ್ ತಿಳಿಸಿದ್ದಾರೆ.

ಮ.ಬೆಟ್ಟದಲ್ಲಿ ದಾಖಲೆಯ 3.13 ಕೋಟಿ ಸಂಗ್ರಹ

ದೇವಸ್ಥಾನ ಹುಂಡಿಯಲ್ಲಿ 47 ಗ್ರಾಂ ಚಿನ್ನ, 2.30 ಕೆಜಿ ಬೆಳ್ಳಿ ಸಂಗ್ರಹ



ಮಹದೇಶ್ವರಬೆಟ್ಟದ ದೇವಾಲಯದ ಹುಂಡಿ ಎಣಿಕೆ ಕಾರ್ಯದಲ್ಲಿ ಭಾಗವಹಿಸಿದ್ದ ಸಿಬ್ಬಂದಿ.

ಹನೂರು, ಮಾ.27–ಚಾಮರಾಜನಗರ ಜಿಲ್ಲೆಯ ಪ್ರಸಿದ್ಧ ಯಾತ್ರಾ ಸ್ಥಳ ಮಲೆಮಹದೇಶ್ವರ ಬೆಟ್ಟದ ದೇವಾಲಯದ ಹುಂಡಿಗಳಲ್ಲಿ ಕೇವಲ 25 ದಿನಗಳಲ್ಲಿ ದಾಖಲೆಯ 3.13 ಕೋಟಿ ರೂ. ಸಂಗ್ರಹವಾಗಿದೆ.

ಮಹದೇಶ್ವರಬೆಟ್ಟದ ಇತಿಹಾಸದಲ್ಲೇ ತಿಂಗಳೊಂದರಲ್ಲಿ ದೇವಸ್ಥಾನ ಹುಂಡಿಗಳಿಂದ ಸಂಗ್ರಹವಾದ ಅತಿ ಹೆಚ್ಚಿನ ಮೊತ್ತ ಇದಾಗಿದೆ. ಇದುವರೆಗೆ ತಿಂಗಳೊಂದರಲ್ಲಿ 2.90 ಕೋಟಿ ರೂ. ಸಂಗ್ರಹವಾಗಿದ್ದು ದಾಖಲೆಯಾಗಿತ್ತು.

ಮಾ.1 ರಿಂದ 25ರವರೆಗೆ ಹುಂಡಿಗಳಲ್ಲಿ ಸಂಗ್ರಹವಾದ ಹಣದ ಎಣಿಕೆ ಮಂಗಳವಾರ ನಡೆಯಿತು. ಬೆಳಗ್ಗೆ 7ಕ್ಕೆ ಆರಂಭವಾದ ಹುಂಡಿಗಳ ಎಣಿಕೆ ಕಾರ್ಯ ತಡರಾತ್ರಿ ಪೂರ್ಣಗೊಂಡಿತು. ಒಟ್ಟು 3,13,00,931 ರೂ., 47 ಗ್ರಾಂ ಚಿನ್ನ, 2 ಕೆಜಿ 300 ಗ್ರಾಂ ಬೆಳ್ಳಿ ಸಂಗ್ರಹವಾಗಿದ್ದು, 2 ಅಮೆರಿಕನ್ ಡಾಲರ್, 1 ಬಾಂಗ್ಲಾ ದೇಶದ ನೋಟು, ನೇಪಾಳ ದೇಶದ 2 ನೋಟು, ಮಲೇಶಿಯಾದ 1 ನೋಟು ದೊರೆತಿದೆ. ಮಾರ್ಚ್‌ನಲ್ಲಿ ಮಹಾಶಿವರಾತ್ರಿ ಜಾತ್ರೆ ಒಂದು ವಾರ ನಡೆದಿದ್ದು, ಈ ಅವಧಿಯಲ್ಲಿ 8 ಲಕ್ಷ ಭಕ್ತರು ಬೆಟ್ಟಕ್ಕೆ ಭೇಟಿ ನೀಡಿದ್ದರು. ಮಲೆಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಮಾಹಿತಿ ಕೇಂದ್ರದ ಕಟ್ಟಡದಲ್ಲಿ ಎಣಿಕೆ ಕಾರ್ಯ ನಡೆಯಿತು. ಸಾಲೂರು ಮಠದ ಶ್ರೀ ಶಾಂತಮಲ್ಲಿಕಾರ್ಜುನಸ್ವಾಮೀಜಿ, ಪ್ರಾಧಿಕಾರದ ಕಾರ್ಯದರ್ಶಿ ರಘು, ಉಪ ಕಾರ್ಯದರ್ಶಿ ಚಂದ್ರಶೇಖರ್, ಹಣಕಾಸು ಮತ್ತು ಲೆಕ್ಕಪತ್ರ ಸಲಹೆಗಾರ ನಾಗೇಶ್, ಜಿಲ್ಲಾಧಿಕಾರಿ ಕಚೇರಿಯ ಮುಜರಾಯಿ ಶಾಖೆಯ ಶ್ವೇತಾ, ಕೊಳ್ಳೇಗಾಲದ ಬ್ಯಾಂಕ್ ಆಫ್ ಬರೋಡ ಶಾಖೆಯ ವ್ಯವಸ್ಥಾಪಕರು, ಸಿಬ್ಬಂದಿ ಎಣಿಕೆಯಲ್ಲಿ ಪಾಲ್ಗೊಂಡಿದ್ದರು.

ಸಚಿವ ಶಿವರಾಜ ತಂಗಡಗಿ ವಿರುದ್ಧ ಬಿಜೆಪಿ ಪ್ರತಿಭಟನೆ



ಚಾ.ನಗರದಲ್ಲಿ ಸಚಿವ ಶಿವರಾಜ್ ತಂಗಡಗಿ ವಿರುದ್ಧ ಬಿಜೆಪಿ ಜಿಲ್ಲಾ ಯುವ ಮೋರ್ಚಾ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಮಾ.27–ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಹೇಳಿಕೆ ಖಂಡಿಸಿ ಬಿಜೆಪಿ ಜಿಲ್ಲಾ ಯುವ ಮೋರ್ಚಾ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು.


ನಗರದ ಚಾಮರಾಜೇಶ್ವರ ದೇವಸ್ಥಾನ ಎದುರು ಜಿಲ್ಲಾ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಸೂರ್ಯ ಬಾಲರಾಜ್ ನೇತೃತ್ವದಲ್ಲಿ ಸಮಾವೇಶಗೊಂಡ ಕಾರ್ಯಕರ್ತರು, ಪಕ್ಷದ ಬಾವುಟ ಹಿಡಿದು ಮೋದಿ ಪರ ಜೈಕಾರ ಕೂಗಿದರು. ಬಳಿಕ ಭುವನೇಶ್ವರಿದಲ್ಲಿ ಕೆಲಕಾಲ ರಸ್ತೆ ತಡೆ ನಡೆಸಿ, ಶಿವರಾಜ್ ತಂಗಡಗಿ ವಿರುದ್ಧ ಘೋಷಣೆ ಕೂಗಿದರು. ಇದೇ ವೇಳೆ ಶಿವರಾಜ್ ತಂಗಡಗಿ ಭಾವಚಿತ್ರಕ್ಕೆ ಬೆಂಕಿ ಹಾಕಲು ಮುಂದಾದ ಪ್ರತಿಭಟನಾಕಾರರನ್ನು ಪೊಲೀಸರು ತಡೆದು ಫೆಕ್ಸ್ ಅನ್ನು ವಶಕ್ಕೆ ಪಡೆದರು.

ಪ್ರಧಾನಿ ನರೇಂದ್ರ ಮೋದಿ ಅವರ ಜನಪ್ರಿಯತೆ ಹಾಗೂ ವಿಶ್ವ ವಿಖ್ಯಾತಿಯನ್ನು ಕಾಂಗ್ರೆಸ್‌ನವರು ಸಹಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಕಾಂಗ್ರೆಸ್ಸಿಗರು ಸಂಸ್ಕೃತಿ ಹೀನ ಪದಗಳನ್ನು ಬಳಕೆ ಮಾಡಿ, ಪ್ರಧಾನಿಗೆ ಅಪಮಾನ ಮಾಡಿದ್ದಾರೆ. ಇದು ಕೇವಲ ಸಚಿವ ಶಿವರಾಜ್ ತಂಗಡಗಿಯಿಂದ ಬಂದ ಹೇಳಿಕೆಯಲ್ಲ. ಮೋದಿ ಎನ್ನುವವರ ಕಪಾಳಕ್ಕೆ ಹೊಡೆಯಿರಿ ಎಂದು ಹೇಳುವ ಮೂಲಕ ಕಾಂಗ್ರೆಸ್‌ನವರ ಮನಸ್ಥಿತಿ ಮತ್ತು ಹತಾಶೆಯನ್ನು ತೋರ್ಪಡಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೂಡಲೇ ಸಚಿವ ಶಿವರಾಜ ತಂಗಡಗಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ಪಡೆಯಬೇಕು. ಸಚಿವರು ದೇಶದ ಜನರ ಕ್ಷಮೆ ಯಾಚಿಸಬೇಕು. ಅತ್ಯಂತ ಹಿಂದುಳಿದ ಸಮುದಾಯದಿಂದ ಬಹಳ ಕಷ್ಟಪಟ್ಟು ಬಂದ ಪ್ರಧಾನಿ ಮೋದಿ ದೇಶದ ಭವಿಷ್ಯಕ್ಕಾಗಿ ಶ್ರಮಿಸುತ್ತಿದ್ದಾರೆ. ಹೀಗಾಗಿ ಜನ ಎಲ್ಲೆಡೆ ಮೋದಿ, ಮೋದಿ ಎಂದು ಕೂಗುತ್ತಿದ್ದಾರೆ. ಇದನ್ನು ಸಹಿಸದ ಕಾಂಗ್ರೆಸ್ ಮುಖಂಡರು ಇಂತಹ ಬಾಲಿಶ ಹೇಳಿಕೆ ನೀಡುತ್ತಿದ್ದಾರೆ ಎಂದು ದೂರಿದರು.

ಪ್ರತಿಭಟನೆಯಲ್ಲಿ ಯುವ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆನಂದ್ ಭಗೀರಥ್, ಸಾಗಡೆ ಗುರು, ಯಳಂದೂರು ರುದ್ರ ಪ್ರಮೋದ್, ಕೋಟಂಬಳ್ಳಿ ಕುಮಾರ್, ಕೊತ್ತಲವಾಡಿ ಮಹದೇವಸ್ವಾಮಿ, ಗುರುಪ್ರಸಾದ್, ಪ್ರವೀಣ್, ಬುಲೆಟ್ ಚಂದ್ರು, ಮಹದೇವಪ್ರಸಾದ್, ಮಹೇಶ್‌ನಾಯಕ, ಬೂದಂಬಳ್ಳಿ ರಾಜೇಶ್, ಕೇಬಲ್ ರಂಗಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ವಿರಾಟ್ ಶಿವು, ಸಹ ವಕ್ತಾರ ಮಂಜುನಾಥ್, ಕೂಸಣ್ಣ ಮೊದಲಾದವರು ಇದ್ದರು.

ಇಂದು ಶಾರದಾ ಕೃಪ ಸಭಾಭವನ ಉದ್ಘಾಟನೆ



ಭಾರತೀ ಸ್ವಾಮೀಜಿ

ಚಾಮರಾಜನಗರ, ಮಾ.27– ತಾಲೂಕಿನ ಹೆಬ್ಬಸೂರು ಗ್ರಾಮದಲ್ಲಿ ಶೃಂಗೇರಿಯ ಶಾರದಪೀಠ ಶಾಖೆ ವತಿಯಿಂದ ನಿರ್ಮಿಸಿರುವ ಶಂಕರ ಮಠದ 'ಶಾರದಾ ಕೃಪ' ಸಭಾಭವನವನ್ನು ಮಾ.28ರಂದು ಉದ್ಘಾಟಿಸಲಾಗುವುದು.

ಸಭಾಭವನ ಉದ್ಘಾಟನೆ ಅಂಗವಾಗಿ ಮಾ.28ರ ಬೆಳಗ್ಗೆ 8ಕ್ಕೆ ಮಹಾಗಣಪತಿ ಹೋಮ, ಋಗ್ವೇದ ಸಂಹಿತಾಯಾಗ ಸ್ವಾಹಾಕಾರ ಶತಚಂಡಿಕಾಯಾಗ ಪುರಶ್ಚರಣೆ. ಮಧ್ಯಾಹ್ನ 12.30ಕ್ಕೆ ಮಹಾಮಂಗಳಾರತಿ, 1 ಗಂಟೆಗೆ ಅನ್ನಸಂತರ್ಪಣೆ ನಡೆಯಲಿದೆ. ಸಂಜೆ 5.30ಕ್ಕೆ ಆಗಮಿಸುವ ಶೃಂಗೇರಿಯ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಅವರನ್ನು ಪೂರ್ಣಕುಂಭ ಸ್ವಾಗತದೊಂದಿಗೆ ಬರಮಾಡಿಕೊಳ್ಳಲಾಗುವುದು. ಬಳಿಕ ಶ್ರೀಗಳು 'ಶಾರದಾ ಕೃಪ' ಸಭಾಭವನ ಉದ್ಘಾಟಿಸಿ, ಶಾರದಾ ಚಂದ್ರಮೌಳೇಶ್ವರ ಹಾಗೂ ಗುರು ಪಾದುಕಾ ಪೂಜೆ ನೆರವೇರಿಸಲಿದ್ದಾರೆ. ರಾತ್ರಿ 8 ಗಂಟೆಗೆ ಅನ್ನ ಅಂತರ್ಪಣೆ ನಡೆಯಲಿದೆ.

ಮಾ.29ರಂದು ಸಂಜೆ 5.30ಕ್ಕೆ ಗುರುವಂದನಾ ಕಾರ್ಯಕ್ರಮ ನಡೆಯಲಿದ್ದು, ಇದೇ ವೇಳೆ ಪದ್ಮಶ್ರೀ ಪುರಸ್ಕೃತ ಡಾ.ವಿ.ಆರ್.ಗೌರೀಶಂಕರ್ ಹಾಗೂ ಶೃಂಗೇರಿ ಶಾರದಾಪೀಠದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪಿ.ಎ.ಮುರಳಿ ಅವರನ್ನು ಸನ್ಮಾನಿಸಲಾಗುವುದು ಎಂದು ಹೆಬ್ಬಸೂರಿನ ಶೃಂಗೇರಿ ಶಾರದಪೀಠದ ಧರ್ಮಾಧಿಕಾರಿ ಹೆಚ್.ಎಸ್.ಶ್ರೀಧರ್ ಪ್ರಸಾದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶತಾಯುಷಿ ಸಣ್ಣಮ್ಮ ನಿಧನ



ಕೊಳ್ಳೇಗಾಲ: ಪುರಸಭೆ ಮಾಜಿ ಸದಸ್ಯ ಹಾಗೂ ಪಟ್ಟಣದ ಮಠದ ಬೀದಿಯ ನಿವಾಸಿ ಬಸವರಾಜು ಅವರ ತಾಯಿ ಶತಾಯುಷಿ ಸಣ್ಣಮ್ಮ (ಬೋರಮ್ಮ (101) ಬುಧವಾರ ನಿಧನರಾದರು.

ಮೃತರು ರೈತ ಸಂಘದ ಮಾಜಿ ಅಧ್ಯಕ್ಷ ಶಿವಣ್ಣ, ಪುರಸಭೆ ಮಾಜಿ ಸದಸ್ಯ ಬಸವರಾಜು ಸೇರಿದಂತೆ ಮೂವರು ಪುತ್ರರು, ನಾಲ್ವರು ಪುತ್ರಿಯರು, ಅಪಾರ ಬಂಧುಗಳನ್ನು ಅಗಲಿದ್ದಾರೆ.

ಹೊಸಹಂಪಾಪುರದ ಬಳಿಯ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ಜರುಗಿತು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ವೃದ್ಧಾಶ್ರಮ

ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರನ್ನು, ಪಾರ್ಶ್ವವಾಯು ಪೀಡಿತರು, ಹಾಗೂ ಕೈಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿ ಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ, ವಸತಿ, ವೈದ್ಯಕೀಯ ಸೌಲಭ್ಯದೊಂದಿಗೆ ಇಚ್ಛೆವುಳ್ಳವರು ಸಂಪರ್ಕಿಸಿ

9110455297 | 9591557126

ಮನೆ ಮಾರಾಟಕ್ಕಿದೆ

HOUSE FOR SALE

30x40 ಅಳತೆಯಲ್ಲಿ ಕಟ್ಟಿರುವ ವಾಸ್ತುವುಳ್ಳ ಉತ್ತರ ದಿಕ್ಕಿನ ಮನೆ 2 ಬೆಡ್ ರೂಮ್ ಮತ್ತು ಅಟ್ಯಾಚ್ಡ್ ಹಾಗೂ ಗ್ರಾನೈಟ್ ನೆಲಹಾಸು. ಚಾಮುಂಡೇಶ್ವರಿ ರೈಲ್ವೆ ಲೇಔಟ್‌ನಲ್ಲಿ ಮಾರಾಟಕ್ಕಿದೆ.

7 KMs from City KRS Road

9482746287
9945192841

HOUSE FOR LEASE

at Vijayanagar 4th Stage, Near NPS School, 2BHK in the 1st Floor with 2 Site outs Coverd Parking shed available in the cellar East Facing building with north Side main door entrance

9686456679
9480792529

S.K. CONSTRUCTION

ಹೊಸ ಮನೆ ಕಟ್ಟ ಬೇಕೇ? ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Engineering Plan , 3D Elivation ಸಹಿತ ನಾವೇ Loan ಮಾಡಿ ನಿಮ್ಮ ಕನಸಿನ ಮನೆ ನಿರ್ಮಿಸಿ ಕೊಡುತ್ತೇವೆ.

9620528490

ಸೈಟು ಮಾರಾಟಕ್ಕಿದೆ

ಕುಬೇರಾನಂದ ಸಾಗರ ಲೇಔಟ್ ಪಕ್ಕದಲ್ಲಿರುವ (ಇಲವಾಲ ಬಸ್ ಸ್ಟ್ಯಾಂಡ್ ಹಿಂಭಾಗ) ಮೈದನಹಳ್ಳಿ, ಮೈಸೂರು

1800 ಚದರ ಅಡಿ

856 ಚದರ ಅಡಿ

9900956135

RAVI SCHOOL OF MUSIC
Since 2012

Keyboard, Guitar & Ukulele Clases
Siddarthanagar, Gokulam & Dattagalli, 30 Days Summer Camp !

9343830673
9483761161

AFFOTDABL HOME LOAN

ಮುಡಾ, ರೆವಿನ್ಯೂ, ಎ ಖಾತೆ, ನಗರ ಸಭಾ, ಪಂಚಾಯಿತಿ ಖಾತೆ 9 & 11ಎ, 11ಬಿ ಖಾತೆ

ಮನೆ ತೆಗೆದುಕೊಳ್ಳುವುದಕ್ಕೆ, ಕಟ್ಟುವುದಕ್ಕೆ, ಬ್ಯಾಲೆನ್ಸ್ ಟ್ರಾನ್ಸ್‌ಫರ್, ಪ್ಲಾಟ್ ಪರ್ಚೆಸ್, ವ್ಯಾಪಾರ ಮಾಡುತ್ತಿದ್ದಲ್ಲಿ ಮತ್ತು ಪರ್ಸನಲ್ ಲೋನ್‌ಗಳು ಸಿಗುತ್ತದೆ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

* ಎಲ್ಲಾ ಷರತ್ತುಗಳು ಅನ್ವಯಿಸುತ್ತವೆ.

Ph:8296967769

MUDA ಸೈಟ್ ಮಾರಾಟಕ್ಕಿದೆ

ಇಲವಾಲದ ಸೇಂಟ್ ಜೋಸೆಫ್ಸ್ ಶಾಲೆ ಹತ್ತಿರ ಮಯೂರ ಲೇಔಟ್‌ನಲ್ಲಿ 30×50 ಅಳತೆಯ East facing ಸೈಟು ಮಾರಾಟಕ್ಕಿದೆ.

ಬೆಲೆ : 3000/– Per Sqft

9886048471

ಮನೆ ಬಾಡಿಗೆಗೆ ಇದೆ

ರಾಮಕೃಷ್ಣನಗರ ಹೆಚ್.ಬ್ಲಾಕ್‌ನಲ್ಲಿ 30x40 ಅಳತೆಯಲ್ಲಿ 4 Bed Room attached Bathroomವುಳ್ಳ ಡ್ಯೂಪ್ಲೆಕ್ಸ್ ಇಂಡಿಪೆಂಡೆಂಟ್ ಮನೆ ಹಾಗೂ Parking , ಸೋಲಾರ್ಸ್ ಒಳಗೊಂಡಿದೆ.

9380681006

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್

Mob: 8880558064

---

neem BOND PLATINUM

PLYWOOD & DOORS

@ FACTORY DEPOT RATES

10 YEARS WARRANTY*

9845426862, 9901291267

ಬೇಕಾಗಿದ್ದಾರೆ

ಪಿರಿಯಾಪಟ್ಟಣದಲ್ಲಿರುವ ಪ್ರಖ್ಯಾತ ಸಸ್ಯಾಹಾರಿ ಹೋಟೆಲ್‌ಗೆ ಕೆಲಸಗಾರರು ಬೇಕಾಗಿದ್ದಾರೆ.
ಕ್ಯಾಪ್ಟನ್–2, ಸಪ್ಲೈಯರ್–6, ಅಡುಗೆ ಸಹಾಯಕರು–3, ಕಾಫಿ ಟೀ ಮೇಕರ್–4, ದೋಸೆ ಭಟ್ಟರು –2, ಕಿಚನ್ ಸುಪರ್‌ವೈಸರ್–2

8317454665

AQUAGUARD, KENT SALES & SERVICE

SERVICE CHARGE 250

9845963421

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್

Mob: 9591815191

ಅನುಬಂಧ ಮ್ಯಾರೇಜಸ್

ಎಲ್ಲಾ ಜಾತಿಯ ವಧುವರರು ವಿಧುರರು, ವಿಧವೆಯರು ವಿಚ್ಛೇದಿತರು, ನೇರ ಸಂಪರ್ಕಿಸಿ

6361740552

ಬೇಕಾಗಿದ್ದಾರೆ

ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕು ಬೆಳಿಗ್ಗೆ 9 ರಿಂದ ಸಂಜೆ 6ರವರೆಗೆ ಅಥವಾ ಸಂಜೆ 4 ರಿಂದ ರಾತ್ರಿ 9 ರವರೆಗೆ ಕುವೆಂಪುನಗರ

9535370330

MUDA App Site
Kamadhenu Layout, Srirampura

30 x 40

East South Corner Site

Price - 64 Lakhs

Within Ring Road

8660105902

Site for Sale GOKULAM

50x75,

Commercial Site,MUDA North East Corner

Price - 4.95 Cr

50 Feet Road

8660105902

40x66 Site Judicial Layout, Dattagalli

West Facing, MUDA Approved

Price - 1.19 Cr

Behind Christ Public School

8660105902

SITES for SALE
JP Nagar Ring Road

20 x 30 - 17 Lakhs,
30 x 40 - 33 Lakhs,
Near Gurur Bus Stop, Ramabainagar,Mysore.
DTCP approved (Corporation limits)
1.5 Kms from JP Nagar Ring Road

8660105902

---

2 BHK HOME INTERIORS

Starting @ ₹2.5 Lacs*

Home Space Mart™

TALK TO OUR DESIGN TEAM
✆ 9108923123

"You Dream we Build"

Civil Engineering
Architectural Design's Interior and Fabrication Services Undertaken
2D, 3D, 4D Modules, Plans, Elevation, Interior Layout, etc...
Turnkey basis: Basic range 1700
Medium range 1900
Premium Range 2200

9538632078
9591243083

ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ

12000 ಇಂದ 25000 ಸಾವರ ರೂಗಳವರೆಗೆ ಸಂಬಳ ನೀಡಲಾಗುವುದು. ವಿದ್ಯಾರ್ಹತೆ : PUC/Diploma Any Degree Pass / Fail, Bike & Android Mobile ಇರುವವರಿಗೆ ಮಾತ್ರ ಕೆಲಸ ಕೊಡಲಾಗುವುದು.

9880151303

SITE FOR SALE

30x40 Corner Site at Rajajnagara Near R T Layout Opposite University Layout Contact

8951820020

SITE FOR SALE

KRISHA LAYOUT
Site no 197
40'×60' West Facing
Yelwala, Hunsur Rood, Mysore. Contact:

Mob: 97398-26533

DTCP SITES FOR SALE

DTCP Sites
Rs. 699 per sq.ft.,
Near Jayapura,
H.D. Kote Road, Mysore.

9590491194,9606783264

ಬೋಳು ತಲೆಯ ಸಮಸ್ಯೆಯೇ?



ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವರ್ಥಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.

SMART HAIR FIXING
574, 9th Cross, Anikethara Road, kuvempunagar, Mysuru
MYSURU 9611028523 MANGALORE 9343142258

SWIMLIFE SWIM CENTER

Summer Swimming Camp
Starts from April 1st

Venue:
Adhyayan School Campus,
Shakthinagar, Mysuru - 29

Contact:
9480791879 / 8073639031

ಬೇಕಾಗಿದ್ದಾರೆ

ಮೈಸೂರಿನಲ್ಲಿ ಪ್ರಸಿದ್ಧ ಆಟೋಮೊಬೈಲ್ ಕಂಪನಿ ಅಗತ್ಯವಿದೆ. ಮಾರ್ಕೆಟಿಂಗ್ ಮತ್ತು ಸೇಲ್ಸ್ ಎಕ್ಸಿಕ್ಯೂಟಿವ್. (ಸಂಪರ್ಕಿಸಿ)

9886959733

Email ID:
mysoreresume@gmail.com

ಬೇಕಾಗಿದ್ದಾರೆ

ಸಿವಿಲ್ ಇಂಜಿನಿಯರ್ ಬಿಲ್ಡಿಂಗ್ ಕಂಟ್ರಾಕ್ಟರ್ ಕೆ.ಎಸ್.ಎಲ್.ಯು ಡೆವಲಪರ್ಸ್ ಮೈಸೂರು

9141614633

Land for Sale

3 acres of dry land on Mysore-Bannur Road (Near Harohalli) Bus Road. 17 km from Mysore Palace.

95388-39926

ತಕ್ಷಣ ಬೇಕಾಗಿದ್ದಾರೆ

1) ಸೆಕ್ಯೂರಿಟಿ ಗಾರ್ಡ್ಸ್ : 10th / PUC (35 yrs to 45 yrs.) (ಕುವೆಂಪುನಗರ, ಹೂಟಗಳ್ಳಿ)
2) ಹೌಸ್‌ಕೀಪಿಂಗ್ – ಹುಡುಗರು / ಮಹಿಳೆಯರು (ಒಂಟಿಕೊಪ್ಪಲ್, ಹಿನಕಲ್, ಜಯಲಕ್ಷ್ಮೀಪುರ)
3) ಹೌಸ್‌ಕೀಪಿಂಗ್: ಹುಡುಗರು (ರಾತ್ರಿ ಪಾಳಿಯದಲ್ಲಿ ಕೆಲಸ ಮಾಡಲು).

9739166772, 9880419847, 6364675904

ಶ್ರೀ ಮೂರ್ತಿ ಟೂರಿಸ್ಟ್

11–3–24 ರಿಂದ 14–4–24 (4 ದಿನ) ಹೊರನಾಡು, ಬೇಲೂರು, ಶೃಂಗೇರಿ, ಕೊಲ್ಲೂರು, ಗೋಕರ್ಣ, ಮುರುಡೇಶ್ವರ, ಆನೇಗುಡ್ಡ, ಅಂಬಲಪಾಡಿ, ಉಡುಪಿ, ಧರ್ಮಸ್ಥಳ, ಸುಬ್ರಹ್ಮಣ್ಯ ಪ್ರವಾಸಕ್ಕೆ ಬಸ್ ಚಾರ್ಜು ಮಾತ್ರ 2750/– (ಊಟ ಮತ್ತು ವಸತಿ ಪ್ರತ್ಯೇಕ)

9480733069

Tickets at your door step.

ಮನೆಯಿಂದಲೇ ಕೆಲಸ

ನಿಮ್ಮ ಬಿಡುವಿನ ವೇಳೆಯಲ್ಲಿ ನಾವು ಕೊಡುವ ಸ್ಟೋರಿ ಬುಕ್ ರೈಟಿಂಗ್ ಫಾರಂ ಫಿಲ್ಲಿಂಗ್ ಡೇಟಾ ಎಂಟ್ರಿ ಕೆಲಸ ಮಾಡಿ ಗಳಿಸಿ 10000/- ರಿಂದ 18000/- ಕನ್ನಡ ಇಂಗ್ಲಿಷ್ ಓದಲು ಬರೆಯಲು ಬರುವ ಎಲ್ಲರಿಗೂ ಮುಕ್ತ ಅವಕಾಶ

7349338372

ಬಾಡಿಗೆಗೆ ಇದೆ

2 BHK ದಟ್ಟಗಳ್ಳಿ , 2nd Stage.

ಭೋಗ್ಯಕ್ಕೆ ಇಲ್ಲ.

9738683107, 9916173160

ತಕ್ಷಣ ಬೇಕಾಗಿದ್ದಾರೆ

Flex Print Shopಗೆ ಗ್ರಾಫಿಕ್ಸ್ ಡಿಸೈನರ್ (Coraldraw & Photoshop) ಅನುಭವವುಳ್ಳ ಹುಡುಗಿ–ಹುಡುಗರು, ಅನುಭವಕ್ಕೆ ತಕ್ಕಂತೆ ಸಂಬಳ ಕೊಡಲಾಗುವುದು. ದೇವರಕಲೆ ಪ್ರಿಂಟರ್ಸ್

9845384926
9545009227

ತಕ್ಷಣ ಬೇಕಾಗಿದ್ದಾರೆ

ಮೈಸೂರು, ಮಂಡ್ಯ, ಚಾಮರಾಜನಗರ, ಭಾಗಗಳಲ್ಲಿ ಟೆಲಿಕಾಲಿಂಗ್, ಡಾಕ್ಯುಮೆಂಟ್ ಕಲೆಕ್ಷನ್, ಡೆಲಿವರಿ ಜಾಬ್ ಹಾಗೂ SMS ಫಾರ್ವರ್ಡ್ ಹುದ್ದೆಗಳು ಸಂಬಳ 10.000/– ದಿಂದ 18000 ಯುವಕ–ಯುವತಿಯರಿಗೆ ಅವಕಾಶ

7019554370

Walk-in interview

Sai Gurukula Pre -school, JP Nagar

Required only female staff with Experience and good communication skill.

Counselor and Teacher -	1 post.
Teachers -	3 poss
Asst. Teachers -	2 posts
Care taker post -	1 Post

9686862606

Hiring Immediately

Male candidates only.
Qualification: PUC / Diploma / Any Degree pass or fail. Salary: 12K to 20K thousand. Age: Below 30 years. Front Office Executive with well computer knowledge & responsible person only.

9880151303

Required

Candidates experienced in HR and purchase department for a pharma Company... Contact

7899723887

Send your resume to
kanthiravi27@gmail.com

2BHK HOUSE FOR RENT

1st Floor, Anikethna Road, 3rd cross, Kuvempunagar, Mysore

7829904696

House For Rent
ಮನೆ ಬಾಡಿಗೆಗೆ ಇದೆ

40x40 ಅಡಿ ಅಳತೆಯ ಡ್ಯೂಪ್ಲೆಕ್ಸ್ 4 ಬೆಡ್‌ರೂಂವುಳ್ಳ ಮನೆ ಬಾಡಿಗೆಗೆ ಇದೆ. ಸ್ಥಳ: ಸಿದ್ದಿಕಿನಗರ, ಮೈಸೂರು–ಬೆಂಗಳೂರು ಮುಖ್ಯರಸ್ತೆ, ಮಣಿಪಾಲ್ ಆಸ್ಪತ್ರೆ ಸಮೀಪ. ಸಂಪರ್ಕಿಸಿ:

9448600935

ಬೇಕಾಗಿದ್ದಾರೆ

ಯಾದವಗಿರಿ ಕೈಗಾರಿಕಾ ಪ್ರದೇಶ ಮೈಸೂರು ಮಹಿಳೆಯರು

ಕನಿಷ್ಠ ವೇತನ 10,000
ಸಮಯ: 9 ರಿಂದ 6.30

9448664411

MATCH MAKERS, BRIDE / GROOMS
ವಧು/ವರರ ಮಾಹಿತಿ ಕೇಂದ್ರ

ಶ್ರೀಮಂತ ಎಲ್ಲಾ ಜಾತಿಯ Govt Jobs, Private, ಸ್ವಂತ ಕೈಗಾರಿಕೆ / ಸ್ವಂತ ಕಛೇರಿ / ಸ್ಕೂಲ್ ಡಾಕ್ಟರ್, ಇಂಜಿನಿಯರ್, ಬ್ಯುಸಿನೆಸ್ ಎಲ್ಲಾ ಡಿಗ್ರಿಗಳು, 1st Marriage ಡೈವೋರ್ಸಿಗಳು, ವಿಧವೆಯರು ಸ್ವತಂತ್ರರು ಕರ್ನಾಟಕಾದ್ಯಂತ ಇರುವ ವಧು / ವರರಿಗಾಗಿ ಭೇಟಿ ನೀಡಿ 600 ಸ್ವತಂತ್ರ ವಧುಗಳಿಗೆ ವರಬೇಕು. ಶ್ರೀಮಂತ 8000 ವರಗಳಿಗೆ ವಧು ಬೇಕು. Life Partnerಗಾಗಿ ಎಲ್ಲಾ ರೀತಿಯ ಉದ್ಯೋಗಕ್ಕಾಗಿ ಮಹಿಳಾ ಸಂಘ ಟ್ರಸ್ಟ್, NGO ಸಂಘದ ಬೈಲಾ / ನೊಂದಣಿಗೆ

7975728012

ಬಾಡಿಗೆಗೆ ಇದೆ

10x10 ಅಡಿ ಅಳತೆಯ ಮೊದಲನೇ ಅಂತಸ್ತಿನ ಮಳಿಗೆ ಬಾಡಿಗೆಗೆ ಇದೆ. ಸ್ಥಳ: ನಾರಾಯಣ ಶಾಸ್ತ್ರಿ ರಸ್ತೆ (N.S. Road), ಶಾಂತಲ ಚಿತ್ರ ಮಂದಿರ ಬಳಿ. ಸಂಪರ್ಕಿಸಿ:

9448600935

ಕಮರ್ಷಿಯಲ್ ಶಾಪ್ ಬಾಡಿಗೆಗೆ ಇದೆ

10x8 ಅಡಿ ಅಳತೆಯ ಕಾರ್ನರ್ ಮಳಿಗೆ. ಸ್ಥಳ: ಬನ್ನಿಮಂಟಪ 'ಸಿ' ಬಡಾವಣೆ, ICICI ಬ್ಯಾಂಕ್ ATM ಹತ್ತಿರ. ಸಂಪರ್ಕಿಸಿ:

9448600935

ಮನೆ ಬಾಡಿಗೆಗೆ ಇದೆ

30x40 ಅಡಿ ಅಳತೆಯ 3 ಬೆಡ್ ರೂಂವುಳ್ಳ ಗ್ರೌಂಡ್ ಫ್ಲೋರ್ ಮನೆ. ಸ್ಥಳ: ಬನ್ನಿಮಂಟಪ 'ಸಿ ಬಡಾವಣೆ, ICICI ಬ್ಯಾಂಕ್ ATM ಹತ್ತಿರ. ಸಂಪರ್ಕಿಸಿ:

9448600935

ಮನೆ

ಬಾಡಿಗೆಗೆ / ಭೋಗ್ಯ ಚಿಕ್ಕ ಸಂಸಾರಕ್ಕೆ JP ನಗರ

9663563587

Old Age Home

For senior citizens / bedridden we offer Veg food, nursing care, medical services at our centre in Gokulam, Mysore at a reasonable cost. Contact:

9880102700

ಬೇಕಾಗಿದ್ದಾರೆ

ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ (ಕನ್ನಡ ಮಾತನಾಡಬಲ್ಲವರು) ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ ಸಂಬಳ: 10000/– Team Leader ಬೇಕಾಗಿದ್ದಾರೆ. ಕಂಪ್ಯೂಟರ್ ಜ್ಞಾನವುಳ್ಳವರು ಸಂಬಳ: 10000/–

8150005111

ನಿವೇಶನಗಳು ಬೇಕಾಗಿವೆ

ಹ್ಯಾಪಿಯಾಗಿರಲು ಮೈಸೂರಿನ ಇಲವಾಲದಲ್ಲಿರುವ "ಹ್ಯಾಪಿಟೌನ್" ಬಡಾವಣೆಗೆ ಹಾಗೂ ಸುತ್ತಮುತ್ತಾ ನೋಂದಣಿಗೆ ಸಿದ್ಧವಿರುವ ನಿವೇಶನಗಳು ಬೇಕಾಗಿವೆ. ಈ ಕೂಡಲೇ ಸಂಪರ್ಕಿಸಿ:

9019562901
8217596732

ಬೇಕಾಗಿದ್ದಾರೆ

ಹೌಸ್‌ಕೀಪಿಂಗ್ / ಭದ್ರತಾ ಸಿಬ್ಬಂದಿ, ಹೆಲ್ಪರ್ / ಡ್ರೈವರ್ (ವಯಸ್ಸು 20 ರಿಂದ 55) ಕುವೆಂಪುನಗರ, ಬೋಗಾದಿ, ಹೆಬ್ಬಾಳ್, ಮೇಟಗಳ್ಳಿ ಸುತ್ತಮುತ್ತ. ಉತ್ತಮ ಸಂಬಳವಿರುತ್ತದೆ. ಸಂಪರ್ಕಿಸಿ:

9036745292, 9900749104

30x40 East face site, Gaddige Main Road, Near Ganigara Hundi (Bogadi 3 km)

Call: 9880273834

SITE FOR SALE

40x60 site for sale, New Khanta Arus Road, Bapuji Layout (Near Dattagalli)

Call: 9880273834

ಬೇಕಾಗಿದ್ದಾರೆ

ಆಫೀಸ್ ಅಸಿಸ್ಟೆಂಟ್

ಕೆಲಸಕ್ಕೆ ಬೇಕಾಗಿದ್ದಾರೆ ಹುಡುಗ ಅಥವಾ ಹುಡುಗಿಯರು
ಅರ್ಹತೆ : ಎಸ್.ಎಸ್.ಎಲ್.ಸಿ / ಪಿ.ಯು.ಸಿ
ಸಂಬಳ : 7 ರಿಂದ 8 ಸಾವಿರ
ಸ್ಥಳ: ಎ.ಪಿ.ಎಂ.ಸಿ ಬಂಡಿಪಾಳ್ಯ, ಮೈಸೂರು
ಮೊಬೈಲ್ ನಂ: 94824 26207

FOR SALE

1. 20x30, 30x40, 30x50 Near Defence Apartments, HD Kote Road
2. 30x50 Near Varuna Lake
3. 2&3 BHK Flats at Ramkrishna Nagar
4. 100x100 Farm House @ KRS Back Water Attach 20L
5. 40x72, 35x45 House Vidyaranyapuram
6. 20x30 House Giridarshini Layout
7. 30x45 New House Near JP Nagar

PRAKRUTHI PROPERTIES
95386 90359, 90359 90359

SITE FOR SALE

30x40 East Face Site
Muda Approved
80% Bank Loan available
Ready to Construction
Adjacent to Lal Bahadur Shastri Nagar
Close to VTU Campus

9538583377

ಸ್ಟಾರ್ ಮ್ಯಾರೇಜಸ್

ಎಲ್ಲಾ ಜನಾಂಗದ ವಧು–ವರರು ವಿಧುರರು–ವಿಧವೆಯರು ಹಾಗೂ ವಿಚ್ಛೇದಿತರು

8197607559

Change of Name

I, Sandeep S. Pai, residing at #12, Suraksha Block, 5, Maduvana Layout, 2nd Stage, Srirampura, Mysuru-23, have changed my name as Sundeepa S. Pai on my own free will, in front of Notary Sharada Hiremath. I declare that I shall at all times hereafter in all records, deeds and writings in all proceedings, dealings and transactions private as well and sign the name Sundeepa S. Pai.
Sd/- Sundeepa S. Pai

SITE FOR SALE

20x30 North Face
40x60 East Face
Both sites are MUDA allotted sites.Located in Vijayanagar 4th Stage, Mysore.

Mob: 9606744739

ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ

Address: ಬಿಜಾಯಿನಿ ಇನ್ವೆಸ್ಟಿಗೇಷನ್ & ಸೆಕ್ಯೂರಿಟಿ ಸರ್ವೀಸಸ್. #34, KIDB Housing Agro Corn Layout, Near Ring Road, Hebbal, Mysore-570 016. ಆಕರ್ಷಕ ವೇತನ ಹಾಗೂ ESI, PF ಇರುತ್ತದೆ. ಮೈಸೂರು: ಎನ್.ಆರ್. ಮೊಹಲ್ಲಾ, ಹೂಟ್ಗಳ್ಳಿ / ರಮ್ಮನಹಳ್ಳಿ / ಹಂಪಾಪುರ / ಗೋಕುಲಂ / ಕಡಕೊಳ.

Mob: 6360973704, 9880703723, 8217435031

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ

NO TARGET, TYPING WORK

ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.

8884439666

ಉಚಿತ ತರಬೇತಿ

ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.

ತರಬೇತಿಗಾಗಿ:

7406375196, 9880548596

ಚಾಮುಂಡೇಶ್ವರಿ ಮ್ಯಾರೇಜ್ ಬ್ಯೂರೋ

ಒಕ್ಕಲಿಗ ಕುರುಬ, ಲಿಂಗಾಯತ SC, ST ಬಲಿಜ, ಈಡಿಗ, ದೇವಾಂಗ, ಮರಾಠ, ನಾಯಕ, ಎಲ್ಲಾ ಜನಾಂಗದ ವಧು–ವರರು ವಿಚ್ಛೇದಿತರು ಹಾಗೂ ವಿಧುರರು, ವಿಧವೆಯರು ನೇರವಾಗಿ ಸಂಪರ್ಕಿಸಿ: 56 ವರ್ಷದ ವಿಧವೆಗೆ ವರಬೇಕು ಮೈಸೂರಿನವರೇ ಬೇಕು (Cast No Bar) ಫೋಟೋ ಬಯೋಡೆಟಾ ವಾಟ್ಸಪ್ ಮಾಡಿ

8951241381

ಬೇಕಾಗಿದ್ದಾರೆ

ಮೈಸೂರು ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾದಲ್ಲಿ 3 ಪಾಳಿ (Shift)ನಲ್ಲಿ 8 Hour Duty ವಾರದ ರಜಾ ESI ಮತ್ತು PF ಕ್ಯಾಂಟೀನ್ ವ್ಯವಸ್ಥೆ ಇರುವ ಕಾರ್ಖಾನೆಗೆ SSLC ಓದಿರುವ ಅನುಭವವಿರುವ ದೃಢಕಾಯರಾದ 40 ವರ್ಷ ವಯೋಮಿತಿ ಒಳಗಿರುವ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವೇತನ ತಿಂಗಳಿಗೆ 15000/– ರೂ.ಗಳು ಸಂಪರ್ಕಿಸಿ

9731976148

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ

ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:

6361056646, 7676844160

ಮನೆ ಮಾರಾಟಕ್ಕಿದೆ

55x45 ಅಳತೆಯ ಕಟ್ಟಡದಲ್ಲಿ 21x45 ಅಳತೆಯ 2 ಅಂತಸ್ತಿನ ಮನೆ ತ್ಯಾಗರಾಜ ರೋಡ್, 8ನೇ ಕ್ರಾಸ್, ಅಗ್ರಹಾರ ಮೈಸೂರು

9448442226
6361637505

ಬೇಕಾಗಿದ್ದಾರೆ

ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ನೈಟ್ ಶಿಫ್ಟ್ ಕೆಲಸ ಮಾಡಲು ಹುಡುಗರು / ಪುರುಷರು ಬೇಕಾಗಿದ್ದಾರೆ.

ಸಂಬಳ: 12,000.

Mob: 7899754149

ಬೇಕಾಗಿದ್ದಾರೆ

ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕಾಗಿ ಪುರುಷರು / ಮಹಿಳೆಯರು ಬೇಕಾಗಿದ್ದಾರೆ.

ಸಂಬಳ: 12,000.

Mob: 8892258814

CCTV & LAPTOPS

- WIRELESS CAMERA
- 4G SIM CAMERAS
- SOLAR CAMERA
- All brand Laptops

Call: 7348977948

CHANGE OF NAME

I, Deepa Sudhir, W/o N. Sudhir aged about 52 yrs. residing at 909/1A 1st Main, lakshmipuram Mysore, Karnataka State on oath that my name has been changed from DeepaS to Deepa sudhir vide affidavit sworn in before Notary Mallikarjun Swamy on 13 of March 2024 Sd/- Deepa Sudhir

---

ಮೊಕೋಸ್ ಮೆನಿಸ್ ತೊಂದರೆಯೇ? ಸೋರಿಯಾಸಿಸ್‌ನಿಂದ ಬಳಲುತ್ತಿದ್ದೀರಾ?

ಯಾವುದೇ ವಿಧವಾದ ಇಂಜೆಕ್ಷನ್ / ಆಪರೇಷನ್ ಇಲ್ಲದೇ ತಜ್ಞರಿಂದ ಸಂಶೋಧಿಸಿದ ಔಷಧಿ ಲೇಪ ತೈಲವನ್ನು ಮೇಲೆ ಮಸಾಜ್ ಮಾಡುವ ಮೂಲಕ ಪರಿಣಾಮಕಾರಿ ಚಿಕಿತ್ಸೆಯನ್ನು ನೀಡಲಾಗುವುದು. ಆಹನಾ ಆಯುರ್ ಕ್ಲಿನಿಕ್ ಮೈಸೂರು ಡಾ|| ವಿ.ಸಹನಾ BAMS, PGDAC, PGDAN

8861137033

ಸೈಟುಗಳು ಮಾರಾಟಕ್ಕಿವೆ

(ಮುಡಾ ಅಪ್ರೂವಡ್) ಶ್ರೀನಗರ ಹಿಂಭಾಗ ಮತ್ತು ಶ್ರೀರಾಂಪುರ ರಿಂಗ್ ರೋಡ್ ಮೈಸೂರು

8050345574

ಬೇಕಾಗಿದ್ದಾರೆ

ಮೈಸೂರು ನಗರದಾದ್ಯಂತ ಬ್ಯಾಂಕ್ ಫೀಲ್ಡ್ ವೆರಿಫಿಕೇಷನ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. (ದ್ವಿಚಕ್ರ ವಾಹನ ಕಡ್ಡಾಯ)

ಶೇಖರ್: 9945911118
ಅನಿಲ್: 7026996123

ARTHOR SERVICES PVT.LTD
NO.L-89, 2nd Floor, M Block, Opp. Karuna Hospital, Kuvempunagar, Mysore-570023

WANTED

Required Field Executives Male Condidates

Mail Id:
bilvshree24@gmail.com

9606062178

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಹಲೋ... ನಾವು ಕಸ್ಟಮ್ಸ್ ಆಫೀಸರ್; ನಿಮ್ಮ ಹೆಸರಲ್ಲಿರುವ ಪಾರ್ಸಲ್ ವಶಪಡಿಸಿಕೊಂಡಿದ್ದೇವೆ ತನಿಖೆಗೆ ಬನ್ನಿ...!

ನಿಮ್ಮ ಬ್ಯಾಂಕ್ ಖಾತೆಯಲ್ಲಿ ಅಕ್ರಮ ಹಣ ವರ್ಗಾವಣೆ ಆಗಿದೆ; ತನಿಖೆಗೆ ಬ್ಯಾಂಕ್ ಖಾತೆ ವಿವರಗಳನ್ನ ನೀಡಿ...!!

ಯಾರೇ ಕರೆ ಮಾಡಿ ಹೀಗೆ ಹೇಳಿದರೆ ಎಚ್ಚರ... ಎಚ್ಚರ... ಅವರು ವಂಚಕರು...!!!

ಮೈಸೂರಿನ ರಘುಲಾಲ್ ರಾಘವನ್ ಅವರಿಗೆ ವಂಚಕರ ಜಾಲದಿಂದ ಆದ ಅನುಭವ ಅಚ್ಚರಿ-ಆತಂಕಕಾರಿ



ಮೈಸೂರು, ಮಾ.27–ಸೈಬರ್ ಅಪರಾಧಗಳು ದಿನೇ ದಿನೆ ಹೆಚ್ಚಾಗುತ್ತಿರುವುದು ಮಾತ್ರವಲ್ಲ, ಹೊಸ ಹೊಸ ವಂಚನೆ ಮಾರ್ಗಗಳನ್ನು ಅನುಸರಿಸಿ, ಅಮಾಯಕರನ್ನು ವಂಚಿಸುವ ಪ್ರಯತ್ನಗಳು ನಿತ್ಯವೂ ನಡೆಯುತ್ತಿವೆ. ಅವರೇನು ಸುಖಾಸುಮ್ಮನೆ ಕರೆ ಮಾಡಲ್ಲ. ಎಲ್ಲಾ ಮಾಹಿತಿ ಕಲೆ ಹಾಕಿಕೊಂಡು ಕಾರ್ಯಾಚರಣೆಗಿಳಿಯುತ್ತಾರೆ. ಇದರಲ್ಲಿ ಸ್ವಲ್ಪ ಯಾಮಾರಿದರೂ ಭಾರಿ ಪ್ರಮಾಣದ ದಂಡ ತೆರಬೇಕಾಗುತ್ತದೆ. ಒಂದು ವೇಳೆ ದುರ್ಬಲ ಮನಸ್ಥಿತಿಯವರು ಇಂತಹವರ ಕಪಿಮುಷ್ಟಿಗೆ ಗುರಿಯಾದರೆ, ಆಘಾತದಿಂದ ಪ್ರಾಣ ಹಾನಿಯೂ ಸಂಭವಿಸಬಹುದು.

ದೆಹಲಿ ಪೊಲೀಸರು, ಜಾರಿ ನಿರ್ದೇಶನಾಲಯ, ವಿಮಾನ ನಿಲ್ದಾಣದ ಭದ್ರತಾ ಅಧಿಕಾರಿಗಳು, ಸಿಬಿಐ ಅಧಿಕಾರಿಗಳ ಹೆಸರು ಹಾಗೂ ಇಲಾಖೆಗಳ ಲೋಗೋಗಳನ್ನು ಯಥಾವತ್ ನಕಲು ಮಾಡಿ ವಂಚಕರು ನಮಗೆ ಕರೆ ಮಾಡುತ್ತಾರೆ. ಅವರು ನಮಗೆ ಸಂಬಂಧಿಸಿದಂತೆ ನೀಡುವ ಮಾಹಿತಿಗಳು, ನಿಶ್ಚಿತವಾಗಿ ನಿಖರವಾಗಿ ನಮಗೆ ಹೋಲಿಕೆಯಾಗುತ್ತವೆ. ಅವುಗಳನ್ನು ಕಂಡಾಕ್ಷಣ ನಾವು ಅಕ್ಷರಶಃ ಮಾನಸಿಕವಾಗಿ ಕುಸಿದೇ ಹೋಗುತ್ತೇವೆ, ಕಸಿವಿಸಿ ಆಗುವುದುಂಟು. ದುರ್ಬಲ ಮನಸ್ಸಿನವರಾದರೆ ಮುಗಿದೇ ಹೋಯಿತು. ನಾವು ಯಾವುದೇ ತಪ್ಪು ಮಾಡದಿದ್ದರೂ ಈ ಸಮಸ್ಯೆಯಿಂದ ಪಾರಾಗುವುದು ಹೇಗೆ ಎಂದು ಚಿಂತಿಸತೊಡಗುತ್ತೇವೆ. ನಮ್ಮ ಮಾನಸಿಕ ದೌರ್ಬಲ್ಯವನ್ನು ವಂಚಕರು ತಮ್ಮ ಕಾರ್ಯ ಸಾಧನೆಗೆ ಬಳಸಿಕೊಳ್ಳುತ್ತಾರೆ. ತನಿಖೆ ಹೆಸರಿನಲ್ಲೇ ವಿವಿಧ ಶುಲ್ಕಗಳು ಎಂದು ಹೇಳುತ್ತಾ ನಮ್ಮಿಂದ ಲಕ್ಷಾಂತರ ರೂ.ಗಳನ್ನು ಅಕ್ರಮವಾಗಿ ವರ್ಗಾವಣೆ ಮಾಡಿಸಿಕೊಳ್ಳುತ್ತಾರೆ. ಅವರು ಕೇಳಿದರೆಂಬ ಮಾತ್ರಕ್ಕೆ ಮಾನಸಿಕವಾಗಿ ಕುಗ್ಗಿ ಹೋಗಿ ನಾವು ಬ್ಯಾಂಕ್ ಖಾತೆ ವಿವರಗಳನ್ನು ಕೊಟ್ಟರೆ ಖಾತೆಯಲ್ಲಿರುವ ಅಷ್ಟೂ


CONFIDENTIALITY AGREEMENT

INDIA

Special Director : PRAVEEN SOOD

Investigation Unit: Central Bureau of Investigation


OFFICE OF THE COMMISSIONER OF CUSTOMS
(AIRPORT & GENERAL)
IGI AIRPORT,TERMINAL- 3, NEW DELHI-110037

(CASE REPORT FILE)

This Is To Inform That The Parcel Has Been Cancelled , Which Is Going From Delhi To Malaysia , Because Many Illegal Items Found In It. According To The Law This Person Has To Be Investigated Before The Orders Reaches Court.

Parcel Information And Details :-

Parcel Number	: IND0835461720
Date	: 16/03/2024
Items	: 16 Fake Passport 58 ATM Cards 140gms MDMA
Transaction ID	: 401811759660
Sender Name	: N RAGHAVAN
Aadhar Number	: 6268 9625 2500
Mobile Number	: 9845107907
Receiver Name	: Wang Zhang
Receiver Address	: Jalan Subang Mas, Subang Jaya, Section 24, Kuala lumpur, 47620 (Malaysia)

REJECTED

(Additional Commissioner Of Customs)
IGI Airport,New Delhi

सत्यमेव जयते

ವಂಚಕನಿಂದ ರಘುಲಾಲ್ ರಾಘವನ್ ಅವರಿಗೆ ಬಂದಂತಹ ನಕಲಿ ದಾಖಲೆಗಳು.

ಹಣವನ್ನು ಲಪಟಾಯಿಸಿ ಬಿಡುತ್ತಾರೆ. ಅಷ್ಟಕ್ಕೂ ಇಂತಹ ವಂಚಕರಿಗೆ ಬಲಿಯಾಗುತ್ತಿರುವುದಂತೂ ವಿದ್ಯಾವಂತರೇ ಹೆಚ್ಚು. ಇವರ ಟಾರ್ಗೆಟ್ ಸ್ಥಿತಿವಂತರ ಮೇಲೆಯೇ ಇರುತ್ತದೆ. ಇದು ಪ್ರತೀ ನಿತ್ಯವೂ ನಡೆಯುತ್ತಾ ಬಂದಿದೆ.

ಇದಕ್ಕೆ ಒಂದು ತಾಜಾ ಉದಾಹರಣೆ. ಇಂದು ಬೆಳಗ್ಗೆ ಮೈಸೂರಿನ ಪ್ರಸಿದ್ಧ ರಘುಲಾಲ್ ಅಂಡ್ ಕಂಪನಿ ಮಾಲೀಕರಾದ ಎನ್.ರಾಘವನ್ ಅವರಿಗೆ ಆದಂತಹ ಅನುಭವ ಅಚ್ಚರಿ ಮಾತ್ರವಲ್ಲ, ಆತಂಕಕಾರಿ.

ಇಂದು ಬೆಳಗ್ಗೆ ರಾಘವನ್ ಅವರಿಗೆ 918528083919 ನಂಬರ್‌ನಿಂದ ಕರೆಯೊಂದು ಬಂದಿದೆ. ಈ ರೀತಿ ಕರೆ ಮಾಡಿದಾತ, ದೆಹಲಿಯಿಂದ ಮಲೇಷಿಯಾಕ್ಕೆ ನೀವು ಕಳುಹಿಸುತ್ತಿದ್ದಂತಹ 16 ನಕಲಿ ಪಾಸ್‌ಪೋರ್ಟ್, 58 ಎಟಿಎಂ ಕಾರ್ಡ್‌ಗಳು, 140 ಗ್ರಾಂ ಎಂಡಿಎಂಎ (ಮಾದಕ ವಸ್ತು) ಉಳ್ಳ ಪಾರ್ಸಲ್ ಅನ್ನು ದೆಹಲಿ ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಕಮಿಷ್ನರ್ ವಶಪಡಿಸಿಕೊಂಡಿದ್ದು, ಅದರ ಬಗ್ಗೆ ತನಿಖೆ ಮಾಡಬೇಕಾಗಿದೆ ಎಂದಿದ್ದಾನೆ. ಜೊತೆಗೆ ಈ ಪಾರ್ಸಲ್ ಮೇಲೆ ನಿಮ್ಮ ಆಧಾರ್ ಸಂಖ್ಯೆ, ಮೊಬೈಲ್ ನಂಬರ್, ಸ್ವೀಕರಿಸುವವರ ಹೆಸರು ಮತ್ತು ವಿಳಾಸ, ವಹಿವಾಟು ಐಡಿ ಸಂಖ್ಯೆ, ಪಾರ್ಸಲ್ ನಂಬರ್, ಕಳುಹಿಸಿದ ದಿನಾಂಕ (16–3–2024) ಇದೆ ಎಂದು ಎಲ್ಲವನ್ನೂ ತಿಳಿಸಿದ್ದಾನೆ.

ಆಶ್ಚರ್ಯಕರ ಸಂಗತಿಯೆಂದರೆ ಆತ ಹೇಳಿದ ಆಧಾರ್ ನಂಬರ್, ಮೊಬೈಲ್ ನಂಬರ್ ರಾಘವನ್ ಅವರದ್ದೇ ಆಗಿದ್ದವು. ಇದರ ಬಗ್ಗೆ ತನಿಖೆಯಾಗಬೇಕಾಗಿದೆ. ಇದಕ್ಕೆ ನೀವು ಸಹಕರಿಸಬೇಕು. ಇದನ್ನು ದೆಹಲಿಯ ಪ್ರಥಮ ದರ್ಜೆ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಮೂಲಕ ನವದೆಹಲಿಯ ಕನೌಟ್ ಪೊಲೀಸ್ ಠಾಣೆಯ ಪ್ರಭಾರ ಪೊಲೀಸ್ ಅಧಿಕಾರಿಗೆ ತನಿಖೆಗಾಗಿ ಕಳುಹಿಸಲಾಗಿದೆ ಎಂದು ಹೇಳಿ, ಇದಕ್ಕೆ ಸಂಬಂಧಿಸಿದಂತೆ ನಮೂದಿಸಿರುವ ಐಪಿಸಿ ಸೆಕ್ಷನ್ 359, 360, 364ಎ, 370, 390, 400, 411, 413 ಮತ್ತು 414 ಒಳಗೊಂಡ ಅರೆಸ್ಟ್ ವಾರೆಂಟ್ ಪ್ರತಿಯನ್ನು ರಾಘವನ್ ಅವರಿಗೆ ವಾಟ್ಸಾಪ್ ಮೂಲಕ ಕಳುಹಿಸಿದ್ದಾನೆ.

ಇದರ ಜೊತೆಗೆ ನೀವು ಹೆಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ಮನೆ ಹಾಗೂ ಕಾರು ಖರೀದಿಸಲು ಸಾಲ ಪಡೆದಿದ್ದೀರಿ. ಈ ಹೆಚ್‌ಡಿಎಫ್‌ಸಿ ಬ್ಯಾಂಕ್‌ನ ಮುಂಬೈ ಅಧಿಕಾರಿ ಸಂಜಯ್ ಸಿಂಗ್ ಎಂಬಾತ ನಿಮ್ಮ ದಾಖಲೆಗಳನ್ನು ಬಳಸಿಕೊಂಡು ನಿಮ್ಮದೇ ಹೆಸರಲ್ಲಿ ಖಾತೆ ತೆರೆದು ಅಕ್ರಮ ಹಣ ವರ್ಗಾವಣೆ ದಂಧೆ ನಡೆಸುತ್ತಿದ್ದಾನೆ. ಆತನಿಗೆ ನೀವು ನಿಮ್ಮ ಖಾತೆಯಲ್ಲಿ ಹಣಕಾಸು ವ್ಯವಹಾರ ನಡೆಸಲು ಸಂಪೂರ್ಣ ಸ್ವಾತಂತ್ರ್ಯ ನೀಡಿದ್ದೀರಿ. ಆತ ಸುಮಾರು 380 ಕೋಟಿ ಅಕ್ರಮ ಹಣ ವರ್ಗಾವಣೆ ಮಾಡಿದ್ದಾನೆ. ಅದರಲ್ಲಿ ಸುಮಾರು 38 ಕೋಟಿ ರೂಪಾಯಿ ನಿಮ್ಮ ಖಾತೆಗೆ ಸಂದಾಯವಾಗಿದೆ. ಆತನ ಅಕ್ರಮ ಹಣ ವರ್ಗಾವಣೆಯ ಸಂಬಂಧವೂ ತನಿಖೆ ನಡೆಸಲಾಗುತ್ತಿದೆ. ಹಾಗಾಗಿ ಅಕ್ರಮ ಹಣ ವಹಿವಾಟು ಸೆಕ್ಷನ್ 411, 413 ಹಾಗೂ 414 ದಾಖಲಿಸಿ ದೆಹಲಿ ಪ್ರಥಮ ದರ್ಜೆ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ನವದೆಹಲಿಯ ಪೊಲೀಸ್ ಠಾಣೆಯ ಪ್ರಭಾರ ಪೊಲೀಸ್ ಅಧಿಕಾರಿಗೆ ತನಿಖೆ ನಡೆಸಲು ಆದೇಶಿಸಿದೆ ಎಂದು ತಿಳಿಸಿದ್ದಾನೆ.

ಇದಲ್ಲದೇ ಈ ಅಕ್ರಮ ಹಣ ವಹಿವಾಟು ಮತ್ತು ಮಾನವ ಕಳ್ಳ ಸಾಗಾಣೆ ಪ್ರಕರಣದ ಸಂಬಂಧ ತನಿಖೆ ನಡೆಸಬೇಕಾಗಿದ್ದು, ಈ ಅಪರಾಧದ ವಿಚಾರದಲ್ಲಿ ರಹಸ್ಯವನ್ನು ಕಾಯ್ದುಕೊಳ್ಳಬೇಕಾಗಿರುವುದರಿಂದ ತನಿಖೆಗೆ ಪೂರ್ಣ ಸಹಕರಿಸುವಂತೆ ಸಿಬಿಐ ಸ್ಪೆಷಲ್ ಡೈರೆಕ್ಟರ್ ಪ್ರವೀಣ್ ಸೂದ್ ಅವರು ಸಹಿ ಮಾಡಿರುವ ರಹಸ್ಯ ಒಪ್ಪಂದದ ಪ್ರತಿಯನ್ನೂ ಕಳುಹಿಸಿದ್ದಾನೆ.

ಇದೇ ವೇಳೆ ಆ ಅಪರಿಚಿತ, ಸಂಜಯ್ ಸಿಂಗ್ ನಿಮ್ಮ ಹೆಸರಿನ ಖಾತೆಯಲ್ಲಿ ನಡೆಸಿರುವ ಹಣದ ವಹಿವಾಟಿನ ಸಂಬಂಧ ತನಿಖೆ ಅವಶ್ಯವಾಗಿದ್ದು, ನಿಮ್ಮ ಇನ್ನಿತರ ಬ್ಯಾಂಕ್ ಖಾತೆಯಲ್ಲಿನ ವ್ಯವಹಾರದ ಮಾಹಿತಿಯನ್ನು ಒದಗಿಸುವಂತೆಯೂ ಕೇಳಿದ್ದಾನೆ. ಈ ವೇಳೆ ಎಚ್ಚೆತ್ತುಕೊಂಡ ರಾಘವನ್, ಸಿಬಿಐ ಹಾಲಿ ನಿರ್ದೇಶಕರಾದ ಪ್ರವೀಣ್ ಸೂದ್ ಅವರು ಈ ಹಿಂದೆ ನಮ್ಮ ಮೈಸೂರು ನಗರ ಪೊಲೀಸ್ ಕಮಿಷ್ನರ್ ಆಗಿದ್ದವರು. ನನ್ನೊಂದಿಗೆ ಆತ್ಮೀಯ ಸಂಬಂಧವನ್ನು ಹೊಂದಿದ್ದವರು. ಹಲವಾರು ಬಾರಿ ಔತಣಕೂಟದಲ್ಲಿ ಸೇರಿದ್ದೆವು. ಈಗಲೂ ಅವರೊಂದಿಗೆ ನನಗೆ ಒಳ್ಳೆಯ ಸಂಪರ್ಕವಿದೆ. ಅವರ ಪರ್ಸನಲ್ ನಂಬರ್ ಸಹ ನನ್ನ ಬಳಿ ಇದೆ ಎಂದು ಹೇಳುತ್ತಿದ್ದಂತೆ ವಂಚಕ ಕೆಲ ಕ್ಷಣ ಮೌನಕ್ಕೆ ಶರಣಾಗಿದ್ದಾನೆ.

ಕೂಡಲೇ ಎಚ್ಚೆತ್ತುಕೊಂಡ ರಾಘವನ್ ಅವರು, ಆ ಕರೆಯನ್ನು ಹೋಲ್ಡ್ ಮಾಡಿ ಮೈಸೂರಿನ ಒಂಟಿಕೊಪ್ಪಲು ಪೊಲೀಸ್ ಠಾಣೆಯಲ್ಲಿ ಸೈಬರ್ ಕ್ರೈಂ ವಿಭಾಗದಲ್ಲಿ ಕಾರ್ಯ ನಿರ್ವಹಿಸುವ ಸೋಮಶೇಖರ್ ಎಂಬುವರನ್ನು ಸಂಪರ್ಕಿಸಿದ್ದಾರೆ. ಅವರಿಗೆ ಅಪರಿಚಿತ ತನ್ನ ಸಂಪರ್ಕದಲ್ಲಿರುವ ವಿಚಾರ ತಿಳಿಸಿ, ಆ ಮೊಬೈಲ್ ನಂಬರ್ ಅನ್ನು ಅವರಿಗೆ ಕಳುಹಿಸಿದ್ದಾರೆ. ಕರೆ ಹೋಲ್ಡ್ ಮಾಡಿದ್ದಕ್ಕೆ ಅಪರಿಚಿತ ಅನುಮಾನಗೊಂಡು ಅದಕ್ಕೂ ಪ್ರಶ್ನಿಸಿದ್ದಾನೆ. ಆದರೆ ರಾಘವನ್, ಆಟೋಮ್ಯಾಟಿಕ್ ಆಗಿ ಹಾಗಾಗಿದೆ, ಏನಿಲ್ಲಾ ಎಂದಿದ್ದಾರೆ. ಯಾವಾಗ ಪ್ರವೀಣ್ ಸೂದ್ ಅವರ ಸಂಪೂರ್ಣ ಪರಿಚಯವನ್ನು ರಾಘವನ್ ಹೇಳಿದರೋ ಅಷ್ಟರಲ್ಲೇ ವಿಚಲಿತನಾಗಿದ್ದ ಆತ, ಏನಿಲ್ಲಾ ಬಿಡಿ ಈ ಪಾರ್ಸಲ್ ಮೇಲೆ ಬಹುಶಃ ತಪ್ಪಾಗಿ ನಿಮ್ಮ ವಿಳಾಸ ನಮೂದಾಗಿದೆ. ಇದರ ಬಗ್ಗೆ ನಾವು ಸೂಕ್ತ ತನಿಖೆ ನಡೆಸಿ ಪ್ರಕರಣವನ್ನು ಅಂತ್ಯಗೊಳಿಸುತ್ತೇವೆ. ನೀವೇನೂ ಚಿಂತೆ ಮಾಡಬೇಡಿ ಎಂದು ಕರೆ ಕಟ್ ಮಾಡಿದ್ದಾನೆ.


ಅಷ್ಟರಲ್ಲಿ ಒಂಟಿಕೊಪ್ಪಲು ಪೊಲೀಸ್ ಠಾಣೆಯ ಸೈಬರ್ ಪ್ರಕರಣ ವಿಭಾಗದ ಸೋಮಶೇಖರ್ ಕರೆ ಮಾಡಿ ನಿಮ್ಮನ್ನು ಸಂಪರ್ಕಿಸಿದ ವ್ಯಕ್ತಿಯ ಹೆಸರು ಅನಿಲ್ ಕುಮಾರ್ ಸನ್ ಆಫ್ ಬಾಬು ಸಿಂಗ್. ಜಾಲಾಖಾನಾಪುರ್ ನಗರ್, ಉತ್ತರ ಪ್ರದೇಶ್. ಇದು ವಂಚಕರ ಜಾಲವಾಗಿದ್ದು, ಎಚ್ಚರ, ಆತನೊಂದಿಗೆ ಯಾವುದೇ ಮಾಹಿತಿಯನ್ನು ಹಂಚಿಕೊಳ್ಳಬೇಡಿ ಎಂದು ಎಚ್ಚರಿಸಿದಾಗ ರಾಘವನ್ ನಿಟ್ಟುಸಿರು ಬಿಟ್ಟಿದ್ದಾರೆ. ತಮಗೆ ಆದಂತಹ ಅನುಭವವನ್ನು ರಾಘವನ್ 'ಮೈಸೂರು ಮಿತ್ರ'ನಲ್ಲಿ ಹಂಚಿಕೊಂಡಿದ್ದಾರೆ.

ಕಂಡ ಕಂಡಲ್ಲಿ ನೀಡುವ ಆಧಾರ್, ಮೊಬೈಲ್ ಸಂಖ್ಯೆ ವಂಚಕರಿಗೆ ವರದಾನ


ರಾಘವನ್

ಮೈಸೂರು, ಮಾ.27–ತಮಗೆ ಕರೆ ಮಾಡಿದ ಅಪರಿಚಿತ ತನ್ನ ಮೊಬೈಲ್ ನಂಬರ್, ಆಧಾರ್ ನಂಬರ್ ಹಾಗೂ ಬ್ಯಾಂಕ್ ವಿವರ, ಉಳಿದೆಲ್ಲಾ ಮಾಹಿತಿಯನ್ನು ನಿಖರವಾಗಿ ಹೇಳುವುದು ಹೇಗೆ ಸಾಧ್ಯ? ಎಂಬುದು ರಘುಲಾಲ್ ರಾಘವನ್ ಅವರ ಪ್ರಶ್ನೆ.

ಬ್ಯಾಂಕ್‌ಗಳಲ್ಲಿ ಆಗಾಗ ನಮ್ಮಿಂದ ಸಂಗ್ರಹಿಸಲಾಗುವ ಆಧಾರ್ ಪ್ರತಿ ಇಲ್ಲವೇ ಸಂಖ್ಯೆ, ಸಿಮ್ ಕಾರ್ಡ್ ಖರೀದಿಗೆ ನೀಡಲಾಗುವ ಆಧಾರ್ ವಿವರ, ಇನ್ನಿತರ ಸಂದರ್ಭಗಳಲ್ಲಿ ನಾವೇ ನೀಡಲಾಗುವ ಆಧಾರ್ ಮತ್ತು ಮೊಬೈಲ್ ಸಂಖ್ಯೆ ವಂಚಕರ ಕೈಸೇರುತ್ತಿದೆ ಎಂಬುದು ಇಂತಹ ಪ್ರಕರಣಗಳಿಂದ ಖಚಿತವಾಗುತ್ತಿದೆ ಎಂದು ರಾಘವನ್ ಆತಂಕ ವ್ಯಕ್ತಪಡಿಸಿದ್ದಾರೆ. ತಮ್ಮ ಮೊಬೈಲ್‌ಗಳಿಗೆ ಪದೇ ಪದೇ ಕೆಲವು ಕಂಪನಿಗಳ ಜಾಹೀರಾತುಗಳು ಬರುತ್ತವೆ. ಕೆಲವು ಖಾಸಗಿ ಬ್ಯಾಂಕ್‌ನವರು ನಮಗೆ ಕರೆ ಮಾಡಿ ನಿಖರವಾಗಿ ನಮ್ಮ ಹೆಸರನ್ನು ಹೇಳಿ ತಮ್ಮ ಬ್ಯಾಂಕ್‌ನ ವಹಿವಾಟಿನ ಬಗ್ಗೆ ವಿವರಗಳನ್ನು ಪಡೆಯುತ್ತಾರೆ. ನಮ್ಮ ಮೊಬೈಲ್ ಸಂಖ್ಯೆ ಇವರಿಗೆ ಹೇಗೆ ಸಿಕ್ಕಿತು ಎಂದು ತಲೆ ಕೆಡಿಸಿ ಕೊಳ್ಳುತ್ತೇವೆ. ವಾಸ್ತವವಾಗಿ ನಮ್ಮ ಮೊಬೈಲ್ ಸಂಖ್ಯೆಗಳನ್ನು ಹಾಗೂ ಆಧಾರ್ ಸಂಖ್ಯೆಯನ್ನು ಸಂಗ್ರಹಿಸುವ ಹಲವಾರು ಕಂಪನಿಗಳಿವೆ. ಈ ಕಂಪನಿಗಳಿಂದ ಖಾಸಗಿ ಬ್ಯಾಂಕ್ ಸೇರಿದಂತೆ ಕೆಲವು ಪ್ರತಿಷ್ಠಿತ ಸಂಸ್ಥೆಗಳು ಹಣ ನೀಡಿ ಮೊಬೈಲ್ ಡಾಟಾ ಖರೀದಿ ಮಾಡಿಕೊಂಡು ತಮ್ಮ ಜಾಹೀರಾತಿಗಾಗಿ ಬಳಸಿಕೊಳ್ಳುತ್ತವೆ. ಈ ವಿಚಾರ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕೆಲಸ ಮಾಡುವ ಬಹುತೇಕರಿಗೆ ಗೊತ್ತಿರುತ್ತದೆ. ಅದೇ ರೀತಿ ಮಾಹಿತಿ ತಂತ್ರಜ್ಞಾನವನ್ನು ಅರಿತಿರುವ ಖದೀಮರು ನಮ್ಮ ಡಾಟಾಗಳನ್ನು ನಮಗರಿವಿಲ್ಲದಂತೆಯೇ ಸಂಗ್ರಹಿಸಿ ಸೈಬರ್ ಕ್ರೈಂನಲ್ಲಿ ತೊಡಗುತ್ತಾರೆ. ಸೈಬರ್ ಕ್ರೈಂ ಜಾಲ ಕೇವಲ ಅಂತರರಾಷ್ಟ್ರೀಯ ಮಟ್ಟದಲ್ಲಿ ಕಾರ್ಯ ನಿರ್ವಹಿಸುವುದರಿಂದ ಈ ವಂಚಕರಿಂದ ಕಳೆದುಕೊಂಡ ಹಣವನ್ನು ಪಡೆಯುವುದಂತೂ ಕನಸಿನ ಮಾತು. ಈಗಾಗಲೇ ಎಷ್ಟೋ ಜನ ಅಮಾಯಕರು ಇಂತಹ ವಂಚಕರ ಜಾಲಕ್ಕೆ ಬಲಿಯಾಗಿದ್ದಾರೆ. ಇದು ಒಂದು ರೀತಿ ಸಿಂಡಿಕೇಟ್ ಆಗಿ ಕಾರ್ಯಾಚರಿಸುತ್ತಿದೆ ಇದರ ಬಗ್ಗೆ ಎಚ್ಚೆತ್ತುಕೊಳ್ಳದಿದ್ದಲ್ಲಿ ಭಾರಿ ಮೋಸ ಹೋಗುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ ಎಂದು ಅವರು ತಿಳಿಸಿದ್ದಾರೆ.



ಕರೆ ಮಾಡಿದ ವಂಚಕನ ವಾಟ್ಸಾಪ್ ಡೀಪಿ

ಮೆದುಳು ಶಸ್ತ್ರಚಿಕಿತ್ಸೆ: ಸದ್ಗುರು ಜಗ್ಗಿ ವಾಸುದೇವ್ ಆಸ್ಪತ್ರೆಯಿಂದ ಬಿಡುಗಡೆ



ನವದೆಹಲಿ, ಮಾ.27– ಇತ್ತೀಚೆಗೆ ದೆಹಲಿಯ ಇಂದ್ರಪ್ರಸ್ಥದ ಅಪೋಲೋ ಆಸ್ಪತ್ರೆಯಲ್ಲಿ ತುರ್ತು ಮೆದುಳು ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಆಧ್ಯಾತ್ಮಿಕ ನಾಯಕ ಜಗ್ಗಿ ವಾಸುದೇವ್ ಅವರು ಬುಧವಾರ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ ಎಂದು ಆಸ್ಪತ್ರೆ ಮೂಲಗಳು ಬುಧವಾರ ತಿಳಿಸಿವೆ.

ಇಂದ್ರಪ್ರಸ್ಥ ಅಪೋಲೋ ಆಸ್ಪತ್ರೆಯ ಪ್ರಕಾರ, ಈಶಾ ಫೌಂಡೇಶನ್ ಸಂಸ್ಥಾಪಕ ಸದ್ಗುರು ಜಗ್ಗಿ ವಾಸುದೇವ್ ಅವರ ತಲೆ ಬುರುಡೆಯಲ್ಲಿ 'ಮಾರಣಾಂತಿಕ' ರಕ್ತಸ್ರಾವ ಉಂಟಾದ ನಂತರ ಮಾರ್ಚ್ 17ರಂದು ಅವರಿಗೆ ಮೆದುಳಿನ ಶಸ್ತ್ರಚಿಕಿತ್ಸೆ ನಡೆಸಲಾಯಿತು. ಆಸ್ಪತ್ರೆಯಿಂದ ಹೊರಬರುತ್ತಿರುವ ಸದ್ಗುರು ಅವರನ್ನು ಅನುಯಾಯಿಗಳು ಅವರನ್ನು ಸ್ವಾಗತಿಸುತ್ತಿರುವ ವಿಡಿಯೋ ತುಣುಕು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಸದ್ಗುರು ಅವರ ಶಸ್ತ್ರಚಿಕಿತ್ಸೆ ನೆರವೇರಿಸಿದ ವೈದ್ಯರ ತಂಡದ ನೇತೃತ್ವ ವಹಿಸಿದ್ದ ಆಸ್ಪತ್ರೆಯ ಹಿರಿಯ ಸಲಹೆಗಾರ ನರರೋಗ ತಜ್ಞ ವಿನಿತ್ ಸೂರಿ, ಸದ್ಗುರು ಅವರ ಜೀವಕ್ಕೆ ಕುತ್ತು ಉಂಟಾಗುವ ಪರಿಸ್ಥಿತಿ ಎದುರಾಗಿದೆ ಎಂದು ಹೇಳಿದ್ದರು.

ತೀವ್ರ ತಲೆನೋವಿನಿಂದ ಬಳಲುತ್ತಿದ್ದ ಸದ್ಗುರು ಅವರು ಮಾರ್ಚ್ 15ರಂದು ನರರೋಗ ತಜ್ಞ ಡಾ. ವಿನಿತ್ ಸೂರಿ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿದ್ದರು. ವೈದ್ಯರ ಸಲಹೆ ಮೇರೆಗೆ ಎಂಆರ್‌ಐ ಮಾಡಿಸಿದಾಗ, ರಕ್ತಸ್ರಾವವಾಗುತ್ತಿರುವುದು ಕಂಡು ಬಂದಿತ್ತು. ಕೂಡಲೇ ಆಸ್ಪತ್ರೆಗೆ ದಾಖಲಾಗುವಂತೆ ಸೂಚಿಸಲಾಗಿತ್ತಾದರೂ, ಅದಾದ ಎರಡು ದಿನಗಳ ಬಳಿಕ ಸದ್ಗುರು ಆಸ್ಪತ್ರೆಗೆ ದಾಖಲಾಗಿದ್ದರು.

ನಕಲಿ ಇ–ಬ್ಯಾಂಕ್ ಗ್ಯಾರಂಟಿಗಳಿಂದ ಬ್ಯಾಂಕ್‌ಗಳಿಗೆ 168 ಕೋಟಿ ರೂ. ವಂಚನೆ

ಕುವೈತ್‌ನಲ್ಲಿ ಅಡಗಿದ್ದ ಲೆಕ್ಕಪರಿಶೋಧಕ ಬಂಧನ

ಬೆಂಗಳೂರು, ಮಾ.27– ಬ್ಯಾಂಕ್ ಸಾಲಗಳಿಗೆ ನೀಡಲಾಗುವ ಇ–ಬ್ಯಾಂಕ್ ಗ್ಯಾರಂಟಿಗಳನ್ನು ನಕಲಿಯಾಗಿ ಸೃಷ್ಟಿಸಿ ಬರೋಬ್ಬರಿ 168 ಕೋಟಿ ರೂ. ವಂಚಿಸಿ, ವಿದೇಶದಲ್ಲಿ ಅಡಗಿ ಕುಳಿತಿದ್ದ ಆರೋಪಿಯನ್ನು ಬೆಂಗಳೂರು ಸೈಬರ್ ಕ್ರೈಂ ಪೊಲೀಸರು ಬಂಧನಕ್ಕೊಳಪಡಿಸಿದ್ದಾರೆ.

ಉತ್ತರಪ್ರದೇಶದ ನೋಯ್ಡಾ ನಗರದ ಆಶೀಶ್ ಸಕ್ಸೇನಾ ಅಲಿಯಾಸ್ ಆಶೀಶ್ ರಾಯ್ ಬಂಧಿತ ಆರೋಪಿ. ಆರೋಪಿಯಿಂದ 2 ಲ್ಯಾಪ್‌ಟಾಪ್‌ಗಳು, 6 ಮೊಬೈಲ್‌ಗಳು, ಒಂದು ಪೆನ್ ಡ್ರೈವ್ ಹಾಗೂ 10 ವಿವಿಧ ಬ್ಯಾಂಕ್‌ಗಳ ಚೆಕ್ ಪುಸ್ತಕಗಳನ್ನು ಜಪ್ತಿ ಮಾಡಲಾಗಿದೆ. ತಪ್ಪಿಸಿಕೊಂಡಿರುವ ಮತ್ತೋರ್ವ ಆರೋಪಿಗಾಗಿ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಸಾರ್ವಜನಿಕ ವಲಯದ ಬ್ಯಾಂಕುಗಳಿಂದ ಪಡೆಯುವ ಸಾಲಗಳಿಗೆ ಸಂಬಂಧಪಟ್ಟವರು ನೀಡುವ ಇ–ಬ್ಯಾಂಕ್ ಗ್ಯಾರಂಟಿಗಳ ನೈಜತೆಯನ್ನು ರಾಷ್ಟ್ರೀಯ ಇ–ಗೌರ್ವನ್ಸ್ ಸರ್ವಿಸ್ ಲಿಮಿಟೆಡ್ (ಎನ್‌ಇಎಸ್‌ಎಲ್) ಎಂಬ ಅರೆ ಸರ್ಕಾರಿ ನೋಂದಾಯಿತ ಸಂಸ್ಥೆ ಪರಿಶೀಲನೆ ನಡೆಸುತ್ತದೆ.

ಪರಿಶೀಲನೆಯ ವೇಳೆ 168,13,23,994 ರೂ. ಸಾಲ ಪಡೆಯಲು 11 ವ್ಯಕ್ತಿಗಳು ನೀಡಿರುವ ಬ್ಯಾಂಕ್ ಗ್ಯಾರಂಟಿ ನಕಲಿ ಎಂಬುದು ಪತ್ತೆಯಾಗಿದೆ. ಈ ಹಿನ್ನೆಲೆಯಲ್ಲಿ ಎನ್‌ಇಎಸ್‌ಎಲ್ ಅಧಿಕಾರಿ ಬೆಂಗಳೂರು ನಗರದ ಸೈಬರ್ ಕ್ರೈಂ ಪೊಲೀಸ್ ಠಾಣೆಗೆ ಕಳೆದ ತಿಂಗಳು ದೂರು ನೀಡಿದ್ದರು.

ತನಿಖೆ ಕೈಗೊಂಡ ಪೊಲೀಸ್ ಅಧಿಕಾರಿಗಳು 11 ವ್ಯಕ್ತಿಗಳು ನೀಡಿದ ದಾಖಲಾತಿಗಳು, ಮೊಬೈಲ್ ನಂಬರುಗಳು ಹಾಗೂ ಬ್ಯಾಂಕ್ ಖಾತೆಗಳನ್ನು ಪರಿಶೀಲಿಸಿದ್ದಾರೆ.

ಇಬ್ಬರು ವ್ಯಕ್ತಿಗಳು ಐಸಿಐಸಿಐ ಬ್ಯಾಂಕ್ ಮತ್ತು ಸೌತ್ ಇಂಡಿಯನ್ ಬ್ಯಾಂಕ್ ಹೆಸರಿನಲ್ಲಿ ನೀಡಲಾಗಿದೆ ಎಂದು ಹೇಳಲಾದ ಇ–ಬ್ಯಾಂಕ್ ಗ್ಯಾರಂಟಿಗಳನ್ನು ನಕಲಿಯಾಗಿ ಸೃಷ್ಟಿಸಿ 11 ಜನರ ಸಾಲಕ್ಕೆ ಖಾತ್ರಿಯನ್ನಾಗಿ ಒದಗಿಸಿದ್ದಾರೆ. ಇ–ಬ್ಯಾಂಕ್ ಗ್ಯಾರಂಟಿ ಸೇವೆ ನೀಡಲು ಸಾಲ ಪಡೆದವರಿಂದ ಆರೋಪಿಗಳು 5 ಕೋಟಿ ರೂ.ಗಳ ಕಮಿಷನ್ ಪಡೆದಿರುವುದು ಪತ್ತೆಯಾಗಿದೆ.

ಆರೋಪಿಗಳ ಪತ್ತೆಗೆ ವಿಶೇಷ ತನಿಖಾ ತಂಡವನ್ನು ರಚಿಸಲಾಗಿತ್ತು. ಪೊಲೀಸ್ ಅಧಿಕಾರಿಗಳು ನವದೆಹಲಿ, ಉತ್ತರ ಪ್ರದೇಶದ ನೋಯಿಡಾ ಸೇರಿದಂತೆ ಹಲವು ಕಡೆ ವಿಚಾರಣೆ ನಡೆಸಿದ್ದಾರೆ. ಈ ವೇಳೆ ಒಬ್ಬ ಆರೋಪಿ ಕುವೈತ್‌ನಲ್ಲಿರುವುದು ದೃಢಪಟ್ಟಿತ್ತು. ಕೇಂದ್ರ ಗೃಹಸಚಿವಾಲಯದ ಸಹಕಾರದಲ್ಲಿ ಲುಕ್ ಔಟ್ ಸರ್ಕ್ಯುಲರ್ ಹೊರಡಿಸಿ ಸದರಿ ಆರೋಪಿಯನ್ನು ಇತ್ತೀಚೆಗೆ ಕುವೈತ್‌ನಿಂದ ಹಸ್ತಾಂತರ ಪಡೆದುಕೊಂಡು ದೆಹಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಮಿಗ್ರೇಷನ್ ಅಧಿಕಾರಿಗಳ ಸಹಾಯದಿಂದ ಆಶೀಶ್‌ನನ್ನು ಬಂಧಿಸಿದ್ದಾರೆ. ಮತ್ತೋರ್ವ ಆರೋಪಿಗಾಗಿ ಹುಡುಕಾಟ ಮುಂದುವರೆಸಿದ್ದಾರೆ.



ಹೈದರಾಬಾದ್ ರನ್ ಮಳೆಗೆ ಕೊಚ್ಚಿಹೋದ ಮುಂಬೈ



ಹೈದರಾಬಾದ್, ಮಾ.27– ತವರಿನಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಸಿಡಿಸಿದ ರನ್ ಮಳೆಗೆ ಮುಂಬೈ ಇಂಡಿಯನ್ಸ್ ಕೊಚ್ಚಿ ಹೋಯಿತು. ಇದರೊಂದಿಗೆ ಪಂದ್ಯದಲ್ಲಿ 31 ರನ್‌ಗಳ ಭರ್ಜರಿ ಜಯ ಸಾಧಿಸಿದ ಹೈದರಾಬಾದ್ ಚೊಚ್ಚಲ ಗೆಲುವು ಸಾಧಿಸಿದರೆ, ಅತ್ತ ಮುಂಬೈ ಸತತ 2ನೇ ಸೋಲು ಅನುಭವಿಸಿತು.

ಇಲ್ಲಿನ ರಾಜೀವ್ ಗಾಂಧಿ ಅಂತರ ರಾಷ್ಟ್ರೀಯ ಮೈದಾನದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಸನ್ ರೈಸರ್ಸ್ ಹೈದರಾಬಾದ್ 20 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 277 ರನ್‌ಗಳ ಬೃಹತ್ ಮೊತ್ತ ಪೇರಿಸಿತು. ಆ ಮೂಲಕ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಹೆಸರಿನಲ್ಲಿದ್ದ ದಾಖಲೆ ಮುರಿದು ಐಪಿಎಲ್ ಇತಿಹಾಸದಲ್ಲಿ ಅತಿ ಹೆಚ್ಚು ರನ್ ಸಿಡಿಸಿದ ತಂಡ ಎಂಬ ಹೆಗ್ಗಳಿಕೆಗೆ ಹೈದರಾಬಾದ್ ಪಾತ್ರವಾಯಿತು.

ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಮಯಾಂಕ್ ಅಗರ್ವಾಲ್ ಹಾಗೂ ಟ್ರಾವಿಸ್ ಹೆಡ್ ಮೊದಲ ವಿಕೆಟ್‌ಗೆ 45 ರನ್ ಜೊತೆಯಾಟವಾಡಿ ಉತ್ತಮ ಆರಂಭ ಒದಗಿಸಿದರು. ಈ ವೇಳೆ 11 ರನ್ ಗಳಿಸಿ ಮಯಾಂಕ್ ವಿಕೆಟ್ ಒಪ್ಪಿಸಿದರು. ಈ ವೇಳೆ ಜೊತೆಯಾದ ಟ್ರಾವಿಸ್ ಹೆಡ್ ಹಾಗೂ ಅಭಿಷೇಕ್ ಶರ್ಮಾ ಬಿರುಸಿನ ಬ್ಯಾಟಿಂಗ್ ಮಾಡಿದರು. ಒಬ್ಬರಿಗೊಬ್ಬರು ಪೈಪೋಟಿಗೆ ಬಿದ್ದವರಂತೆ ಬ್ಯಾಟಿಂಗ್ ಮಾಡಿದ ಟ್ರಾವಿಸ್ ಹೆಡ್ 24 ಎಸೆತಗಳಲ್ಲಿ 3 ಸಿಕ್ಸರ್, 9 ಬೌಂಡರಿ ಒಳಗೊಂಡ 62 ರನ್ ಗಳಿಸಿ ನಿರ್ಗಮಿಸಿದರೇ, ಅಭಿಷೇಕ್ ವರ್ಮಾ 16 ಎಸೆತಗಳಲ್ಲಿ ಅರ್ಧ ಶತಕ ಸಿಡಿಸಿ ದಾಖಲೆ ನಿರ್ಮಿಸಿದರು. ಅಲ್ಲದೇ 23 ಎಸೆತಗಳಲ್ಲಿ 7 ಸಿಕ್ಸರ್, 3 ಬೌಂಡರಿ ಒಳಗೊಂಡ 63 ರನ್ ಗಳಿಸಿ ಔಟಾದರು. ನಂತರ ಜೊತೆಯಾದ ಮಾಕ್ರಮ್ ಹಾಗೂ ಹೆನ್ರಿಚ್ ಕ್ಲಾಸೆನ್ 116 ರನ್ ಜೊತೆಯಾಟವಾಡುವ ಮೂಲಕ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಮಾಕ್ರಮ್ 1 ಸಿಕ್ಸರ್, 2 ಬೌಂಡರಿ ಒಳಗೊಂಡ 42 ರನ್ ಗಳಿಸಿದರೇ, ಕ್ಲಾಸೆನ್ 34 ಎಸೆತಗಳಲ್ಲಿ 4 ಬೌಂಡರಿ, 7 ಸಿಕ್ಸರ್ ಒಳಗೊಂಡ 80 ರನ್ ಗಳಿಸಿ ಅಜೇಯರಾಗಿ ಉಳಿದರು. ಮುಂಬೈ ಪರ ಹಾರ್ದಿಕ್ ಪಾಂಡ್ಯ, ಪಿಯೂಷ್ ಚಾವ್ಲಾ ಹಾಗೂ ಜೆರಾಲ್ಡ್ ಕೋಟ್ಜಿ ತಲಾ ಒಂದೊಂದು ವಿಕೆಟ್ ಪಡೆದರು.

278 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಮುಂಬೈ ಇಂಡಿಯನ್ಸ್ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 246 ರನ್ ಗಳಿಸಿ ಸೋಲು ಅನುಭವಿಸಿತು. ತಂಡದ ಪರ ಆರಂಭದಿಂದಲೇ ಅಬ್ಬರದ ಬ್ಯಾಟಿಂಗ್ ನಡೆಸಿದ ಇಶಾನ್ ಕಿಶನ್ 13 ಎಸೆತಗಳಲ್ಲಿ 4 ಸಿಕ್ಸರ್, 2 ಬೌಂಡರಿ ಒಳಗೊಂಡ 34 ರನ್ ಗಳಿಸಿ ನಿರ್ಗಮಿಸಿದರು. ಇವರ ಹಿಂದೆಯೇ ರೋಹಿತ್ ಶರ್ಮಾ ಕೂಡ 3 ಸಿಕ್ಸರ್, 1 ಬೌಂಡರಿ ಒಳಗೊಂಡ 26 ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ನಮನ್ ಧೀರ್ 30 ರನ್ ಗಳಿಸಿ ಕ್ಯಾಚ್ ನೀಡಿ ಔಟಾದರು. ಮತ್ತೊಂದೆಡೆ ಅಬ್ಬರಿಸಿದ ತಿಲಕ್ ವರ್ಮಾ 34 ಎಸೆತಗಳಲ್ಲಿ 2 ಬೌಂಡರಿ, 6 ಸಿಕ್ಸರ್ ಒಳಗೊಂಡ 64ರನ್ ಗಳಿಸಿ ನಿರ್ಗಮಿಸಿದರು. ಉಳಿದಂತೆ ಟೀಮ್ ಡೇವಿಡ್ 22 ಎಸೆತಗಳಲ್ಲಿ 42 ರನ್ ಗಳಿಸಿ ಗೆಲುವಿಗಾಗಿ ಹೋರಾಟ ನಡೆಸಿದರಾದರೂ ತಂಡಕ್ಕೆ ಜಯ ತಂದು ಕೊಡಲು ಸಾಧ್ಯವಾಗಲಿಲ್ಲ. ಉಳಿದಂತೆ ನಾಯಕ ಹಾರ್ದಿಕ್ ಪಾಂಡ್ಯ 24, ರೋಮಾರಿಯೊ ಶೆಫರ್ಡ್ 15 ರನ್ ಗಳಿಸಿದರು. ಹೈದರಾಬಾದ್ ಪರ ಪ್ಯಾಟ್ ಕಮ್ಮಿನ್ಸ್, ಜಯದೇವ್ ಉನಾದ್ಕಟ್ ತಲಾ 2, ಶಹಬ್ಬಾಜ್ ಅಹಮದ್ 1 ವಿಕೆಟ್ ಉರುಳಿಸಿದರು. ಅಭಿಷೇಕ್ ಶರ್ಮಾ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

523 ರನ್, 38 ಸಿಕ್ಸರ್, 31 ಬೌಂಡರಿ

ಹೈದರಾಬಾದ್‌ನಲ್ಲಿ ಬುಧವಾರ ಸನ್‌ರೈಸರ್ಸ್ ಹೈದರಾಬಾದ್ ಹಾಗೂ ಮುಂಬೈ ಇಂಡಿಯನ್ಸ್ ನಡುವೆ ನಡೆದ ಪಂದ್ಯದಲ್ಲಿ ಐಪಿಎಲ್ ಇತಿಹಾಸದಲ್ಲೇ ಒಟ್ಟು 523 ರನ್, 38 ಸಿಕ್ಸರ್ ಹಾಗೂ 31 ಬೌಂಡರಿಗಳು ದಾಖಲಾದವು. ಪಂದ್ಯದಲ್ಲಿ ಹೈದರಾಬಾದ್ 277 ರನ್ ಹಾಗೂ 18 ಸಿಕ್ಸರ್ ಸಿಡಿಸಿದರೆ, ಮುಂಬೈ 246 ರನ್ ಹಾಗೂ 20 ಸಿಕ್ಸರ್ ಸಿಡಿಸಿತು. ಆ ಮೂಲಕ ಮತ್ತೊಂದು ವಿಶ್ವ ದಾಖಲೆ ನಿರ್ಮಾಣವಾಯಿತು.

ಇಂದಿನ ಪಂದ್ಯ

[ಮಾ. 28]

ರಾಜಸ್ಥಾನ್ ರಾಯಲ್ಸ್/ ಡೆಲ್ಲಿ ಕ್ಯಾಪಿಟಲ್ಸ್

ಸ್ಥಳ: ಜೈಪುರ, ಸವಾಯ್ ಮಾನ್‌ಸಿಂಗ್ ಕ್ರೀಡಾಂಗಣ,

ಸಮಯ: ಸಂಜೆ 7.30ಕ್ಕೆ

ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಚೆನ್ನೈ	2	2	0	0	4
ರಾಜಸ್ಥಾನ್	1	1	0	0	2
ಹೈದರಾಬಾದ್	2	1	1	0	2
ಕೊಲ್ಕತ್ತಾ	1	1	0	0	2
ಪಂಜಾಬ್	2	1	1	0	2
ಬೆಂಗಳೂರು	2	1	1	0	2
ಗುಜರಾತ್	2	1	1	0	2
ಡೆಲ್ಲಿ	1	0	1	0	0
ಮುಂಬೈ	2	1	2	0	0
ಲಕ್ನೋ	1	0	1	0	0

ಮೈಸೂರು ಮಿತ್ರ

ಜಿಲ್ಲಾಧಿಕಾರಿ, ಮುಖಂಡರ ಜೊತೆ ಚರ್ಚಿಸಿ ಸಮಸ್ಯೆಗಳಿಗೆ ಪರಿಹಾರ

ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ

ಹೆಚ್.ಡಿ.ಕೋಟೆ, ಮಾ.27– ಜಿಲ್ಲಾಧಿಕಾರಿಗಳು ಹಾಗೂ ಮುಖಂಡರ ಸಭೆ ಕರೆದು ಚರ್ಚಿಸಿ ಈ ಭಾಗದ ಸಮಸ್ಯೆ ಬಗೆಹರಿಸಲಾಗುವುದು ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ತಾಲೂಕಿನ ಆರೆಂಜ್ ಕೌಂಟಿ ಖಾಸಗಿ ರೆಸಾರ್ಟ್‌ನಲ್ಲಿ ವಾಸ್ತವ್ಯ ಹೂಡಿದ್ದ ಅವರು ಬುಧವಾರ ಹಿಂತಿರುಗುವ ವೇಳೆ ರೆಸಾರ್ಟ್‌ನಲ್ಲಿ ಕಾರ್ಯಕರ್ತರು, ಮುಖಂಡರ ಜೊತೆ ಚರ್ಚಿಸಿದರು. ಅಲ್ಲದೇ ವಿವಿಧ ಗ್ರಾಮಸ್ಥರ ಅಹವಾಲು ಸ್ವೀಕರಿಸಿ ಶಾಸಕ ಅನಿಲ್ ಚಿಕ್ಕಮಾದು ಅವರನ್ನೊಳಗೊಂಡಂತೆ ವಿವಿಧ ಇಲಾಖೆಗಳ ಅಧಿಕಾರಿಗಳ ಜೊತೆಗೂಡಿ ಎಲ್ಲರ ಸಮ್ಮುಖದಲ್ಲಿ ಚರ್ಚಿಸಿ ಸಮಸ್ಯೆಗಳನ್ನು ಬಗೆಹರಿಸಲಾಗುವುದು ಎಂದರು.

ಅಂತರಸಂತೆ ಗ್ರಾಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿ ಮಾತನಾಡಿದ ಕೆಪಿಸಿಸಿ ಸದಸ್ಯ ಡಿ.ಸುಂದರ್‌ದಾಸ್, ಅಂತರಸಂತೆ ಹೋಬಳಿ ವ್ಯಾಪ್ತಿಯಲ್ಲಿ ಹತ್ತಾರು ಗ್ರಾಪಂಗಳಿದ್ದು, ಈ ಭಾಗದ ಜನರ ಅನುಕೂಲಕ್ಕಾಗಿ ಇಲ್ಲಿ ತುರ್ತಾಗಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸಬೇಕು. ಕಬಿನಿ ಎಡ ಮತ್ತು ಬಲದಂಡೆ ಪ್ರದೇಶದಲ್ಲಿ ಮುಳುಗಡೆಯಾದ ರೈತರಿಗೆ ಮಂಜೂರಾದ ಜಮೀನನ್ನು ದುರಸ್ತಿಪಡಿಸಿಕೊಡಬೇಕು. ಈ ಭಾಗದಲ್ಲಿ ನಾಗರಹೊಳೆ ಅರಣ್ಯ ಪ್ರದೇಶ ಮತ್ತು ಕಬಿನಿ ಜಲಾಶಯ ಇರುವುದರಿಂದ ಭೂ ಪರಿವರ್ತನೆ ಕಷ್ಟವಾಗುತ್ತಿದೆ. ಇದರಿಂದ ಯುವಕರಿಗೆ ವಾಣಿಜ್ಯ ಮತ್ತು ಕೈಗಾರಿಕಾ ಚಟುವಟಿಕೆ ಆರಂಭಿಸಲು ಕಷ್ಟವಾಗುತ್ತಿದೆ. ಆದ್ದರಿಂದ ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ಭೂ ಪರಿವರ್ತನೆ ಕಾನೂನನ್ನು ರೂಪಿಸಬೇಕಿದೆ. ಅಲ್ಲದೇ ಮೈಸೂರು–ಮಾನಂದವಾಡಿ ಮಾರ್ಗವಾಗಿ ಸಂಚರಿಸುವ ವಾಹನಗಳಿಗೆ ಸಂಜೆ 6 ಗಂಟೆ ನಂತರ ನಿರ್ಬಂಧ ಹೇರಿದ್ದು, ಈ ಸಮಯವನ್ನು ರಾತ್ರಿ 9 ಗಂಟೆವರೆಗೂ ವಿಸ್ತರಿಸಬೇಕು. ಅಲ್ಲದೇ ಅಂತರಸಂತೆ ಗ್ರಾಪಂ ಅನ್ನು ಮೇಲ್ದರ್ಜೆಗೇರಿಸಿ ಪಟ್ಟಣ ಪಂಚಾಯಿತಿ ಮಾಡಬೇಕು ಹಾಗೂ ಗಿರಿಜನ ಕಾಲೋನಿಯ ರಸ್ತೆಗಳನ್ನು ದುರಸ್ತಿಪಡಿಸಿಕೊಡಬೇಕೆಂದು ಮನವಿ ಮಾಡಿದರು.

ಈ ವೇಳೆ ಮಾತನಾಡಿದ ಮುಖ್ಯಮಂತ್ರಿಗಳು, ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಚರ್ಚಿಸಿ ಸಮಸ್ಯೆ ಪರಿಹರಿಸುವುದಾಗಿ ಭರವಸೆ ನೀಡಿದರು.

ಗಿಡಕ್ಕೆ ನೀರು ಹಾಕಿದ ಸಿದ್ದರಾಮಯ್ಯ: ಕಳೆದ ವರ್ಷ ಮುಖ್ಯಮಂತ್ರಿ ಸಿದ್ದರಾಮಯ್ಯ ಇಲ್ಲಿನ ಆರೆಂಜ್ ಕೌಂಟಿ ರೆಸಾರ್ಟ್‌ಗೆ ಆಗಮಿಸಿದ್ದ ವೇಳೆ ಗಿಡ ನೆಟ್ಟಿದ್ದರು. ಅದನ್ನು ರೆಸಾರ್ಟ್ ಸಿಬ್ಬಂದಿ ಪೋಷಣೆ ಮಾಡಿದ್ದರು. ಈ ವಿಷಯ ತಿಳಿದ ಸಿಎಂ ಸಿದ್ದರಾಮಯ್ಯ ಆ ಗಿಡಕ್ಕೆ ನೀರು ಹಾಕಿದರು.

ಇದೇ ವೇಳೆ ಸಚಿವ ವೆಂಕಟೇಶ್, ಶಾಸಕ ಅನಿಲ್ ಚಿಕ್ಕಮಾದು, ಕೆಪಿಸಿಸಿ ವಕ್ತಾರ ಜಿ.ವಿ.ಸೀತಾರಾಂ, ಕೃತಿಕಾ, ಆರೆಂಜ್ ಕೌಂಟಿ ವ್ಯವಸ್ಥಾಪಕ ಬಿದ್ದಪ್ಪ, ಅಂತರಸಂತೆ ಗ್ರಾಪಂ ಅಧ್ಯಕ್ಷೆ ರೇಖಾ, ತಾಲೂಕು ಅಖಿಲ ನಾಮಧಾರಿಗೌಡ ಸಮಾಜದ ಅಧ್ಯಕ್ಷ ಭೀಮರಾಜು, ಹಾಲು ಉತ್ಪಾದಕರ ಸಂಘದ ಅಧ್ಯಕ್ಷ ನಾಗರಾಜು, ಮುಖಂಡರಾದ ಈರೇಗೌಡ, ಕೋಟೆ ಶಿವಪ್ಪ, ನವೀನ್ ದಾಸ್, ಬಸವರಾಜು, ರತ್ನಯ್ಯ, ವಿನೋದ್, ಪದ್ಮರಾಜು, ಅಶೋಕ್, ಸುಬ್ರಹ್ಮಣ್ಯ, ಕಲೀಮ್ ಇತರರಿದ್ದರು.



ಆರೆಂಜ್ ಕೌಂಟಿ ರೆಸಾರ್ಟ್‌ನಲ್ಲಿ ಕಳೆದ ವರ್ಷ ತಾವು ನೆಟ್ಟಿದ್ದ ಗಿಡಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೀರು ಹಾಕಿದರು.

ಏ.3ರಂದು ಚಾ.ನಗರ ಕ್ಷೇತ್ರದಿಂದ ನಾಮಪತ್ರ ಸಲ್ಲಿಕೆ

ಸುನೀಲ್ ಬೋಸ್ ಘೋಷಣೆ





ಶಾಸಕರಾದ ದರ್ಶನ್ ಧ್ರುವನಾರಾಯಣ್ ಹಾಗೂ ಗಣೇಶ್ ಪ್ರಸಾದ್ ಅವರನ್ನು ಸುನೀಲ್ ಬೋಸ್ ಭೇಟಿ ಮಾಡಿ ಸನ್ಮಾನಿಸಿ, ಬೆಂಬಲ ಕೋರಿದರು.

ತಿ.ನರಸೀಪುರ ಮಾ.27– ಕಾಂಗ್ರೆಸ್ ಹೈಕಮಾಂಡ್ ಚಾಮರಾಜನಗರ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯನ್ನು ಇನ್ನೂ ಅಧಿಕೃತವಾಗಿ ಘೋಷಿಸಿಲ್ಲವಾದರೂ ಏ.3 ರಂದು ಉಮೇದುವಾರಿಕೆ ಸಲ್ಲಿಸುತ್ತೇನೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಪುತ್ರ ಸುನೀಲ್ ಬೋಸ್ ತಿಳಿಸಿದರು.

ನಂಜನಗೂಡು ಶಾಸಕ ದರ್ಶನ್ ಧ್ರುವನಾರಾಯಣ್ ಅವರನ್ನು ಬುಧವಾರ ಭೇಟಿಯಾಗಿ ಚುನಾವಣೆಗೆ ಬೆಂಬಲ ಕೋರಿ ಮಾತನಾಡಿದ ಅವರು, ವಿಧಾನಸಭಾ ಕ್ಷೇತ್ರವಾರು ಸಭೆಗಳನ್ನು ಕರೆಯಲಾಗಿದ್ದು, ನಾಮಪತ್ರ ಸಲ್ಲಿಕೆಗೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ. ಇನ್ನೆರಡು ದಿನಗಳಲ್ಲಿ ಕಾರ್ಯಕ್ರಮದ ರೂಪುರೇಷೆಗಳನ್ನು ಅಂತಿಮಗೊಳಿಸಲಾಗುವುದು ಎಂದರು.

ಪಕ್ಷದ ರಾಷ್ಟ್ರೀಯ ಯುವ ನಾಯಕ ರಾಹುಲ್ ಗಾಂಧಿ, ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಅವರು ಯುವ ಕಾರ್ಯಕರ್ತನಾಗಿರುವ ನಮಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಮಾಡಿಕೊಟ್ಟಿದ್ದಾರೆ. ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ ಶಿವಕುಮಾರ್ ಅವರ ನಾಯಕತ್ವವನ್ನು ಬಲಪಡಿಸಲು ಚಾಮರಾಜನಗರ ಸೇರಿದಂತೆ ಇಪ್ಪತ್ತಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲ್ಲಬೇಕು. ಪಕ್ಷದ ಶಾಸಕರು ಸೇರಿದಂತೆ ಪ್ರಮುಖ ಮುಖಂಡರನ್ನು ಭೇಟಿಯಾಗಿ ಚುನಾವಣೆಗೆ ಬೆಂಬಲವನ್ನು ಕೋರುತ್ತಿದ್ದೇನೆ. ಅವರಷ್ಟೇ ಅಲ್ಲ ಪಕ್ಷದ ಪ್ರತಿಯೊಬ್ಬ ಕಾರ್ಯಕರ್ತರು ಹಾಗೂ ಮುಖಂಡರ ಶ್ರಮದಿಂದಲೇ ಗೆಲ್ಲಲು ಸಾಧ್ಯವಿರುವುದರಿಂದ ಎಲ್ಲರ ಸಹಕಾರ ಮತ್ತು ಬೆಂಬಲ ಕೋರುತ್ತಿದ್ದೇನೆ ಎಂದು ಸುನೀಲ್ ಬೋಸ್ ತಿಳಿಸಿದರು.

ಇದೇ ಸಂದರ್ಭ ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿ, ವರಿಷ್ಠರ ತೀರ್ಮಾನಕ್ಕೆ ಬದ್ಧರಾಗಿ ಲೋಕಸಭೆ ಚುನಾವಣೆಯಲ್ಲಿ ನಂಜನಗೂಡು ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಹೆಚ್ಚಿನ ಲೀಡ್ ಕೊಡಿಸುವ ಭರವಸೆ ನೀಡಿದರು. ಮೈಮುಲ್ ನಿರ್ದೇಶಕ ಆರ್.ಚೆಲುವರಾಜು, ಜಿಪಂ ಮಾಜಿ ಸದಸ್ಯ ಸ್ವಾಮಿ, ಆಪ್ತ ಸಹಾಯಕ ಲಕ್ಷ್ಮೀನಾರಾಯಣ, ನಂಜನಗೂಡು ದೇವಾಲಯದ ಮಾಜಿ ಅಧ್ಯಕ್ಷ ಇಂದಾನ್ ಬಾಬು, ಗುತ್ತಿಗೆದಾರ ದಿನೇಶ್, ಹುಚ್ಚೇಗೌಡ ಹಾಗೂ ಇನ್ನಿತರರಿದ್ದರು.

ಪಕ್ಷದ ಗೆಲುವಿಗೆ ಬೆಂಬಲ

ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಸಂಸದರಾಗುವ ಮೂಲಕ ಮೈಸೂರು, ಚಾಮರಾಜನಗರ ಜಿಲ್ಲೆಯ ನಾಯಕತ್ವ ಯುವ ಸಮೂಹಕ್ಕೆ ಬರುವಂತಾಗಲಿ ಎಂದು ಶಾಸಕ ಗಣೇಶ್ ಪ್ರಸಾದ್ ಬೆಂಬಲ ಸೂಚಿಸಿ ಆಶಯ ವ್ಯಕ್ತಪಡಿಸಿದ್ದಾರೆ. ತಮ್ಮ ನಿವಾಸದಲ್ಲಿ ಭೇಟಿಯಾದ ಸುನೀಲ್ ಬೋಸ್ ಅವರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು ಚುನಾವಣೆಯಲ್ಲಿ ಪಕ್ಷದ ಗೆಲುವಿಗೆ ಸಂಪೂರ್ಣ ಬೆಂಬಲ ನೀಡುತ್ತೇನೆ ಎಂದು ಭರವಸೆ ನೀಡಿದರು.

ಯುವತಿ ನಾಪತ್ತೆ



ತಿ.ನರಸೀಪುರ, ಮಾ.27– ಪಟ್ಟಣ ವ್ಯಾಪ್ತಿಯ ಆಲಗೂಡು ಗ್ರಾಮದಿಂದ ಯುವತಿಯೊಬ್ಬಳು ನಾಪತ್ತೆಯಾಗಿರುವ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಆಲಗೂಡು ಗ್ರಾಮದ ನಿವಾಸಿ ಕುಸುಮ(22) ನಾಪತ್ತೆಯಾದ ಯುವತಿ. ಈಕೆ ಮಾ.22 ರಂದು ಮಧ್ಯಾಹ್ನ ತಿ.ನರಸೀಪುರಕ್ಕೆ ಹೋಗಿ ಬರುವುದಾಗಿ ಹೇಳಿ ಹೋದವರು ಮನೆಗೆ ವಾಪಸ್ ಆಗಿಲ್ಲ ಎಂದು ತಾಯಿ ಗೀತಾ ತಿ.ನರಸೀಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ. ಈಕೆ ಬಗ್ಗೆ ಸುಳಿವು ಸಿಕ್ಕಲ್ಲಿ ದೂ. 08227–261227 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ನೇಮಕ



ಪಿರಿಯಾಪಟ್ಟಣ, ಮಾ.27– ಬಿಜೆಪಿ ತಾಲೂಕು ರೈತ ಮೋರ್ಚಾ ಅಧ್ಯಕ್ಷರಾಗಿ ನಿತ್ಯಾನಂದ ಅವರನ್ನು ನೇಮಕ ಮಾಡಲಾಗಿದೆ ಎಂದು ತಾಲೂಕು ಬಿಜೆಪಿ ಅಧ್ಯಕ್ಷ ವಿ.ರಾಜೇಂದ್ರ ತಿಳಿಸಿದ್ದಾರೆ.



ಹನಗೋಡು ಗ್ರಾಪಂ ವತಿಯಿಂದ ಬುಧವಾರ ಮತದಾನ ಜಾಗೃತಿ ಹಮ್ಮಿಕೊಳ್ಳಲಾಯಿತು. ಗ್ರಾಪಂ ವ್ಯಾಪ್ತಿಯ ವಿಶೇಷಚೇತನ ವ್ಯಕ್ತಿಗಳು ಗ್ರಾಪಂ ಆವರಣದಲ್ಲಿ ಮಾನವ ಸರಪಳಿ ನಿರ್ಮಿಸಿ ಗಮನ ಸೆಳೆದರು. ಇದೇ ವೇಳೆ 'ನಾನು ಖಂಡಿತ ಮತದಾನ ಮಾಡುವೆ' ಎಂಬ ಸಹಿ ಸಂಗ್ರಹ ಅಭಿಯಾನ ಕೈಗೊಳ್ಳಲಾಯಿತು. ಮತದಾರರು 'ನನ್ನ ಮತ ನನ್ನ ಹಕ್ಕು' ಎಂಬ ಪ್ರತಿಜ್ಞಾವಿಧಿ ಸ್ವೀಕರಿಸಿದರು. ಕಾರ್ಯಕ್ರಮದಲ್ಲಿ ಪಿಡಿಓ ಡಾ.ಅನಿತಾ, ಎಸ್‌ಡಿಎ ಚಂದ್ರಶೇಖರ್, ಡಿಇಓ ಆನಂದ್, ವಿಕಲಚೇತನರ ಗ್ರಾಮೀಣ ಪುನರ್ವಸತಿ ಕಾರ್ಯಕರ್ತೆ ಶ್ವೇತ ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

ಪರೀಕ್ಷಾ ಕೇಂದ್ರಗಳಿಗೆ ಬಿಇಓ ಭೇಟಿ, ಪರಿಶೀಲನೆ

ನಂಜನಗೂಡು, ಮಾ.27– ತಾಲೂಕಿನ ಹದಿನಾರು ಗ್ರಾಮದ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಕ್ಕೆ ಬುಧವಾರ ಕ್ಷೇತ್ರ ಶಿಕ್ಷಣಾಧಿಕಾರಿ ಎ.ಟಿ.ಶಿವಲಿಂಗಯ್ಯ ಭೇಟಿ ನೀಡಿ, ವ್ಯವಸ್ಥೆಗಳ ಬಗ್ಗೆ ಪರಿಶೀಲನೆ ನಡೆಸಿದರು.

ಬಳಿಕ ಮಾತನಾಡಿದ ಅವರು, ತಾಲೂಕಿನಲ್ಲಿ 18 ಪರೀಕ್ಷಾ ಕೇಂದ್ರಗಳಿದ್ದು, ಎಲ್ಲಾ ಕೇಂದ್ರಗಳಲ್ಲೂ ವಿದ್ಯಾರ್ಥಿಗಳಿಗೆ ಪೀಠೋಪಕರಣ ಸೇರಿದಂತೆ ಎಲ್ಲಾ ರೀತಿಯ ಮೂಲ ಸೌಕರ್ಯ ಕಲ್ಪಿಸಲಾಗಿದೆ. ಅಲ್ಲದೇ ಸಿಸಿ ಕ್ಯಾಮರಾ ಅಳವಡಿಸಲಾಗಿದೆ. ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಲಾಗಿದೆ. ಪರೀಕ್ಷೆ ಆರಂಭವಾದ 2 ದಿನಗಳಲ್ಲಿ 6 ಕೇಂದ್ರಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದೇನೆ. ಮುಂದಿನ 4 ದಿನಗಳಲ್ಲಿ ಇನ್ನುಳಿದ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಲಿದ್ದೇನೆ. ಪರೀಕ್ಷೆ ವ್ಯವಸ್ಥಿತ ಹಾಗೂ ಶಾಂತಿಯುತವಾಗಿ ಯಾವುದೇ ಗೊಂದಲಗಳಿಲ್ಲದಂತೆ ನಡೆಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದರು.



ಹದಿನಾರು ಗ್ರಾಮದ ಪರೀಕ್ಷಾ ಕೇಂದ್ರಕ್ಕೆ ಬಿಇಓ ಶಿವಲಿಂಗಯ್ಯ ಭೇಟಿ ನೀಡಿ, ಪರಿಶೀಲಿಸಿದರು.

ವಿಜೃಂಭಣೆಯ ಶ್ರೀವೀರಭದ್ರೇಶ್ವರಸ್ವಾಮಿ ಕೊಂಡೋತ್ಸವ



ಹುಣಸೂರು, ಮಾ.27– ತಾಲೂಕಿನ ಬನ್ನಿಕುಪ್ಪೆ ಗ್ರಾಮದ ಮಾರಿಗುಡಿ ಆವರಣದಲ್ಲಿ ಬುಧವಾರ ಮುಂಜಾನೆ ಶ್ರೀವೀರಭದ್ರೇಶ್ವರ ಸ್ವಾಮಿಯವರ ಕೊಂಡೋತ್ಸವ ವಿಜೃಂಭಣೆಯಿಂದ ನಡೆಯಿತು.

ಈ ವೇಳೆ ಉಕ್ಕಿನಕಂತೆ ಮಾದಳ್ಳಿ ಮಠದ ಸಾಂಬಸದಾಶಿವ ಸ್ವಾಮೀಜಿ, 7 ಗ್ರಾಮಗಳ ಯಜಮಾನ ಕೂಸಪ್ಪ, ಗ್ರಾಪಂ ಅಧ್ಯಕ್ಷ ಗೋವಿಂದನಾಯಕ್ ಹಾಗೂ ಸುತ್ತಮುತ್ತಲ 7 ಹಳ್ಳಿಯ ಮುಖಂಡರು, ಗ್ರಾಮಸ್ಥರು, ಸಾವಿರಾರು ಮಂದಿ ಕೊಂಡೋತ್ಸವದಲ್ಲಿ ಭಾಗವಹಿಸಿ ಹರಕೆಗಳನ್ನು ತೀರಿಸಿ ದೇವರ ಕೃಪೆಗೆ ಪಾತ್ರರಾದರು.



ಹೆಚ್.ಡಿ.ಕೋಟೆ ತಾಲೂಕಿನ ಚಾಮನಹಳ್ಳಿಹುಂಡಿ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ ನಡೆಯಿತು. ಈ ವೇಳೆ ಡಾ.ಸೌಮ್ಯ, ಹರೀಶ್, ವಿಎಚ್‌ಪಿ ಸೇವಾ ಜಿಲ್ಲಾ ಪ್ರಮುಖ್ ಕುಂಟೇಗೌಡ, ಬಾಲಕೃಷ್ಣ, ಮಹದೇವಪ್ಪ, ಎಸ್‌ಡಿಎಂಸಿ ಅಧ್ಯಕ್ಷ ಹನುಮ ಸ್ವಾಮಿ, ಶಿವೇಗೌಡ, ಸಹಶಿಕ್ಷಕ ಮನು ಕುಮಾರ್, ಚಂದ್ರಮೌಳೇಶ್ವರ, ಸುಮಿತ್ರ, ಗ್ರಾಪಂ ಸದಸ್ಯರಾದ ಮಹದೇವಮ್ಮ, ಭಾಗ್ಯಮ್ಮ ಸೇರಿದಂತೆ ಇನ್ನಿತರರಿದ್ದರು.

ಕೆ.ಆರ್.ನಗರದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಬೃಹತ್ ಸಮಾವೇಶ

ದೇಶದ ಅಭಿವೃದ್ಧಿಗೆ ಬುನಾದಿ ಹಾಕಿದ್ದು ಕಾಂಗ್ರೆಸ್

'ಕೈ' ಅಭ್ಯರ್ಥಿ ಸ್ಟಾರ್ ಚಂದ್ರುಗೆ ಮತ ನೀಡಿ: ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮನವಿ

ಕೆ.ಆರ್‌ನಗರ, ಮಾ.27– ಸ್ವಾತಂತ್ರ್ಯ ತಂದು ಕೊಡಲು ಹೋರಾಟ ಮಾಡಿದ ಪಕ್ಷ ಕಾಂಗ್ರೆಸ್. ಹಲವು ಕಾಂಗ್ರೆಸ್ ನಾಯಕರು ದೇಶಕ್ಕಾಗಿ ಪ್ರಾಣ ತೆತ್ತಿದ್ದಾರೆ. ಇತಿಹಾಸ ಇರುವ ಪಕ್ಷ ಕಾಂಗ್ರೆಸ್. ಆದರೆ ಬಿಜೆಪಿಗೆ ಯಾವುದೇ ಇತಿಹಾಸ ಇಲ್ಲ. ದೇಶದ ಭವಿಷ್ಯಕ್ಕೆ ಬುನಾದಿ ಹಾಕಿದ್ದು ಕಾಂಗ್ರೆಸ್ ಎಂದು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಪಟ್ಟಣದ ರೇಡಿಯೋ ಮೈದಾನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿ, ಮೋದಿ, ಆರ್‌ಎಸ್‌ಎಸ್ ಬಗ್ಗೆ ಅತ್ಯಂತ ಕೆಳ ಮಟ್ಟದಲ್ಲಿ ಟೀಕೆ ಮಾಡಿದ್ದ ಜೆಡಿಎಸ್ ಜೊತೆ ಬಿಜೆಪಿ ಮೈತ್ರಿ ಮಾಡಿಕೊಂಡಿದೆ. ಜೆಡಿಎಸ್, ಬಿಜೆಪಿ 2018ರ ಚುನಾವಣೆಯಲ್ಲಿ ಒಳಒಪ್ಪಂದ ಮಾಡಿಕೊಂಡಿತ್ತು ಎಂದರು. ಕೋಮುವಾದಿ ಶಕ್ತಿಯನ್ನು ದೂರ ಇಡಬೇಕೆಂದು ನಿಮ್ಮನ್ನು (ಹೆಚ್‌ಡಿಕೆ) ಮುಖ್ಯಮಂತ್ರಿ ಮಾಡಿದೆವು. ಮುಖ್ಯಮಂತ್ರಿ ಆಸೆಗೆ ನಮ್ಮ ಜೊತೆ ಬಂದ್ರಿ ಆಗಲೇ ಬಿಜೆಪಿ ಜೊತೆ ಸರ್ಕಾರ ಮಾಡಬಹುದಿತ್ತಲ್ಲ. ವಿಶ್ವನಾಥ್ ಅವರ ಗೌರವ ತೆಗೆದ್ರಿ, ನಾರಾಯಣಗೌಡರನ್ನು ಓಡಿಸಿ ಈಗ ಅವರ ಬಳಿಯೇ ಹೋಗಿ ಬೆಂಬಲ ಕೇಳುತ್ತಿದ್ದೀರಿ ಎಂದು ವ್ಯಂಗ್ಯವಾಡಿದರು.

14 ತಿಂಗಳು ನೀವೇ ಸಿಎಂ, ಜಿಲ್ಲೆಯಲ್ಲಿ ಮಂತ್ರಿಗಳಿದ್ದರೂ, ಜಿಲ್ಲೆಗೆ ಏನು ಮಾಡಿದಿರಿ? ಏನು ಅಭಿವೃದ್ಧಿ ಮಾಡಿದ್ದೀರಿ ಎಂದು ಮತದಾರರು ಅವರ ಮನೆ ಮುಂದೆ ಹೋಗಿ ಗಲಾಟೆ ಮಾಡಬೇಕಿಲ್ಲ. ಆದರೆ ಎಲೆಕ್ಷನ್‌ನಲ್ಲಿ ಅವರ ವಿರುದ್ಧ ಇವಿಎಂನಲ್ಲಿನ ಬಟನ್ ಒತ್ತಿದರೆ ಸಾಕು ಎಂದರು.

ಸರ್ಕಾರ ನಮ್ಮದಿದೆ. ಜಿಲ್ಲೆಯಲ್ಲಿ 7 ಜನ ನಮ್ಮ ಶಾಸಕರಿದ್ದಾರೆ. ಜಿಲ್ಲೆಯವರೇ ಸಚಿವರಿದ್ದಾರೆ. ನಮ್ಮ ಅಭ್ಯರ್ಥಿ ಗೆದ್ದರೆ ಸರ್ಕಾರದ ಜೊತೆ ಸೇರಿಕೊಂಡು ಅಭಿವೃದ್ಧಿ ಮಾಡುತ್ತಾರೆ. ಅದೇ ಕುಮಾರಸ್ವಾಮಿ ಲೋಕಸಭಾ ಸದಸ್ಯರಾಗಿ ಏನೂ ಮಾಡಲು ಸಾಧ್ಯವಿಲ್ಲ ಎಂದರು.

ಶಾಸಕ ರವಿಶಂಕರ್ ಮಾತನಾಡಿ, ಪ್ರತಿ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರ ಸುದ್ದಿಯಲ್ಲಿರುತ್ತೆ. ಸರ್ಕಾರದ ಮಟ್ಟದಲ್ಲಿ ಅನುದಾನ ತಂದು ಮೂಲಸೌಕರ್ಯ ಕಲ್ಪಿಸಲು ನಿಮ್ಮ ಆಶೀರ್ವಾದ ಕಾರಣ. ವಿಧಾನಸಭಾ ಚುನಾವಣೆಯಲ್ಲಿ ನನ್ನನ್ನು ಬೆಂಬಲಿಸಿದಂತೆ ಲೋಕಸಭಾ ಚುನಾವಣೆಯಲ್ಲಿ ಸ್ಟಾರ್ ಚಂದ್ರು ಅವರನ್ನು ಬೆಂಬಲಿಸಿ ಎಂದರು.

ಶಾಸಕ ನರೇಂದ್ರಸ್ವಾಮಿ ಮಾತನಾಡಿ, ಲೋಕಸಭಾ ಚುನಾವಣೆಯಲ್ಲಿ ಮಗ ಸೋತಾಗ ಅಭಿವೃದ್ಧಿಗೆ ಮೀಸಲಿರಿಸಿದ್ದ 8 ಸಾವಿರ ಕೋಟಿ ಬಂದ್ ಮಾಡಿಸಿದಿರಿ. ಮೋದಿ ಟೀಕಿಸಿ ಈಗ ಅವರನ್ನೇ ತಬ್ಬಿಕೊಳ್ತಿದ್ದೀರಿ. ಜಾತ್ಯತೀತ ಪದ ತೆಗೆದುಹಾಕಿ ಬನ್ನಿ ಎಂದರು.

ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಮಾತನಾಡಿ, ಜೆಡಿಎಸ್‌ನ ಹಲವು ಕಾರ್ಯಕರ್ತರು ಸ್ಟಾರ್ ಚಂದ್ರು ಅವರನ್ನು ಬೆಂಬಲಿಸಿ ಕಾಂಗ್ರೆಸ್ ಸೇರಿದ್ದಾರೆ. ಹೀಗಾಗಿ ಸ್ಟಾರ್ ಚಂದ್ರು ಅವರನ್ನು ಗೆಲ್ಲಿಸಬೇಕು ಎಂದರು.

ಮಾಜಿ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಮಾತನಾಡಿ, ಇಡೀ ದೇಶವೇ ಮಂಡ್ಯ ಚುನಾವಣೆ ನೋಡುತ್ತಿದೆ. ಕೇವಲ 500 ರೂ.ಗೆ ಆಸೆ ಬೀಳಬೇಡಿ. ಹರ್ಷದ ಕೂಳಿಗಾಗಿ ವರ್ಷದ ಕೂಳು ಕಳೆದುಕೊಳ್ಳಬೇಡಿ ಎಂದು ಹೇಳಿದರು.

ಕೆಪಿಸಿಸಿ ಕಾರ್ಯಕಾರಣಿ ಸದಸ್ಯ ದೊಡ್ಡಸ್ವಾಮೇಗೌಡ ಮಾತನಾಡಿದರು. ಸಮಾವೇಶದಲ್ಲಿ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಸೇರಿದಂತೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಮುಖಂಡರು ಇದ್ದರು.



ಕೆ.ಆರ್.ನಗರದಲ್ಲಿ ನಡೆದ ಕಾರ್ಯಕರ್ತರ ಸಮಾವೇಶದಲ್ಲಿ ರಾಷ್ಟ್ರಗೀತೆ ವೇಳೆ ಕಾಂಗ್ರೆಸ್ ಮುಖಂಡರು ವೇದಿಕೆಯಲ್ಲಿ ಎದ್ದು ನಿಂತು ಗೌರವ ಸೂಚಿಸಿದರು.

"ಜನಸೇವೆ ಮಾಡಲೆಂದು ರಾಜಕೀಯ ಕ್ಷೇತ್ರಕ್ಕೆ ಬಂದಿರುವ ನನ್ನನ್ನು ಲೋಕಸಭಾ ಚುನಾವಣೆಯಲ್ಲಿ ಬೆಂಬಲಿಸಿ ಆಶೀರ್ವದಿಸಬೇಕು. ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳು ನನ್ನ ಗೆಲುವಿಗೆ ಸಹಕಾರಿಯಾಗಲಿದ್ದು, ಮುಂಬರುವ ದಿನಗಳಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಕೈ ಬಲಪಡಿಸಲು ಈ ಚುನಾವಣೆಯಲ್ಲಿ ನನಗೆ ಮತ ನೀಡಿ.

-ವೆಂಕಟರಮಣೇಗೌಡ, ಕಾಂಗ್ರೆಸ್ ಅಭ್ಯರ್ಥಿ

ಅಜ್ಜಿ–ಮೊಮ್ಮಗಳಿಗೆ 'ಶಕ್ತಿ': ನಾಲ್ಕು ಗಿಳಿಗಳಿಗೆ 444 ರೂ. 'ದರ ದಂಡ'!



ಮೈಸೂರು, ಮಾ.27– ಕೆಎಸ್‌ಆರ್‌ಟಿಸಿ ಬಸ್‌ವೊಂದರಲ್ಲಿ ಪ್ರಯಾಣಿಸಿದ ಅಜ್ಜಿ–ಮೊಮ್ಮಗಳಿಗೆ 'ಶಕ್ತಿ' ಯೋಜನೆಯಲ್ಲಿ ಉಚಿತ ಟಿಕೆಟ್ ನೀಡಿದ ನಿರ್ವಾಹಕ, ಅವರು ತಂದಿದ್ದ 2 ಜೊತೆ ಗಿಳಿಗಳಿಗೆ (ಲವ್ ಬರ್ಡ್ಸ್) ರೂ. 444 ಪ್ರಯಾಣದರ ಪಡೆದಿದ್ದಾರೆ.

ಅಜ್ಜಿ–ಮೊಮ್ಮಗಳು ಗಿಳಿಗಳೊಂದಿಗೆ ಸಂಚರಿಸಿದ ಚಿತ್ರಗಳು ಸಾಮಾಜಿಕ ಜಾಲತಾಣದಲ್ಲಿ ಬುಧವಾರ ವೈರಲ್ ಆಗಿವೆ. ಇವರು ಬೆಂಗಳೂರಿನಿಂದ ಮೈಸೂರಿಗೆ ಪ್ರಯಾಣಿಸಿದ್ದಾರೆ. ಗಿಳಿಗಳಿಗೆ ಮಕ್ಕಳಿಗೆ ಪಡೆಯುವಷ್ಟು ಪ್ರಯಾಣದರವನ್ನು (ಅಂದರೆ ತಲಾ ರೂ. 111) ನಿರ್ವಾಹಕ ಪಡೆದಿದ್ದಾರೆ. ಇದು ಸಾಕಷ್ಟು ಚರ್ಚೆಗೆ ಗ್ರಾಸವಾಗಿದೆ.


ಗಿಳಿಗಳನ್ನು ಪಂಜರದಲ್ಲಿಟ್ಟು ಒಂದೇ ಸೀಟಿನಲ್ಲಿ ಇಟ್ಟುಕೊಂಡು ಕುಳಿತಿದ್ದೆವು. ಆದಾಗ್ಯೂ ಪ್ರಯಾಣದರ ಪಡೆಯಬೇಕೆಂದಿದ್ದರೆ ಒಂದು ಸೀಟಿನದ್ದು (ಒಬ್ಬರಿಗೆ ಆಗುವಷ್ಟು) ತೆಗೆದುಕೊಳ್ಳಬೇಕಿತ್ತು. ಅದರ ಬದಲಿಗೆ ನಾಲ್ಕೂ ಗಿಳಿಗಳಿಗೆ ಪ್ರತ್ಯೇಕವಾಗಿ ಪರಿಗಣಿಸಿ ಟಿಕೆಟ್ ಹಣ ಪಡೆದರು. ಇದು ಸರಿಯೇ?' ಎಂದು ಮಹಿಳೆ ಪ್ರಶ್ನಿಸಿದರು ಎಂದು ತಿಳಿದುಬಂದಿದೆ. ಹಕ್ಕಿಗಳನ್ನು ಮಕ್ಕಳೆಂದು ಪರಿಗಣಿಸಿ ಟಿಕೆಟ್ ಕೊಟ್ಟಿದ್ದಕ್ಕೆ ಸಹ ಪ್ರಯಾಣಿಕರು ಕೂಡ ಅಸಮಾಧಾನ ವ್ಯಕ್ತಪಡಿಸಿದರು ಎಂದು ಗೊತ್ತಾಗಿದೆ. ಇದಕ್ಕೆ ಪ್ರತಿಕ್ರಿಯಿಸಿದ ನಿರ್ವಾಹಕರು, ನಿಯಮದಂತೆಯೇ ಪ್ರಯಾಣ ದರ ತೆಗೆದುಕೊಂಡಿದ್ದೇನೆ ಎಂದು ವಾದಿಸಿದ್ದಾರೆ ಎಂದು ತಿಳಿದುಬಂದಿದೆ.

LEASE

3 BHK NEW FLAT
East facing,1525 sq.ft with Car parking, Gym & Swimming pool at Sowparnika Blue Bells, Vijayanagar 3rd stage, Mysore
9036665888 | 8050257887

ಮೈಸೂರು ಮಿತ್ರ 44
ಜಾಹೀರಾತಿಗಾಗಿ ಸಂಪರ್ಕಿಸಿ:
Ph: 0821-2496522 / 23
Email:ad@mysurumithra.com

ಹೃತ್ಪೂರ್ವಕ ಅಭಿನಂದನೆಗಳು



ವಿಜಯರಂಗ ಚಾರಿಟಬಲ್ ಟ್ರಸ್ಟ್‌ನ ಹಿಂದಿನ ಅಧ್ಯಕ್ಷರಾಗಿದ್ದ ಶ್ರೀ ಎಂ ಸಿದ್ದೇಗೌಡ (ನಿವೃತ್ತ ಎಲ್‌ಐಸಿ ಅಭಿವೃದ್ಧಿ ಅಧಿಕಾರಿ) ಇವರನ್ನು ಬದಲಿಸಿ ನೂತನ ಅಧ್ಯಕ್ಷರಾಗಿ
ಶ್ರೀ ವಿ.ನಾರಾಯಣಪ್ಪರವರು
ಆಯ್ಕೆ ಮಾಡಿದ ಎಲ್ಲಾ ಟ್ರಸ್ಟಿಗಳಿಗೂ ಹಾಗೂ ಶ್ರೀ ವಿ.ನಾರಯಣಪ್ಪರವರಿಗೂ ಹೃತ್ಪೂರ್ವಕ ಅಭಿನಂದನೆಗಳು
ಶುಭಕೋರುವವರು: ರಮೇಶ್ ಹಾಗೂ ಎಲ್ಲಾ ಸಿಬ್ಬಂದಿವರ್ಗದವರು, ವಿನಾಯಕ ವೈನ್ಸ್, ಯರಗನಹಳ್ಳಿ, ಮೈಸೂರು

ಭಾರತೀಯ ವಿದ್ಯಾ ಭವನ
ಸಿಎ-14, ಕಾಳಿದಾಸ ರಸ್ತೆ ಕ್ರಾಸ್, 1ನೇ ಹಂತ, ವಿಜಯನಗರ, ಮೈಸೂರು-570017
ಫೋ: 0821-2416106 / 2412141
ಇಮೇಲ್: bvbmysore@gmail.com

ಬೇಕಾಗಿದ್ದಾರೆ

- **ಸಂಸ್ಕೃತ ಶಿಕ್ಷಕರು (ಪ್ರೌಢಶಾಲೆಗೆ)**
ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿ/ಸ್ನಾತಕೋತ್ತರ ಪದವೀಧರರು ಬಿ.ಎಡ್/ಎಂ.ಎಡ್ ಆಗಿರಬೇಕು.
5 ವರ್ಷಕ್ಕಿಂತ ಹೆಚ್ಚಿನ ಅನುಭವ ಇರುವವರಿಗೆ ಆದ್ಯತೆ

ವೇತನ ಮತ್ತು ಅಗತ್ಯ ಸೌಲಭ್ಯಗಳು ಮೈಸೂರಿನಲ್ಲಿರುವ ಉತ್ತಮ ಶಾಲೆಗಳಿಗನುಗುಣವಾಗಿ ಇರುತ್ತವೆ.
ಹೆಚ್ಚಿನ ಮಾಹಿತಿಗಾಗಿ ಮೇಲಿನ ವಿಳಾಸವನ್ನು ಸಂಪರ್ಕಿಸಿ
ಸಹಿ/-ಗೌರವ ಕಾರ್ಯದರ್ಶಿಗಳು

NOT GETTING YOUR STAR OF MYSORE & ಮೈಸೂರು ಮಿತ್ರ
Call: 98452-96447 / 99003-82840

8ನೇ ವರ್ಷದ ಪುಣ್ಯಸ್ಮರಣೆ



ಎಸ್.ಮೊಗಣ್ಣೇಗೌಡ
(ನಿವೃತ್ತ ಸ್ಕೂಲ್ ಮಾಸ್ಟರ್)
ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಪತ್ನಿ ಮಹದೇವಮ್ಮ, ಸಾಕಮ್ಮ, ಮಂಜುನಾಥ, ಗಣೇಶ, ಶ್ರೀಧರ, ವರಲಕ್ಷ್ಮಿ, ಜ್ಯೋತಿ ಮತ್ತು ಕುಟುಂಬವರ್ಗದವರು.

SUPERMARKET FURNITURE FOR SALE
For immediate settlement within 3 days
Please call:
9844444040

ವಾಣಿಜ್ಯ ಪದವೀಧರರೇ ಗಮನಿಸಿ
ಟ್ಯಾಲಿಯಲ್ಲಿ ತರಬೇತಿ ಪಡೆಯಿರಿ ಹಾಗೂ ಉದ್ಯೋಗ ಗಳಿಸಿರಿ.
ತಕ್ಷಣವೇ ಉದ್ಯೋಗ ಪಡೆದುಕೊಳ್ಳಬಹುದು
ವಯಸ್ಸಿನ ಮಿತಿ ಇಲ್ಲ. ಗೃಹಿಣಿಯರಿಗೂ ಅವಕಾಶ.
ತರಗತಿಗಳು ಪ್ರಾರಂಭ 1-4-2024 ರಿಂದ
ಸಂಪರ್ಕಿಸಿ: ಗ್ಲೋಬಲ್ ಅಕೌಂಟ್ಸ್
Call: 9448022967, 8861006220

ಮೈಸೂರು ಮಿತ್ರ 44
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

2ನೇ ವರ್ಷದ ಸವಿನೆನಪು



ಪ್ರಕಾಶ್ (ಭಟ್ಟರು)
ಮಾಲೀಕರು, ಚಾಮುಂಡೇಶ್ವರಿ ಮೆಸ್, ಇಟ್ಟಿಗೆಗೂಡು, ಮೈಸೂರು
ದುಃಖತಪ್ತರು: ಕುಟುಂಬವರ್ಗ

NYPUNYA SCHOOL OF EXCELLENCE
Timings : 6.30 - 7.30am, 7.30 - 8.30am
4.30 - 5.30pm, 5.30 - 6.30pm
Swimming SUMMER CAMP
Ph : 7019835426

Kodava Samaja Cultural & Sports Club
Vijayanagar 1st Stage, Mysore
Badminton Summer Camp 2024
Batch 1 1st April to 30th April 2024
Batch 2 1st May to 30th May 2024
BATCH TIMINGS:
Group 1: 10.00AM to 11.30AM
Group 2: 03.00PM to 04.30PM
Group 3: 04.30PM to 06.00PM
For further details contact:
9066723007 / 8495816394

ANAND BROTHERS FAMILY STORE
BUY 3 GET 1
BUY 1 GET 1 FREE
OFFER AVAILABLE ON 10+ INSTA ACCOUNT SHARES
FOR UGADI AND RAMZAAN
SAREES, DRESS, KURTIES, JEANS TOPS WESTREN WARES, KIDS WARE, MENS WARES ONLINE AND OFFLINE
ALL FAMILY SHOPPING AND WANTED 1000 + SALES GIRLS AND BOYS FOR SALES JOB GANDHI SQUARE, MYSORE
9606565552 - 7406788889

ಮೈಸೂರು ಮಿತ್ರ
ವಾರ್ಷಿಕೋತ್ಸವ ವಿಶೇಷ ಸಂಚಿಕೆ

"ಮೈಸೂರು ಮಿತ್ರ" ತನ್ನ ಓದುಗರು ಹಾಗೂ ಜಾಹೀರಾತುದಾರರ ಸೇವೆಯಲ್ಲಿ ಏಪ್ರಿಲ್ 16, 2024ಕ್ಕೆ 44 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 45ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಹಾಗಾಗಿ ಜಾಹೀರಾತುದಾರರಿಗೆ ಇದೊಂದು ಸುಸಮಯ. ಮುದ್ರಣದ ದೃಷ್ಟಿಯಿಂದ ತಮ್ಮ ಜಾಹೀರಾತುಗಳನ್ನು ಏಪ್ರಿಲ್ 10, 2024 ರೊಳಗೆ ನೀಡಬೇಕಾಗಿ ಕಳಕಳಿಯ ಮನವಿ.

ಪ್ರಧಾನ ಕಛೇರಿ
0821-2496522, 2496523, 0821-2496520 (5 ಲೈನುಗಳು)
ಮರಿಯ ಫರ್ನಾಂಡೀಸ್, ಜಾಹೀರಾತು ವ್ಯವಸ್ಥಾಪಕರು: 9448525060
ಜಾಯ್ ಆಂಥೋಣಿ ಡೋವ್: 8951668960
ಪ್ರೇಮ: 9880549879
ಕೆ.ಆರ್. ಸರ್ಕಲ್ ಕಛೇರಿ: 0821-2431774
ದೇವರಾಜ ಅರಸ್ ರಸ್ತೆ ಕಛೇರಿ: 0821-2428695

ಕೊಡಗು — ಪ್ರಸಾದ್, ಪೂಜಾ ಆರ್ಕೆಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ, 9731469871

ಹುಣಸೂರು — ಕೆ. ಕೃಷ್ಣ (ಕೆ.ಕೆ.), EWS 204, KHB ಕಾಲೋನಿ, ಹುಣಸೂರು. 9448720626

ಮಂಡ್ಯ — ಕೆ. ಮೋಹನ್‌ರಾಜ್, 3ನೇ ಕ್ರಾಸ್, ಅಶೋಕನಗರ, ಮಂಡ್ಯ, 8762960325

ಶ್ರೀರಂಗಪಟ್ಟಣ — ವಿನಯ್ ಕಾರೇಕುರ, ಶ್ರೀರಂಗಪಟ್ಟಣ, 9686893234

ಯಳಂದೂರು — ವಿ.ನಾಗರಾಜು, ಮೈತ್ರಿ ಮೆಡಿಕಲ್, ಬಳೆಪೇಟೆ, ಯಳಂದೂರು, 9844349191

ಚಾಮರಾಜನಗರ — ಸಿದ್ದಲಿಂಗಸ್ವಾಮಿ, ಸಿ.ಹೆಚ್.ಆರ್. ಕಾಂಪ್ಲೆಕ್ಸ್, ಸರ್ಕಾರಿ ಆಸ್ಪತ್ರೆ ಎದುರು, ಚಾಮರಾಜನಗರ, 9242265657

ಟಿ. ನರಸೀಪುರ — ಕುಮಾರ್, ಸಾರ್ವಜನಿಕ ಆಸ್ಪತ್ರೆ ರಸ್ತೆ, ಆರ್ಯ ಮಹಲ್ ಛತ್ರದ ಎದುರು, ಟಿ. ನರಸೀಪುರ. 9986719590

ಗುಂಡ್ಲುಪೇಟೆ — ಸೋಮಶೇಖರ್, ದ.ರಾ. ಬೇಂದ್ರೆ ನಗರ, ಅಶ್ವಿನಿ ಲೇಔಟ್,ಗುಂಡ್ಲುಪೇಟೆ. 9845995426

ಕೆ.ಆರ್. ನಗರ — ಕೆ.ಬಿ. ರಮೇಶ್, ಸ್ನೇಹ ಎಂಟರ್ ಪ್ರೈಸಸ್, ವಿ.ವಿ.ರಸ್ತೆ, ಕೆ.ಆರ್. ನಗರ. 9448021368

ಮಳವಳ್ಳಿ — ಶಿವಶಂಕರ, ನಂ.47, 1ನೇ ಕ್ರಾಸ್, ಎನ್.ಇ.ಎಸ್ ಮಳವಳ್ಳಿ ಟೌನ್-571430, 9632407806

ಕೊಳ್ಳೇಗಾಲ — ರಾಜು, ಮೈಸೂರು ಮಿತ್ರ ರಿಪೋರ್ಟರ್, #101, ಹುರಳಿಕೇರಿ ಬೀದಿ, ಕೊಳ್ಳೇಗಾಲ, 9916621007

ಹಾಸನ — ಆರ್.ಎನ್.ಸೋಮೇಶ್‌ಗೌಡ, ಹೋಲಿ ಚಿಲ್ಡ್ರನ್ ಶಾಲೆ ಹತ್ತಿರ, ಜಯನಗರ, 1ನೇ ಹಂತ, 2ನೇ ಕ್ರಾಸ್, ಹಾಸನ. 9448401175

ಕುಶಾಲನಗರ — ರಘು, ಮೈಸೂರು ಮಿತ್ರ ರಿಪೋರ್ಟರ್, ಮನು ಪ್ರೆಸ್, ಐ.ಬಿ.ರಸ್ತೆ, ಕುಶಾಲನಗರ, 9845698401

ಜಯಪುರ — ಬಿಳಿಗಿರಿ, ಜಯಪುರ, 9945479288

ಪಿರಿಯಾಪಟ್ಟಣ — ವೀರೇಶ್, ಪಿರಿಯಾಪಟ್ಟಣ, 8660057128

ವಿರಾಜಪೇಟೆ — ಮಂಜುನಾಥ, ವಿರಾಜಪೇಟೆ, 9900949353

ಕೆ.ಆರ್.ಪೇಟೆ — ಶ್ರೀನಿವಾಸ, ಅಗ್ರಹಾರ ಬಾಚಹಳ್ಳಿ, ಕೆ.ಆರ್.ಪೇಟೆ, 9449326847, 7022757438

ಹೆಚ್.ಡಿ.ಕೋಟೆ — ಮಂಜುನಾಥ ಎಸ್., ಹೆಚ್.ಡಿ.ಕೋಟೆ, 9483574452

ಕೆ.ಎಂ.ದೊಡ್ಡಿ — ಸತೀಶ್ ಎ.ಎಲ್, ಕೆ.ಎಂ.ದೊಡ್ಡಿ, 9242120338

ನಂಜನಗೂಡು — ರಂಗಸ್ವಾಮಿ, ನಂ.4565, ಕಬಿನಿ ಕಾಲೋನಿ ಹಿಂಭಾಗ, ನೀಲಕಂಠ ನಗರ, ನಂಜನಗೂಡು ಟೌನ್-571301, 9901602226

ಹುಣಸೂರು — ಹೆಚ್.ಆರ್. ಕೃಷ್ಣಕುಮಾರ್ (ಜಿಪ್ ರಾಮೇಗೌಡ), ನಂದಿನಿ ಮಾರಾಟ ಕೇಂದ್ರ, ಮಾರುತಿ ಪೆಟ್ರೋಲ್ ಬಂಕ್ ಹತ್ತಿರ, ಹಳೆಯ ಬಿ.ಎಂ. ರಸ್ತೆ ಹತ್ತಿರ, ಹುಣಸೂರು, 9060406093

ಕೊಳ್ಳೇಗಾಲ — ನಾಗೇಂದ್ರ ಸ್ವಾಮಿ, ನಂ.7ಎ, 684, 14 ನೇ ಕ್ರಾಸ್, ಬಸವೇಶ್ವರ ನಗರ, ಕೊಳ್ಳೇಗಾಲ, 9448576247, 7899849858

